ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ಏಪ್ರಿಲ್ 8, 2009 ರೂ. 12/-

ಮದಕರಿ ಮಾತಿನ ಲಹರಿ



ೂಜಮಲ್ಲಿಗೆ ಸೋನಿಯಾ





ುನಾವಣೆ

ತಂತ್ರ-ಅತಂತ್ರ



ಕಪಾಲಿ ಸ್ಕೆಚ್!

ಪೋಣೆ ಫಿನಿಷ್

ಮಿಶ್ರಾಗಳು, ವರುಣ್ ಗಾಂಧಿಗಳು...... ಭಾರತದ 'ಸುಶಿಕ್ಷಿತ' ಮಧ್ಯಮ ವರ್ಗದ ಹಿಟ್ಲರ್‌ಗಳು

ಚಾರ್ವಾಕ

ಶಿವಸುಂದರ್

"ಎನ್‌ಡಿಎ ಸರ್ಕಾರವು ಅಧಿಕಾರದಲ್ಲಿದ್ದಾಗ ಗೋಲ್ಡನ್ ಕ್ವಾಡ್ರಾಂಗಲ್ (ಕನ್ಯಾಕುಮಾರಿಯಿಂದ ಕಾಶ್ಮೀರದ ತನಕ ಸುವರ್ಣ ಚತುಷ್ಪಥ ಹೆದ್ದಾರಿ ಯೋಜನೆ), ಖಾಸಗೀಕರಣ, ನದಿ ಜೋಡಣೆ, ಟೆಲಿಕಾಂ ಮತ್ತು ವಿಮೆ ಸುಧಾರಣೆಗಳಂತ ದಾರ್ಶನಿಕ ಯೋಜನೆಗಳ ಮೂಲಕ ಭಾರತ ನಿಜಕ್ಕೂ ಪ್ರಕಾಶಿಸುವಂತೆ ಮಾಡಿತ್ತು. ಆದರೆ 2004ರ ಚುನಾವಣೆಯಲ್ಲಿ ನಗರ ಕೇಂದ್ರಿತ ಚುನಾವಣಾ ಪ್ರಚಾರ ಮತ್ತು ಕೆಟ್ಟ ಪಕ್ಷ ಹೊಂದಾಣಿಕೆಗಳಿಂದ ಸೋಲನ್ನು ಅನುಭವಿಸಿತು. ಆದರೆ ಯುಪಿಎ ಸರ್ಕಾರ ಎನ್‌ಡಿಎಯ ಎಲ್ಲಾ ಯೋಜನೆಗಳನ್ನು ಹಾಳುಗೆಡವಿತು. ಆದ್ದರಿಂದ ನಾನು ಬಜೆಪಿ ಪಕ್ಷವನ್ನು ಸೇರುತ್ತಿದ್ದೇನೆ."

ಇದು ಟೈಮ್ಸ್ ಆಫ್ ಇಂಡಿಯಾ ಗುಂಪಿನವರು ಕಳೆದ ವರ್ಷ ನಡೆಸಿದ 'ಲೀಡ್ ಇಂಡಿಯಾ' ಆಂದೋಲನದಲ್ಲಿ ಪ್ರಥಮ ಸ್ಥಾನ ಪಡೆದ ಬೆಂಗಳೂರಿನ ಆರ್.ಕೆ. ಮಿಶ್ರಾ ಹೋದವಾರ ಬಜೆಪಿ ಪಕ್ಷಕ್ಕೆ ಸೇರುವಾಗ ನೀಡಿದ ಹೇಳಿಕೆ. ಅವರು ಈ ಪ್ರಶಸ್ತಿ ಗೆದ್ದಾಗ, ವಿಶ್ವಸುಂದರಿ ಸ್ಪರ್ಧೆಯಲ್ಲಿ ಗೆದ್ದ ಪ್ರತಿಯೊಬ್ಬ ಸುಂದರಿಯೂ ಸಮಾಜ ಸೇವೆಯ ಬಗ್ಗೆಯೇ ಮಾತಾಡುವಂತೆ, ತಾವು ಸಹ ಯಾವ ಪಕ್ಷಕ್ಕೂ ಸೇರದೆ ಜನಸೇವೆ ಮಾಡುವುದಾಗಿ ಘೋಷಿಸಿದ್ದರು. ಹಾಗೆ ಹೇಳಿ ತಿಂಗಳು ಕಳೆಯುವ ಮುನ್ನವೇ "ಫ್ರೆಂಡ್ಸ್ ಆಫ್ ಬಜೆಪಿ" ಎಂಬ ವೆಬ್ ಗುಂಪನ್ನು ಇತರ ಕಟ್ಟರ್ ಆರೆಸ್ಸೆಸ್‌ವಾದಿಗಳೊಡನೆ ಸೇರಿ ಹುಟ್ಟು ಹಾಕಿದರು. ಅದಾಗಿ ಕೆಲವು ತಿಂಗಳು ಕಳೆಯುವ ಮುನ್ನವೇ ಯಡಿಯೂರಪ್ಪ ಪ್ರಜಾತಂತ್ರದ ನಿಯಮಗಳಿಗೆ ವಿರೋಧವಾಗಿ ರಚಿಸಿರುವ 'ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್' ಹಾಗೂ ಇನ್ನಿತರ ಲಾಭದಾಯಕ ಸಮಿತಿಗಳಿಗೆ ನೇಮಕಗೊಂಡರು.




ಇರಲಿ. ಇವೆಲ್ಲಾ ಈ ದೇಶದ ಲೀಡರ್ ಆಗಲು ಅಗತ್ಯವಾಗಿ ಬೇಕಾಗಿರುವ ವಚನಭ್ರಷ್ಟತೆ ಎಂದು ಕೊಳ್ಳೋಣ. ಆದರೆ ಟೈಮ್ಸ್ ಆಫ್ ಇಂಡಿಯಾ ಎಂಬ ಕಾರ್ಪೊರೇಟ್ ಮಾಧ್ಯಮ ಸಂಸ್ಥೆಯು ಸ್ಪರ್ಧಿಸಿದ್ದ 38000 ಪ್ರತಿಭಾನ್ವಿತ ಮಧ್ಯಮ ವರ್ಗದವರ ನಡುವಿನಿಂದ ಹುಡುಕಿ ತೆಗೆದ ಆರ್.ಕೆ. ಮಿಶ್ರಾ ಎಂಬ ಈ ನವನಾಯಕಮಣಿಯ ರಾಜಕೀಯ ಮತ್ತು ಚಿಂತನಾ ವರಸೆಗಳು ಮುಖ್ಯವಾಗುವುದು, ಈತ ಜಾಗತೀಕರಣದ ಫಲಾನುಭವಿಗಳಾಗಿ ಸೃಷ್ಟಿಯಾದ ನವ ಮಧ್ಯಮ ವರ್ಗದ ಸಾಂಕೇತಿಕ ಪ್ರತಿನಿಧಿಯಾಗಿರುವುದರಿಂದ. ಆ ವರ್ಗದ ಅವಕಾಶವಾದಿ ಮತ್ತು ಮಾನವ ವಿರೋಧಿ ಮೌಲ್ಯಗಳಿಗೆ ಪ್ರತಿನಿಧಿಯಾಗಿರುವುದರಿಂದ.

ಈತ ಲೀಡ್ ಇಂಡಿಯಾ ಪ್ರಶಸ್ತಿ ಪಡೆದ ನಂತರ ಈತನಂತೆಯೇ ಜಾಗತೀಕರಣದ ನೀತಿಗಳ ಅತಿ ದೊಡ್ಡ ಫಲಾನುಭವಿ ಉದ್ಯಮಿಗಳಾದ ಬಯೋಕಾನ್‌ನ ಕಿರಣ್ ಮಜುಂದಾರ್ ಶಾ ಹಾಗೂ ಇನ್ನಿತರರು ಆತನು ನಿಜಕ್ಕೂ ತಮ್ಮ ವರ್ಗದ ಸೇವೆ ಮಾಡಲು ಅರ್ಹನಾಗಿದ್ದಾನೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲೋ ಎಂಬಂತೆ ಬಹಿರಂಗ ಸಂದರ್ಶನ (ವಿಚಾರಣೆ) ನಡೆಸಿದರು.

ಅದರಲ್ಲಿ "ನೀನು ಅಧಿಕಾರಕ್ಕೆ ಬಂದರೆ ಮಾಡುವ ಮೊದಲ ಕೆಲಸ ಏನು" ಎಂಬ ಪ್ರಶ್ನೆಗೆ "ಹೆದ್ದಾರಿ, ವಿಮಾನ ನಿಲ್ದಾಣ ಇನ್ನಿತರ ಮೂಲಭೂತ ಸೌಕರ್ಯಗಳಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಯಾರೂ ಅಡ್ಡಿಬರದಂತೆ ಕಾನೂನನ್ನೇ ಬದಲಾಯಿಸುತ್ತೇನೆ" ಎಂದರು ಈ ಲೀಡರ್. ನೈಸ್ ರಸ್ತೆಯ ಬಗ್ಗೆ ಕೇಳಿದಾಗ ಕೆಲವೇ ವ್ಯಕ್ತಿಗಳ ಕಾರಣದಿಂದ ಅದು ಜಾರಿಯಾಗದೆ ಇರುವುದು ಈ ದೇಶದ ದೊಡ್ಡ ದುರಂತವೆಂದದ್ದೂ ಸಹ ಈ ಲೀಡ್ ಇಂಡಿಯಾ ನಾಯಕನೇ.

ಎನ್‌ಡಿಎ ಸರ್ಕಾರದ ಅವಧಿ ಭಾರತದ ಸುವರ್ಣ ಯುಗ ಎಂದು ತನ್ನ ಬ್ಲಾಗ್‌ನಲ್ಲಿ ಬರೆದುಕೊಳ್ಳುವ ಈ ಲೀಡರ್ ಕಣ್ಣಿಗೆ ಅದೇ ಅವಧಿಯಲ್ಲಿ 1.5 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಕಂಡೇ ಇಲ್ಲ, ಈ ದೇಶದಲ್ಲಿ ಅತ್ಯಂತ ಹೆಚ್ಚು ಅಭಿವೃದ್ಧಿಯ ಸಾಧನೆ ಮಾಡಿರುವುದು ಗುಜರಾತ್ ಸರ್ಕಾರ ಎಂದು ಕಿಂಚಿತ್ತೂ ಮುಜುಗರವಿಲ್ಲದೆ ಹೇಳಿಕೊಳ್ಳುವ ಈ ನವಮಧ್ಯಮ ವರ್ಗದ ನಾಯಕ ಗುಜರಾತ್ ಹತ್ಯಾಕಾಂಡದ ಕ್ರೌರ್ಯದ ಬಗ್ಗೆ ಕಿಂಚಿತ್ತೂ ವ್ಯಥೆ ವ್ಯಕ್ತಪಡಿಸುವುದಿಲ್ಲ, ಲೀಡ್ ಇಂಡಿಯಾ ಸ್ಪರ್ಧೆಯಲ್ಲಿದ್ದಾಗ ಈ ದೇಶದ ರಾಜಕಾರಣಿಗಳು ವಂಶ ಪಾರಂಪರ್ಯ ಪದ್ಧತಿ ಅನುಸರಿಸುತ್ತಿರುವ ಬಗ್ಗೆ ತನ್ನ ಬ್ಲಾಗ್‌ನಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದ ಈತ ಬಜೆಪಿ ಸೇರಿದ ದಿನ ಪತ್ರಕರ್ತರು ಯಡಿಯೂರಪ್ಪ ತನ್ನ ಮಗನನ್ನೇ ಚುನಾವಣೆಗೆ ನಿಲ್ಲಿಸುತ್ತಿರುವ ಬಗ್ಗೆ ಮಠಮಾನ್ಯಗಳಿಗೆ ಬೊಕ್ಕಸದಿಂದ ಹಣ ನೀಡುತ್ತಿರುವ ಬಗ್ಗೆ, ಹಿಂದೂ ಸಮಾಜೋತ್ಸವಗಳೆಂಬ ಕೋಮುವಾದಿ ಕಾರ್ಯಕ್ರಮಗಳ ಬಗ್ಗೆ ಕೇಳಿದಾಗ ನಾಚಿಕೆಯಿಲ್ಲದೆ ಸಮರ್ಥಿಸಿಕೊಂಡಿದ್ದು ಮಾತ್ರವಲ್ಲದೆ ಅಭಿವೃದ್ಧಿ ಎಂಬುದು ಮುಖ್ಯವೇ ಹೊರತು ಇವ್ಯಾವುದೂ ಅಲ್ಲ ಎಂದು ಘೋಷಿಸಿದ.

ಭಾರತದ ನವ ಮಧ್ಯಮ ವರ್ಗದ ಪ್ರತಿನಿಧಿಯಾದ ಈ ಮಿಶ್ರಾನ ಅಭಿವೃದ್ಧಿಯಲ್ಲಿ ಭಾರತದ ಬಡವರಿಗೆ ಸ್ಥಾನವಿಲ್ಲ, ಈ ದೇಶದ ಪ್ರಜಾಪ್ರಭುತ್ವದಲ್ಲಿ ಅವರು ಪ್ರಜೆಗಳೇ ಅಲ್ಲ, ಬಡವರಿಗೇನಿದ್ದರೂ ಒಂದೆರಡು ಹೊತ್ತು ಕೂಳು ಕೊಟ್ಟು ಕೂಲಿ ತೆಗೆದುಕೊಳ್ಳಲು ಏನು ಮಾಡಬೇಕೋ ಅಷ್ಟು ಮಾಡಬೇಕು. ದೇಶದ ಅಭಿವೃದ್ಧಿಯೆಂದರೆ ದೊಡ್ಡ ರಸ್ತೆ ವಿಮಾನ ನಿಲ್ದಾಣ, ಮಾಲ್‌ಗಳು. ಈ ಅಭಿವೃದ್ಧಿ ಪಥದಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಿಕೊಳ್ಳಲು ಮೋದಿಯಂತವರು ಗುಜರಾತ್ ಹತ್ಯಾಕಾಂಡಗಳನ್ನು ನಡೆಸಿದರೆ ಅದು ಅನಿವಾರ್ಯ. ಇದು ಭಾರತದ ನವ ಮಧ್ಯಮ ವರ್ಗದ ಫ್ಯಾಸಿಸ್ಟ್ ಚಿಂತನೆ. ಬರಲಿರುವ ಚುನಾವಣೆಯಲ್ಲಿ ತನ್ನಂತೆ ಯೋಚಿಸುವ ಆದರೆ ವೋಟು ಹಾಕಲು ಮುಂದೆ ಬರದ ಮಧ್ಯಮ ವರ್ಗದ ಒಂದು ವಿಭಾಗವನ್ನು ಬಜೆಪಿಗೆ ಅಂದರೆ ಫ್ಯಾಸಿಸಂಗೆ ಓಟು ಹಾಕುವಂತೆ ಮಾಡುವುದೇ ಈ ದೇಶದ ಅಭಿವೃದ್ಧಿಗೆ ಮಿಶ್ರಾನ ತತ್ಕ್ಷಣದ ರಣತಂತ್ರವಂತೆ!



ಈ ಆರ್.ಕೆ. ಮಿಶ್ರಾ ಮಧ್ಯಮ ವರ್ಗದ ಒಂದು ಚಿಂತನಾಧಾರೆಗೆ ಉದಾಹರಣೆಯಾದರೆ, "ಈ ದೇಶದಲ್ಲಿ ಹಿಂದೂಗಳ ವಿರುದ್ಧ ಯಾರಾದರೂ ಮಾತಾಡಿದರೆ ಗೀತಾದ ಮೇಲಾಣೆ ಅವರ ಕೈ ಕತ್ತರಿಸುತ್ತೇನೆ" ಎಂದು ಮುತಾಲಿಕನ ಮರಿತಮ್ಮನಂತೆ ದ್ವೇಷ ಕಾರಿಕೊಂಡಿರುವ ವರುಣ್ ಗಾಂಧಿ ಮತ್ತವನನ್ನು ಸಮರ್ಥಿಸುವ ಸುಶಿಕ್ಷಿತ ವರ್ಗ, ಹೆಚ್ಚುತ್ತಿರುವ ಮಧ್ಯಮ ವರ್ಗದ ಫ್ಯಾಸೀಕರಣಕ್ಕೆ ಮತ್ತೊಂದು ಉದಾಹರಣೆ. ವರುಣ್ ಗಾಂಧಿ ಏನೆಲ್ಲಾ ಮಾತಾಡಿದ ಮತ್ತು ಅವೆಷ್ಟು ಕೋಮುದ್ವೇಷದಿಂದ ಫ್ಯಾಸಿಸ್ಟ್ ಭಾವನೆಗಳಿಂದ ಕೂಡಿದ್ದವು ಎಂಬುದು ಈಗ ವಿಷಯವೇ ಅಲ್ಲ. ಈಗ ಗಮನಿಸಬೇಕಾದ ಬೆಳವಣಿಗೆ ಎಂದರೆ ವರುಣ್ ಗಾಂಧಿಯಂತ ಸುಶಿಕ್ಷಿತ, ಶ್ರೀಮಂತ ವರ್ಗದ ಯುವಕನೊಬ್ಬ ಬಹಿರಂಗವಾಗಿ ಮತ್ತು ಹಸಿಹಸಿಯಾಗಿ ಇಂಥ ಹೇಳಿಕೆಯನ್ನು ನೀಡುವುದು. ಅದರ ಬಗ್ಗೆ ಸಕಾರಣವಾಗಿ ಟೀಕೆ ವ್ಯಕ್ತವಾದರೂ ಕಿಂಚಿತ್ತೂ ನಾಚಿಕೆ ಪಡದಿರುವುದು. ಯಾವುದೇ ಸೆನ್ಸ್ ಆಫ್ ಶೇಮ್ ಇಲ್ಲದೆ ಅದನ್ನು ಸಾರ್ವಜನಿಕವಾಗಿ ಸಮರ್ಥಿಸಿಕೊಳ್ಳುವುದು. ಇಂಥಾ ಅನಾಗರಿಕ ಮತ್ತು ಸಂವಿಧಾನ ವಿರೋಧಿ ಅಭಿಪ್ರಾಯವನ್ನು ದಕ್ಕಿಸಿಕೊಳ್ಳಬಹುದೆನ್ನುವ ಮಟ್ಟಿಗೆ ನಮ್ಮ ಸಾರ್ವಜನಿಕ ಜೀವನ ಕೋಮುವಾದೀಕರಣಗೊಂಡಿರುವುದು. ಇವು ಇಂದು ನಾಗರಿಕ ಸಮಾಜವನ್ನು ಬಯಸುವವರೆಲ್ಲರನ್ನೂ ಕಾಡಬೇಕಾದ ಪ್ರಶ್ನೆ.

ಇಂಥ ಘನಘೋರ ಅಪರಾಧವ್ನೂ ಸಹ ದೇಶಪ್ರೇಮವೆಂಬಂತೆ , ಮಾಡಿರುವುದು, ವರುಣ್ ಗಾಂಧಿಯ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಮೂಲಕ ಸಾರ್ವಜನಿಕ ಜೀವನದ ನೈತಿಕತೆಯನ್ನು ಮತ್ತು ರಾಜಕೀಯ ಮೌಲ್ಯಗಳನ್ನು ಹದಗೆಡಿಸುತ್ತಿರುವುದು ಬಜೆಪಿ ಪಕ್ಷವೇ ಆದರೂ ವರುಣ್ ಗಾಂಧಿಯನ್ನು ಒಂದು ಗಣನೀಯ ಸಂಖ್ಯೆಯ ಸುಶಿಕ್ಷಿತ ಮಧ್ಯಮ ವರ್ಗ ಬೆಂಬಲಿಸುತ್ತಿದೆ ಎಂಬುದನ್ನು ಮರೆಯುವಂತಿಲ್ಲ.

ಉದಾಹರಣೆಗೆ ಇಂಟರ್‌ನೆಟ್ ಪ್ರಾರಂಭವಾದ ಮೇಲೆ ಈ ಸುಶಿಕ್ಷಿತ ಮಧ್ಯಮ ವರ್ಗ ತಮ್ಮ ನಡುವೆ ರಾಜಕೀಯ ಮತ್ತು ಸಾಂಸ್ಕೃತಿಕ ಅಭಿಪ್ರಾಯಗಳನ್ನು ವಿನಿಮಯವನ್ನು ಮಾಡಿಕೊಳ್ಳಲು ಹಲವಾರು ವೆಬ್ ಪೇಜುಗಳನ್ನೂ ಮತ್ತು ಬ್ಲಾಗ್‌ಗಳನ್ನೂ ಸೃಷ್ಟಿಸಿಕೊಂಡಿದ್ದಾರೆ. ಹಾಗೆಯೇ ಜಗತ್ತಿನೆಲ್ಲೆಡೆಯಿರುವ ಸುಶಿಕ್ಷಿತ ಕನ್ನಡಿಗ ಮಧ್ಯಮ ವರ್ಗವೂ ಸಹ ಹಲವಾರು ಅಂಥ ಇಂಟರ್‌ನೆಟ್ ತಾಣಗಳನ್ನು ಮಾಡಿಕೊಂಡಿದೆ. ಅದರಲ್ಲಿ ಮುಖ್ಯವಾದುದು www.churmuri.com ಎಂಬ ವೆಬ್‌ಸೈಟು. ಕೆಲವು ತಿಂಗಳ ಹಿಂದೆ ಸಂಪಾದಕಿ ಗೌರಿ ಲಂಕೇಶ್‌ರವರು ಕರ್ನಾಟಕವು ಗುಜರಾತ್ ದಾರಿಯಲ್ಲಿದೆ ಎಂಬ ಲೇಖನದಲ್ಲಿ ರಾಜ್ಯಾದ್ಯಂತ ಮುಸ್ಲಿಂ ಯುವಕರ ಮೇಲೆ ನಡೆಯುತ್ತಿರುವ ದಾಳಿ ಬಗ್ಗೆ ಕಮ್ಯುನಲಿಸಂ ಕಂಬಾಟ್ ಪತ್ರಿಕೆಗೆ ಬರೆದ ಲೇಖನವನ್ನು ಈ ವೆಬ್ ಸೈಟಿನಲ್ಲೂ ಪ್ರಕಟಿಸಿದ್ದರು. ಆ ಲೇಖನಕ್ಕೆ ಕಂಬಾಟ್ ಪತ್ರಿಕೆಗಾಗಲೀ, ಅಥವಾ ಸ್ವತಃ ಲಂಕೇಶ್‌ಗೆ ಎಂದೆಂದೂ ಬರದಷ್ಟು ಪ್ರತಿಕ್ರಿಯೆಗಳು ಬಂದವು. ಒಂದೇ ದಿನ 85 ಪ್ರತಿಕ್ರಿಯೆಗಳು ಆ ವೆಬ್ ಸೈಟಿಗೆ ಬಂದವಾದರೂ ಅದರಲ್ಲಿ ಗೌರಿಯವರ ನಿಲುವನ್ನು ಅಸಭ್ಯವಾಗಿ ತೆಗಳಿ ಬಂದ ಅಭಿಪ್ರಾಯಗಳು 70ಕ್ಕೂ ಹೆಚ್ಚು. ಅದೇ ವೆಬ್‌ಸೈಟು ಇತ್ತೀಚೆಗೆ ವರುಣ್ ಗಾಂಧಿಯ ದ್ವೇಷದ ಭಾಷಣದ ಬಗ್ಗೆ ತನ್ನ ಓದುಗರ ಅಭಿಪ್ರಾಯವನ್ನು ಕೇಳಿತ್ತು, ಅದಕ್ಕೆ ಪ್ರತಿಯಾಗಿ ಬಂದ ನೂರಾರು (ಪ್ರಾಯಶಃ ಸಾವಿರಾರು!) ಪ್ರತಿಕ್ರಿಯೆಗಳಲ್ಲಿ ಶೇ.55 ರಷ್ಟು ಜನ ವರುಣ್ ಗಾಂಧಿಯವರ ಅಭಿಪ್ರಾಯಕ್ಕೆ ಸಮ್ಮತಿಯನ್ನು ವ್ಯಕ್ತಪಡಿಸಿದರೆ, ಶೇ.24 ಜನ ಚುನಾವಣಾ ಆಯೋಗ ವರುಣ್ ಗಾಂಧಿಯನ್ನು ಹೀಗಳೆದ ಮೇಲೆ ಬಜೆಪಿಗೆ ವರುಣ್‌ನನ್ನು ಬೆಂಬಲಿಸದೆ ಗತ್ಯಂತರವಿರಲಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಆ ವೆಬ್ ಸೈಟಿನ ಸುಶಿಕ್ಷಿತ ಮಧ್ಯಮವರ್ಗದ ಓದುಗರಲ್ಲಿ ಶೇ.75ಕ್ಕೂ ಹೆಚ್ಚು ಜನ ವರುಣ್ ಗಾಂಧಿಯ ಹೇಳಿಕೆಯನ್ನು ಅಂದರೆ ಹಸಿಹಸಿ ಕೋಮುದ್ವೇಷವನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಮರ್ಥಿಸುತ್ತಿದ್ದಾರೆ ಎಂದಾಯಿತು!

ಇದು ಸ್ವತಂತ್ರ ಭಾರತದ ಮತ್ತೊಂದು ಆಘಾತಕಾರಿ ಬೆಳವಣಿಗೆ. ಪ್ರಪಂಚದ ಇತಿಹಾಸದಲ್ಲಿ ಫ್ಯಾಸಿಸಂನ ಬೆಳವಣಿಗೆಯಲ್ಲಿ ಮಧ್ಯಮ ವರ್ಗ ಯಾವತ್ತೂ ನಿರ್ಣಾಯಕ ಪಾತ್ರ ವಹಿಸಿದೆ. ಜರ್ಮನಿ ಮತ್ತು ಇಟಲಿಗಳಲ್ಲೂ ಫ್ಯಾಸಿಸ್ಟರು ಮತ್ತು ನಾಜಿಗಳು ಮಧ್ಯಮ ವರ್ಗವನ್ನು ಗೆದ್ದುಕೊಳ್ಳಲು ಮಧ್ಯಮ ವರ್ಗದ ಅಭದ್ರತೆಗಳನ್ನು ರಾಜಕೀಯ ದಾಳ ಮಾಡಿಕೊಂಡರು. ಭಾರತದಲ್ಲೂ ಸಹ ಮಧ್ಯಮ ವರ್ಗದ ಅಭದ್ರತೆಗಳನ್ನು ಬಜೆಪಿಯಂತ ಫ್ಯಾಸಿಸ್ಟ್ ಶಕ್ತಿಗಳು ಜತನದಿಂದ ಪೋಷಿಸುತ್ತಿವೆ. ಮಧ್ಯಮ ವರ್ಗದ ಮತ್ತು ಮೇಲ್ ಮಧ್ಯಮ ವರ್ಗದ ಸೌಕರ್ಯವೇ ನಿಜವಾದ ಅಭಿವೃದ್ಧಿಯೆಂದು ಜನರನ್ನು ಒಪ್ಪಿಸಲಾಗುತ್ತಿದೆ. ಹೀಗಾಗಿ ಈ ಮಧ್ಯಮ ವರ್ಗವೂ ಅಭಿವೃದ್ಧಿಯ ಹೆಸರಲ್ಲಿ ನಡೆಯುವ ಹಿಂಸೆಯನ್ನು ಸಮರ್ಥಿಸಿಕೊಳ್ಳುತ್ತಿದೆ. ಇದಕ್ಕಾಗಿ ಅಸಂಘಟಿತ ವರ್ಗದ ಬಗ್ಗೆ, ಸಮಾಜದ ಕೆಳವರ್ಗಗಳ ಬಗ್ಗೆ ಅವರಿಗಿರುವ ಅಸಹನೆಯನ್ನೂ 'ಅಭಿವೃದ್ಧಿ'ಗೊಳಿಸಿ ಅವರ ಮೇಲೆ ನಡೆಸುವ ಹಿಂಸೆಗೆ ಸಾಮಾಜಿಕ ಸಮರ್ಥನೆಯನ್ನು ರೂಢಿಸಿಕೊಳ್ಳಲಾಗುತ್ತಿದೆ. ಹೀಗಾಗಿಯೇ ನಮ್ಮ ದೇಶದಲ್ಲಿ ಕೋಮುವಾದ ಮತ್ತು ಮೇಲ್ ಮಧ್ಯಮ ವರ್ಗದ ಅಭಿವೃದ್ಧಿಯ ನಡುವೆ ಅವಳಿಜವಳಿ ಸಂಬಂಧವಿದೆ. ಆರ್.ಕೆ. ಮಿಶ್ರ ಮತ್ತು ವರುಣ್ ಗಾಂಧಿ ಈ ಪ್ರಕ್ರಿಯೆಯ ಎರಡು ಆಘಾತಕಾರಿ ಉದಾಹರಣೆಗಳು. ■

No Comments



"ಮಹಾನ್ ಮಾನವತಾವಾದಿ ಬಸವಣ್ಣ, ದಾಸರು ಹಾಗೂ ಸೂಫಿ ಸಂತರ ನಾಡಿನಲ್ಲಿ ಕೆಲವು ವರ್ಷಗಳಿಂದ ನಡೆಯುತ್ತಿರುವ ಕೋಮು ಸಂಘರ್ಷ ದುರದೃಷ್ಟಕರ. ಬಸವಣ್ಣನವರ ಆತ್ಮ ಇದನ್ನು ನೋಡಿದ್ದರೆ ಎಷ್ಟು ವ್ಯಥೆ ಪಡುತ್ತಿತ್ತೋ ಏನೋ?"

- ಸೋನಿಯಾ ಗಾಂಧಿ

"ದಾಳಿಗೊಳಗಾದ ಚರ್ಚಲ್ಲಿ ನಿರಂತರವಾಗಿ ಹಿಂದೂ ವಿರೋಧಿ ಚಟುವಟಿಕೆಗಳು ನಡೆಯುತ್ತಲೇ ಇತ್ತು, ಈ ಕಾರಣದಿಂದಲೇ ಚರ್ಚ್ ಮೇಲೆ ಹಿಂದೂಗಳು ದಾಳಿ ಮಾಡಿದ್ದು"

- ಸೋಮಶೇಖರ್ ಆಯೋಗದ ಮುಂದೆ ಹಿಂದೂತ್ವವಾದಿಯೊಬ್ಬನ ಸಾಕ್ಷಿ

"ಬಡತನದೊಂದಿಗೆ ಹೋರಾಟ ಮತ್ತು ಹವಾಮಾನ ಬದಲಾವಣೆಯ ನಿರ್ವಹಣೆ ಇವೆರಡು ಮುಂದಿನ ಶತಮಾನದ ಬಹುದೊಡ್ಡ ಸವಾಲಾಗಲಿದೆ."

- ಪ್ರೊ. ನಿಕೋಲಸ್ ಸ್ಟನ್

"ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ಭಾರತಕ್ಕೆ ಸಾರ್ವತ್ರಿಕ ಚುನಾವಣೆಯೇ ಮುಖ್ಯ, ರಂಜನೆ ಮತ್ತು ವ್ಯಾಪಾರಗಳ ಸಮ್ಮಿಶ್ರದಂತಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಖಂಡಿತಾ ಮುಖ್ಯವಾಗದು."

-ಪ್ರಜಾವಾಣಿಯ ಸಂಪಾದಕೀಯದಲ್ಲಿ

"ಈವರರೆಗೆ ಅತಿ ಹೆಚ್ಚು ನೀತಿಸಂಹಿತೆ ಉಲ್ಲಂಘನೆ ಆಗಿರುವುದು ಬೆಳಗಾವಿ ಮತ್ತು ಶಿವಮೊಗ್ಗದಲ್ಲಿ, ನಂತರದ ಸ್ಥಾನ ಬಳ್ಳಾರಿಯದ್ದೇ."

-ವಿದ್ಯಾಶಂಕರ್, ಮುಖ್ಯ ಚುನಾವಣಾಧಿಕಾರಿ

ನಂಬಿದ್ರೆನಂಬಿ ಬಿಟ್ರೆಬಿಡಿ



"ದೇಶದಲ್ಲಿನ ಚುನಾವಣೆಯನ್ನು ನಾವು ಗೌರವಿಸಬೇಕು. ಅದು ಐಪಿಲ್‌ಗಿಂತ ದೊಡ್ಡದು."

- ಶಾರುಖ್ ಖಾನ್

"ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರವು ಭೂಮಿಯನ್ನು ವಶಪಡಿಸಿಕೊಳ್ಳಬಹುದೆಂಬ ಕಾನೂನಿನನ್ವಯ ಇನ್ನು ಮುಂದೆ ಸಾರ್ವಜನಿಕ ಉದ್ದೇಶವೆಂದರೆ ಕೇವಲ ಶಾಲೆ-ಆಸ್ಪತ್ರೆಗಳು ಮಾತ್ರವಲ್ಲದೆ ಗಣಿಗಾರಿಕೆ, ರಸ್ತೆ, ಹೆದ್ದಾರಿ ಮತ್ತು ವಿಮಾನ ನಿಲ್ದಾಣ ವಿಸ್ತರಣೆಯಂತ ಚಟುವಟಿಕೆಗಳೂ ಆಗಿರುತ್ತವೆ."

-ಭೂವಶ ಕಾಯಿದೆಗೆ ಕೇಂದ್ರ ಸರ್ಕಾರ ತರುತ್ತಿರುವ ತಿದ್ದುಪಡಿಯ ಅಂಶಗಳು



"ನಾವು ಅಧಿಕಾರಕ್ಕೆ ಬಂದರೆ ಕೊಲ್ಕತ್ತಾವನ್ನು ಲಂಡನ್ ಮಾಡುತ್ತೇವೆ. ಉತ್ತರ ಬಂಗಾಳವನ್ನು ಸ್ವಿಟ್ಜರ್‌ಲ್ಯಾಂಡ್ ಮಾಡುತ್ತೇವೆ ಹಾಗೂ ಕರಾವಳಿ ನಗರವಾದ ದಿಘಾವನ್ನು ಗೋವಾದಂತೆ ಅಭಿವೃದ್ಧಿಪಡಿಸುತ್ತೇವೆ."

-ಮಮತಾ ಬ್ಯಾನರ್ಜಿ

"ಹಿಂದೂ, ಮುಸ್ಲಿಂ, ಕ್ರೈಸ್ತರನ್ನೆಲ್ಲಾ ಒಂದೇ ತಾಯಿಯ ಮಕ್ಕಳಂತೆ ಪೋಷಿಸುವ ಪಕ್ಷ ಬಜೆಪಿ ಪಕ್ಷ."

- ಯಡಿಯೂರಪ್ಪ

ಭಗವದ್ಗೀತೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಇನ್ನೂ ಕಷ್ಟ!

"ವರುಣ್ ಗಾಂಧಿ ಜನರಿಗೆ ಧರ್ಮೋಪದೇಶ ಮಾಡುವ ಮುನ್ನ ಒಮ್ಮೆ ಭಗವದ್ಗೀತೆಯನ್ನು ಓದಿ ಸರಿಯಾಗಿ ಅರ್ಥಮಾಡಿಕೊಳ್ಳಲಿ."

-ಪ್ರಿಯಾಂಕ ಗಾಂಧಿ

ಚಿಂತಕರ ಚಾವಡಿ

"ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳ ಮೇಲಾದರೂ ಈ ದೇಶದ ಶ್ರಮಶಕ್ತಿಯ ಶೇ.94ರಷ್ಟಿರುವ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಯ ಬಗ್ಗೆ ಯುಪಿಎ ಸರ್ಕಾರ ಒಂದು ಕಾಯಿದೆ ತರಲು ಪ್ರಯತ್ನಪಟ್ಟಿರುವುದು ಸ್ವಾಗತಾರ್ಹ. ಆದರೆ, ಈ ಹೊಸ ಕಾಯಿದೆಯು ಅಸಂಘಟಿತ ಕಾರ್ಮಿಕರ ಕಲ್ಯಾಣದ ಬಗ್ಗೆ ಸರ್ಕಾರವು ಹೊಸ ಕಲ್ಯಾಣ ಯೋಜನೆಯನ್ನು ರೂಪಿಸುವುದನ್ನೇನೂ ಕಡ್ಡಾಯ ಮಾಡುವುದಿಲ್ಲ, ಅಷ್ಟೇ ಅಲ್ಲದೆ, ಅದು ಅಸಂಘಟಿತ ಕಾರ್ಮಿಕರನ್ನು ಬಡತನದ ರೇಖೆಗಿಂತ ಕೆಳಗಿರುವವರು ಮತ್ತು ಮೇಲಿರುವವರು ಎಂದು ಅನ್ಯಾಯಯುತವಾಗಿ ಕೃತಕ ವಿಭಜನೆ ಮಾಡುತ್ತದೆ. ಮಾತ್ರವಲ್ಲ, ಒಂದು ರಾಷ್ಟ್ರೀಯ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದರ ಬಗ್ಗೆ ಮಾತೇ ಎತ್ತಿಲ್ಲ, ಅಲ್ಲದೆ ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸುವ ಬಗ್ಗೆ ಮತ್ತು ಮಹಿಳಾ ಕಾರ್ಮಿಕರ ಸಮಸ್ಯೆಗಳಾದ ಅಸಮಾನ ವೇತನ ಮತ್ತು ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದಂತ ವಿಷಯದ ಬಗ್ಗೆ ದಿವ್ಯ ಮೌನ ವಹಿಸುತ್ತದೆ."

-ಪ್ರಮೋತ್ ಗೋಸ್ವಾಮಿ

...ಂದೂತ್ವವಾದಿಗಳು ದಾಳಿ ಮಾಡಿದರು ಹಿಂದೂಗಳು ನಮ್ಮನ್ನು ರಕ್ಷಿಸಿದರು



ಕಂಡಹಾಗೆ

ಗೌರಿ ಲಂಕೇಶ್

...ಸ್ಟ್ ಸಂಘ ಪರಿವಾರಿಗಳ ಅಟ್ಟಹಾಸದಿಂದ ...ಕ ಸದೃಶದಂತಾಗಿರುವ ಕರಾವಳಿ ಪ್ರದೇಶದಿಂದ ... ಒಂದು ಹೃದಯಸ್ಪರ್ಶಿ ಪ್ರಕರಣ ಕುರಿತ ...ಂದು ಬಂದಿದೆ. ಆ ವರದಿಯನ್ನು ಬರೆದಿದ್ದು ...ನೂ' ಪತ್ರಿಕೆಯ ವರದಿಗಾರ ಸಂವರ್ತ. ಈ ...ಪತ್ರಕರ್ತ ಮನುಷ್ಯತ್ವ ಪರವಾದ ವರದಿಗಳನ್ನು ...ನೆಂಬ ಕಾರಣಕ್ಕೆ ಕಳೆದ ತಿಂಗಳು ಅಲ್ಲಿನ ...ರಳದ ಗೂಂಡಾಗಳು ಸಂವರ್ತನನ್ನು ಬೆದರಿಸಿದ್ದರು. ...ಪರವಾಗಿ ಬರೆಯದಿದ್ದರೆ ನೀನು ಅದು ಹೇಗೇ ...ರುತ್ತೀಯೋ, ನೋಡಿಕೊಳ್ಳುತ್ತೇವೆ" ಎಂದು ...ರು.

...ತಹ ಬೆದರಿಕೆಗಳಿಗೆ ಹೆದರದ ಸಂವರ್ತ ಮೊನ್ನೆ ...ನೂ' ಪತ್ರಿಕೆಯಲ್ಲಿ 'ಹಿಂದೂತ್ವವಾದಿಗಳು ನಮ್ಮ ...ಹಲ್ಲೆ ಮಾಡಿದರು, ಹಿಂದೂಗಳು ನಮ್ಮನ್ನು ... ರಕ್ಷಿಸಿದರು' ಎಂಬ ಶೀರ್ಷಿಕೆಯಡಿ ಒಂದು ...ನ್ನು ಬರೆದಿದ್ದರು. ನಮ್ಮ ಹೆಚ್ಚಿನ ಓದುಗರ ...ಅದು ಬಾರದಿರುವುದರಿಂದ ಅದರ ಅನುವಾದ ...ಲ್ಲಿ ನೀಡಿ ಈ ಪ್ರಕರಣ ಹೇಗೆ ಏಕಕಾಲದಲ್ಲಿ ...ಅಂಶಗಳಿಗೆ ಕನ್ನಡಿ ಹಿಡಿಯುತ್ತದೆ ಎಂದು ...ನೆ.

...ತ್ತು ಮತ್ತು ಬದುಕು-ಎಂಬ ಮಹಾ ಕಥನದಲ್ಲಿ ...ಟರು ಮತ್ತು ಚಿಕ್ಕನಟರೂ ಇದ್ದಾರೆ. ದೊಡ್ಡ ...ನಿರ್ದೇಶನಗಳನ್ನು ನೀಡುತ್ತಾರಾದರೂ ಅವರು ...ವವನ್ನು ಮುನ್ನಡೆಸುವವರಲ್ಲ. ಆದರೆ ಚಿಕ್ಕ ...ರಲ್ಲ ಅವರೇ ಈ ಜಗತ್ತು ಮತ್ತು ಬದುಕನ್ನು ...ಸುವವರು....

...ನೆಂದು ನನಗೆ ಅನಿಸಿದ್ದು ಮಾರ್ಚ್ 15 ರಂದು ... ಸಮಾಜೋತ್ಸವ ನಡೆದ ನಂತರದ ನಾಲ್ಕು ... ಸಂಭವಿಸಿದ 16 ಪ್ರಕರಣಗಳಿಗೆ ತುತ್ತಾದ ...ಅಮಾಯಕರನ್ನು ಭೇಟಿಯಾದಾಗ.

...ಿ ಹಿಂಸಾಕಾಂಡಕ್ಕೆ ಮೊದಲು ತುತ್ತಾದವರೇ ...ಡುಗರು. ಈ ಯುವಕರು-ಆರಿಫ್, ಅರಫ್, ... ಸಿರಾಜುದ್ದೀನ್, ಹಮೀದ್, ಸರ್ಫರಾಜ್, ...್ ಮತ್ತು ರಾಜೇಶ್-ಮಾರ್ಚ್ 15 ರಂದು ...ರದಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ ಭಾಗವಹಿಸಿ ...ನೆಗಳಿದ್ದ ಮುಲ್ಕಿಗೆ ಹಿಂದಿರುಗುತ್ತಿದ್ದರು. ಆದರೆ ...ಗಲಭೆ ಪ್ರಾರಂಭವಾಗಿ ಕಾಪು ಹತ್ತಿರ ವಾಹನ ...ಮಲ್ಲಿ ಸಿಲುಕಿಹಾಕಿಕೊಂಡರು. ರಸ್ತೆಯಲ್ಲಿ ...ೋ ಅಪಘಾತ ಸಂಭವಿಸಿ ಟ್ರಾಫಿಕ್ ಜಾಮ್ ...ಕೆಂದು ಭಾವಿಸಿದ ಅವರಿಗೆ ಕೋಮುಗಲಭೆ ...ದ್ದರ ಬಗ್ಗೆ ಒಂಚೂರು ಗೊತ್ತಿರಲಿಲ್ಲ. ಆಗ ... ಪ್ರಕಾರ ಪೊಲೀಸ್ ಪೇದೆಯೊಬ್ಬ ಅವರಿದ್ದ ...ತ್ತಿರ ಬಂದು ಅದರೊಳಗೆ ಮಹಿಳೆಯರಿದ್ದಾರೆಯೇ ... ವಿಚಾರಿಸಿದ. ಅವರೆಲ್ಲ "ಇಲ್ಲ" ಎಂದು ...ದರೂ ಕೂಡಲೇ ಅಲ್ಲಿಂದ ಓಡಿಹೋಗಲು ... ಪೇದೆ ಸೂಚಿಸಿದ.

ಇದಾದ ಕೆಲವೇ ನಿಮಿಷಗಳಲ್ಲಿ ಹಿಂದೂ ಸಮಾಜೋತ್ಸವ ದಿಂದ ಹಿಂದಿರುಗುತ್ತಿದ್ದ 20-40 ಜನರ ಗುಂಪು ಈ ಯುವಕರಿದ್ದ ಕಾರ್ ಅನ್ನು ಸುತ್ತುವರೆದು ಅದರೊಳಗೆ ಮುಸಲ್ಮಾನರು ಇದ್ದಾರೆಯೇ ಎಂದು ಪ್ರಶ್ನಿಸಿದರು. ಅದೇ ಹೊತ್ತಿಗೆ ಕಾರಿನ ಮುಂದುಗಡೆಗೆ ಗ್ಲಾಸ್ ಮೇಲೆ 'ಮಾಶಾ ಅಲ್ಲಾ' ಎಂಬ ಸ್ಟಿಕರ್ ಅಂಟಿಸಿದ್ದನ್ನು ನೋಡಿ, ಅದರೊಳಗಿರು ವವರು ಮುಸಲ್ಮಾನರು ಎಂದು ನಿರ್ಧರಿಸಿ ಕಾರಿನ ಮುಂಬ ದಿಯ ಮತ್ತು ಹಿಂಬದಿಯ ಗಾಜುಗಳನ್ನು ಒಡೆದು ಪುಡಿ ಮಾಡಿದರು. ಅವರ ವರ್ತನೆಯಿಂದ ತಮ್ಮ ಜೀವಕ್ಕೆ ಅಪಾಯ ಏದೆ ಎಂದು ಅರಿತ ಕಾರ್‌ನಲ್ಲಿದ್ದ ಯುವಕರು ಅದರ ಬಾಗಿಲನ್ನು ತೆಗೆದು ತಪ್ಪಿಸಿಕೊಳ್ಳಲು ಯತ್ನಿಸಿದರು. ಆದರೆ ದಾಳಿಕೋರರ ಕೈಗಳಿಗೆ ಸಿಕ್ಕಿಹಾಕಿಕೊಂಡು ಭೀಕರ ಹಲ್ಲೆಗೆ ತುತ್ತಾದರು.

ಅವರ ಹೊಡೆತಗಳನ್ನು ತಿನ್ನುತ್ತಲೆ, ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದ ರಾಜೇಶ್ ಎಂಬ ಹಿಂದೂ ಯುವಕ ತನ್ನ ಕಿವಿಗಳನ್ನು ಚುಚ್ಚಿರುವುದಾಗಿಯೂ, ತನ್ನ ಜನಿವಾರವನ್ನು ತೋರಿಸುತ್ತಾ "ನಾನು ಹಿಂದೂ, ನಾನು ಹಿಂದೂ" ಎಂದು ಕಣ್ಣೀರಿಡುತ್ತಿದ್ದರೂ ದಾಳಿಕೋರರು ಆತನನ್ನ ಥಳಿಸಿದರು.

ರಾಜೇಶ್‌ನನ್ನು ಆ ದೊಂಬಿಯಿಂದ ರಕ್ಷಿಸಿ ತನ್ನ ಮನೆಗೆ ಕರೆದುಕೊಂಡು ಹೋದವರು ಸೂರಿ ಶೆಟ್ಟಿ ಎಂಬುವವರು. ಆದರೆ ಸೂರಿ ಶೆಟ್ಟಿಯವರ ಮನೆಯಿಂದ ರಾಜೇಶ್‌ನನ್ನು 'ರಕ್ಷಿಸಿದವರು ಜಗದೀಶ್ ಆಚಾರ್ ಎಂಬಾತ. ಕಾರಣ ರಾಜೇಶ್ ಆಚಾರನ ಜಾತಿ ಬಾಂಧವ ನಾಗಿದ್ದು! ಪ್ರಕರಣ ನಡೆದ ರಾತ್ರಿ ರಾಜೇಶ್ ಅಂದಿದ್ದು "ನಾವು ಕನ್ನಡದಲ್ಲೇ ಉತ್ತರಿಸಿ ದ್ದರೆ ಕಾರಿನೊಳಗೆ ಮುಸಲ್ಮಾನ ರಿದ್ದಾರೆ ಎಂಬುದು ದಾಳಿ ಕೋರರಿಗೆ ಗೊತ್ತೇ ಆಗುತ್ತಿರ ಲಿಲ್ಲ."



ಕಾರಿನ ಬಾಗಿಲನ್ನು ತೆಗೆದು ದಾಳಿಕೋರರ ಥಳಿತ ಗಳ ನಡುವೆಯೂ ದಿಕ್ಕಾಪಾ ಲಾಗಿ ಓಡಿ ಬಚಾವಾದ ಯುವಕರಲ್ಲಿ ಹಮೀದ್ ಕೂಡ ಒಬ್ಬ. ಹಮೀದ್ ಹಲವಾರು ಬೇಲಿಗಳನ್ನು ಹಾರಿ ಕೊನೆಗೂ ತಲುಪಿದ್ದು ಹಿಂದೂ ಮನೆಯೊಂದನ್ನ. ಆಗ ಅಲ್ಲಿದ್ದ ಮಹಿಳೆ ಹಮೀದನಿಗೆ ಮನೆಯಲ್ಲಿ ಬಚ್ಚಿಟ್ಟುಕೊಳ್ಳಲು ಹೇಳಿ ಮಚ್ಚನ್ನು ಹಿಡಿದು ಮನೆಬಾಗಿಲಲ್ಲಿ ನಿಂತು ಹಮೀದನನ್ನು ಅಟ್ಟಿಸಿಕೊಂಡು ಬಂದವರನ್ನು ಆಕೆ ಎದುರಿಸಿದಳು. ಕೇಸರಿ ಪರಿವಾರವನ್ನು ಆ ಮಹಿಳೆ ಹೀಗೆ ಹಿಮ್ಮೆಟ್ಟಿಸುತ್ತಿದ್ದಾಗ ಹಮೀದ್ ಹಿಂದಿನ ಬಾಗಿಲಿನಿಂದ ತಪ್ಪಿಸಿಕೊಂಡು ತನ್ನ ಜೀವ ಉಳಿಸಿಕೊಂಡ.

ಅದೇ ಕಾರಿನಲ್ಲಿದ್ದ ಆರಿಫ್‌ನನ್ನು ದಾಳಿಕೋರರು ಕೋಲು ಮತ್ತು ಲಾಠಿಗಳಿಂದ ಹೊಡೆದರು. ಅವರ ದಾಳಿಯಿಂದ ತಪ್ಪಿಸಿಕೊಂಡು ಹತ್ತಿರದಲ್ಲೇ ಇದ್ದ ಪೊಲೀಸ್ ಒಬ್ಬನತ್ತ ಓಡಿದ ಆರಿಫ್ ಆ ಪೊಲೀಸಪ್ಪನನ್ನು ಬಿಗಿಯಾಗಿ ಅಪ್ಪಿಕೊಂಡು "ನನ್ನನ್ನು ರಕ್ಷಿಸಿ, ನನ್ನನ್ನು ರಕ್ಷಿಸಿ" ಎಂದು ಬೇಡಿದ. ಆದರೆ ಪರಿಸ್ಥಿತಿ ಕೈಮೀರಿ ಹೋಗಿದ್ದರಿಂದ ಆ ಪೊಲೀಸ್ "ಇಲ್ಲಿಂದ ಕೂಡಲೇ ಓಡಿಹೋಗು" ಎಂದು ಸೂಚಿಸಿದ. ಅಲ್ಲಿಂದ ಅದು ಹೇಗೋ ಓಡಿಹೋದ ಆರಿಫ್ ಒಂದು ವಸತಿ ಪ್ರದೇಶವನ್ನು ತಲುಪಿ ಹಿಂದೂ ಸಂಸಾರವಿದ್ದ ಮನೆಯ ಮುಂದೆ ಕುಸಿದುಬಿದ್ದ. ಮನೆಯಲ್ಲಿದ್ದ ಇಬ್ಬರು ಮಹಿಳೆಯರು ಆರಿಫ್‌ನನ್ನು ಮನೆಯೊಳಗೆ ಕರೆದುಕೊಂಡು ಕುಡಿಯಲು ನೀರು ಕೊಟ್ಟರು. ಆರಿಫ್ ಹೇಳುವಂತೆ "ಆನಂತರ ಪ್ರಾಥಮಿಕ ಚಿಕಿತ್ಸೆ ಪಡೆಯಲು ನನ್ನನ್ನು ಆಸ್ಪತ್ರೆಗೆ ಅವರಿಬ್ಬರು ಕರೆದುಕೊಂಡು ಹೋದರು."

ಈ ಪ್ರಕರಣದಲ್ಲಿ ತುತ್ತಾದ ಹಮೀದ್ ಹೇಳುವುದೇನೆಂದರೆ: "ಹಿಂದೂತ್ವವಾದಿಗಳು ನಮ್ಮ ಮೇಲೆ ದಾಳಿ ಮಾಡಿದರು. ಅವರಿಂದ ನಮ್ಮನ್ನು ರಕ್ಷಿಸಿದವರು ಹಿಂದೂಗಳು."

"ನಾವೆಲ್ಲ ಜೀವ ಭಯಕ್ಕೆ ಹೆದರಿ ಚೆಲ್ಲಾಪಿಲ್ಲಿಯಾಗಿ ಓಡಿದಾಗ ಸೂರಿ ಶೆಟ್ಟಿ ಎಂಬ ಸ್ಥಳೀಯರು ತಮ್ಮ ಎಲ್ಲ ಸಂಪರ್ಕಗಳನ್ನು ಬೆಳಸಿ ನಾವೆಲ್ಲ ಎಲ್ಲಿದ್ದೇವೆ ಎಂದು ಪತ್ತೆ ಹಚ್ಚಿದರಲ್ಲದೆ ಚಿಕಿತ್ಸೆಗೆಂದು ನಮ್ಮೆಲ್ಲರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು" ಎಂದು ಸಿರಾಜುದ್ದೀನ್ ನೆನಪಿಸಿಕೊಳ್ಳುತ್ತಾನೆ.

ಈ ದುರ್ಘಟನೆ ನಡೆದ ಹತ್ತಿರವೇ ಸೂರಿ ಶೆಟ್ಟಿಯ ಮನೆ ಇದೆ. ಅವತ್ತಿನ ಸಂಜೆ ರಸ್ತೆಯಲ್ಲಿ ನಡೆಯುತ್ತಿದ್ದ ಗಲಭೆಯ ಸದ್ದನ್ನು ಕೇಳಿ ಏನಾಗುತ್ತಿದೆ ಎಂದು ತಿಳಿಯಲು ಶೆಟ್ಟಿ ತಮ್ಮ ಮನೆ ಯಿಂದ ಹೊರಗೆ ಬಂದರು. ಅಲ್ಲಿ ಕೋಮು ಗಲಭೆ ನಡೆಯುತ್ತಿದೆ ಎಂದು ಅರಿತ ಶೆಟ್ಟಿ ತಮ್ಮ "ಕರ್ತವ್ಯ"ವನ್ನು ನಿರ್ವಹಿಸಲು ನಿರ್ಧ ರಿಸಿದ್ದರು. ಅವತ್ತಿನ ಪ್ರಕರಣವನ್ನು ನೆನಪಿಸಿಕೊಳ್ಳುತ್ತಾ "ಧರ್ಮ, ಇತ್ಯಾದಿಗಳಿಗಿಂತ ಮನುಷ್ಯ ಜೀವ ಮುಖ್ಯ" ಎನ್ನುತ್ತಾರೆ ಶೆಟ್ಟಿ ಅವರು.

ದಾಳಿಗೆ ತುತ್ತಾದ ತೌಫಿಕ್ "ನಮ್ಮ ಮೇಲೆ ಹಲ್ಲೆ ಮಾಡಿದವರು ಕೈಗೊಂಬೆಗಳು ಮಾತ್ರ. ಅವರನ್ನು ದಾಳಿ ಮಾಡಲು ಪ್ರಚೋದಿಸಿದವರು ನಿಜವಾದ ಅಪರಾಧಿಗಳು" ಎಂದು ಹೇಳಿದ್ದಾನೆ.

ಈ ಪ್ರಕರಣ ಏನನ್ನು ಸೂಚಿಸುತ್ತದೆ?

ಒಂದು, ಹಿಂದೂ ಯುವಕ ರಾಜೇಶನ ಜನಿವಾರ ಕೂಡ ಆತನನ್ನು ಫ್ಯಾಸಿಸ್ಟರ ದ್ವೇಷಭರಿತ ದಾಳಿಯಿಂದ ರಕ್ಷಿಸಲಿಲ್ಲ. ಎರಡನೆಯದು, ಧರ್ಮದ ಆಧಾರದಲ್ಲಿ ಕರಾವಳಿಯ ಹೆಚ್ಚಿನ ಜನ ಧ್ರುವೀಕರಣಗೊಂಡಿದ್ದರೂ ಹಲವರಲ್ಲಾದರೂ ಸಂಘ ಪರಿವಾರದ ವಿಷಪೂರಿತ ಸಿದ್ಧಾಂತ ಜನರಲ್ಲಿ ಅಸಹ್ಯ ಹುಟ್ಟಿಸಿದೆ. ಇಲ್ಲವೆಂದರೆ ಮುಸಲ್ಮಾನ ಹುಡುಗನ ರಕ್ಷಣೆಗೆ ಹಿಂದೂ ಮಹಿಳೆ ಯೋರ್ವಳು ಮಚ್ಚು ಹಿಡಿದು ನಿಲ್ಲುತ್ತಿದ್ದಳೆ? ಮತ್ತೋರ್ವ ಮುಸಲ್ಮಾನ ಹುಡುಗನ ಬಗ್ಗೆ ಇನ್ನಿಬ್ಬರು ಮಹಿಳೆಯರು ಮಾನವೀಯತೆ ಪ್ರದರ್ಶಿಸುತ್ತಿದ್ದರೆ? ಸೂರಿ ಶೆಟ್ಟಿ ತರಹದ ಪುರುಷರು ಅಪಾರ ಕಾಳಜಿ ವಹಿಸಿ ಆ ಯುವಕರ ನೆರವಿಗೆ ಬಂದು ಧರ್ಮಕ್ಕಿಂತ ಮಾನವೀಯತೆ ಮುಖ್ಯ ಎಂದು ಎತ್ತಿ ತೋರಿಸುತ್ತಿದ್ದರೆ?

ಇದಿಷ್ಟೇ ಅಲ್ಲದೆ, ಇತ್ತೀಚೆಗೆ ಕರಾವಳಿ ಪ್ರದೇಶದಲ್ಲಿ ಆಗಿರುವ ಹಲವು ಬದಲಾವಣೆಗಳ ಬಗ್ಗೆಯೂ ಹೇಳಬೇಕಿದೆ. ಈಗಾಗಲೇ ಮೊಗವೀರ ಸಮುದಾಯದ ಯುವಕರು ತಾವು ಫ್ಯಾಸಿಸ್ಟರ ದ್ವೇಷದಾಟದ ದಾಳವಾಗಿರುವುದನ್ನು ಅರಿತು ತಟಸ್ಥರಾಗುತ್ತಿದ್ದಾರೆ. ಸೂರಿ ಶೆಟ್ಟಿ ತರಹದ ಬಂಟರು ಬಿಡಿಬಿಡಿಯಾಗಿ ಫ್ಯಾಸಿಸ್ಟರನ್ನು ವಿರೋಧಿಸುವ ಮಟ್ಟಿಗೆ ಪ್ರಾಜ್ಞರಾಗಿದ್ದಾರೆ.

ವಿಪರ್ಯಾಸ ಸಂಗತಿ ಯಾವುದೆಂದರೆ ಇಂತಹ ಬದಲಾವಣೆ ಬಿಲ್ಲವ ಸಮುದಾಯದಲ್ಲಿ ಇಲ್ಲಿಯತನಕ ಕಂಡುಬಾರದಿರುವುದು. ಕಳೆದ ಕೆಲವರ್ಷಗಳಿಂದ ಮಂದಾರ್ತಿ ಮೇಳದಲ್ಲಿ ಭಾಗವಹಿಸಲು ಬಿಲ್ಲವರಿಗೆ ಅವಕಾಶ ಮಾಡಿಕೊಟ್ಟಿಲ್ಲ, ಬದಲಾಗಿ ಫ್ಯಾಸಿಸ್ಟ್ ಶಕ್ತಿಗಳು ಬಿಲ್ಲವರ ಗುರು ನಾರಾಯಣ ಗುರುವನ್ನೇ ಬ್ರಾಹ್ಮಣೀಕರಣ ಗೊಳಿಸುತ್ತಿವೆ. ಈ ಹಿಂದೆ ದನಗಳ ಸಾಗಾಟ ವಿಷಯದಲ್ಲಿ ಬಿಲ್ಲವ ರೈತನೊಬ್ಬನನ್ನು ಸಂಘ ಪರಿವಾರಿಗಳು ಕೊಂದು ಹಾಕಿದ್ದರು. ಇದೆಲ್ಲವನ್ನು ಅರ್ಥಮಾಡಿಕೊಂಡು ಬಿಲ್ಲವರು ಫ್ಯಾಸಿಸ್ಟ್ ಸಂಘ ಪರಿವಾರದ ಪ್ರಭಾವದಿಂದ ಹೊರಬರಬೇಕಿದೆ.

ಬಂಟರು, ಬಿಲ್ಲವರು, ಮೊಗವೀರರು ಹಿಂದೂತ್ವವಾದ ತಮಗೂ ಶತ್ರು ಎಂಬುದನ್ನು ಅರ್ಥಮಾಡಿಕೊಂಡರೆ ಕಲ್ಲಡ್ಕ ಪ್ರಭಾಕರ ಭಟ್ಟ ಮತ್ತು ಜಗದೀಶ ಕಾರಂತ ತರಹದ ಬ್ರಾಹ್ಮಣರ ಬೇಳೆ ಬೇಯುವುದಿಲ್ಲ. ಅಷ್ಟೇ ಅಲ್ಲ, ಹಿಂದೂತ್ವವಾದ ಎಂಬ ಪುರೋಹಿತಶಾಹಿಗಳ ಷಡ್ಯಂತ್ರಕ್ಕೆ ಶೂದ್ರರ ಹೆಣ ಬೀಳುವುದೂ ತಪ್ಪುತ್ತದೆ. ■

...ರಣರ ವಿರುದ್ಧ ಜಾತಿನಿಂದನೆ ಕೇಸು: ...ಸಲಿ ಸತ್ಯವೇನು?

...ಮುರುಘಾಮಠದ ಶ್ರೀ ಶಿವಮೂರ್ತಿ ... ವಿರುದ್ಧ ಮಠದ ಕುರುಬರಹಟ್ಟಿಯ ...ಪ್ಪ ಎಂಬಾತ ಎಸ್.ಸಿ. ಪಿಟಿಎಲ್ ...ಮನ್ನಯ ದೂರನ್ನು ದಾಖಲಿಸಿರುವುದು ...ಜನಿಕವಾಗಿ ತೀವ್ರ ಚರ್ಚೆಗೊಳಗಾಗಿದೆ. ಸದಾ ...ತರು, ಬಡವರು, ದೀನದಲಿತರ ಪರವಾಗಿ ...ತ್ತಿರುವ ಮುರುಘಾ ಶರಣರಿಗೆ ಇದೊಂದು ...ಗರ ಉಂಟುಮಾಡುವ ವಿದ್ಯಮಾನವಾಗಿ ...ಮಿಸಿದೆ.

...ಶ್ರೀಶಿವಮೂರ್ತಿ ಮುರುಘಾಶರಣರ ವಿರುದ್ಧ ...ನಿಂದನೆ ಕೇಸು ದಾಖಲಿಸಿರುವ ರಾಮಪ್ಪನ ...ಪ್ಪೂ ಸರ್ಕಾರ ವಂಚನೆ ಹಾಗೂ ...ಗಳನ್ನು ತಿದ್ದುಪಡಿ ಮಾಡಿದ ಆರೋಪದ ... ಕೇಸನ್ನು ದಾಖಲಿಸಿದೆ.

...ಗ, ಪ್ರಕರಣ ನ್ಯಾಯಾಲಯದ ...ಲ್ಲಿರುವುದರಿಂದ ಸತ್ಯಾಸತ್ಯತೆಗಳು ಇನ್ನಷ್ಟೇ ...ರಿಗೆ ಬರಬೇಕಾಗಿದೆ. ಪ್ರಕರಣದಲ್ಲಿ ...ಗಳು ಯಾರು? ಇಂತಹ ಪ್ರಕರಣವೊಂದು ದಾಖಲು ಮಾಡಿರುವುದರ ಹಿಂದಿನ ತಂತ್ರಗಾರಿಕೆ ಯಾರದ್ದು ಎಂಬಂತಹ ಸಂಗತಿಗಳು ಕೂಡ ನ್ಯಾಯಾಲಯದಲ್ಲಿ ಪ್ರಕರಣದ ಇತ್ಯರ್ಥವಾದ ನಂತರವೇ ತಿಳಿಯಬೇಕಾಗಿದೆ.

ನ್ಯಾಯಾಲಯದ ಹೊರಗೆ ಇದೇ ಪ್ರಕರಣದ ಸುತ್ತ ನಡೆಯುತ್ತಿರುವ ಮಾತುಕತೆಗಳು, ಚರ್ಚೆಗಳು, ಮುರುಘಾಶರಣರು ಹಾಗೂ ಹಿಂದೆ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ. ಬಸವರಾಜನ್ ಸುತ್ತಾ ನಡೆಯುತ್ತಿವೆ.

ಸದರಿ ಜಮೀನನ್ನು ಎಸ್.ಕೆ. ಬಸವರಾಜನ್ ಬೃಹನ್ಮಠದ ಆಡಳಿತಾಧಿಕಾರಿಯಾಗಿದ್ದಾಗ ಖರೀದಿ ಮಾಡಲಾಗಿದೆ. ಮಠದ ಎಲ್ಲಾ ಆಡಳಿತಾತ್ಮಕ ಆಗುಹೋಗುಗಳನ್ನು ನಿರ್ವಹಿಸುತ್ತಿದ್ದುದು ಬಸವರಾಜನ್. ಹಾಗಾಗಿ ಬಸವರಾಜನ್ ಕಾನೂನು ತೊಡಕಾಗಿ ಪರಿಣಮಿಸುವ ಇಂತಹ ವಿಷಯಗಳನ್ನು ಏಕೆ ಪರಿಶೀಲಿಸಲಿಲ್ಲ? ಸಾವಿರಾರು ರೂ. ವೇತನ ಪಡೆಯುವ ಮಠದ ಕಾನೂನು ಸಲಹೆಗಾರರ ಗಮನಕ್ಕೆ ಇದು ಬರಲಿಲ್ಲವೇ? ಅಥವಾ ಇದೆಲ್ಲಾ ಗೊತ್ತಿದ್ದು ಉದ್ದೇಶಪೂರ್ವಕವಾಗಿ ಇದನ್ನು ಖರೀದಿ ಮಾಡಲಾಗಿದೆಯೆ? ಎಂಬಂತಹ ಪ್ರಶ್ನೆಗಳು ಉದ್ಭವಿಸಿವೆ.



ಈಗ ಬೃಹನ್ಮಠದಿಂದ ಹೊರಹಾಕಲ್ಪಟ್ಟಿರುವ ಬಸವರಾಜನ್ ಮುರುಘಾಶರಣರಿಗೆ ಕಿರುಕುಳ ನೀಡುವ ಉದ್ದೇಶದಿಂದ ಇಂತಹ ಪ್ರಕರಣಗಳನ್ನು ದಾಖಲಿಸಲು ಕುಮ್ಮಕ್ಕು ನೀಡುತ್ತಿದ್ದಾರೆ ಎಂಬುದು ಬೃಹನ್ಮಠದ ವಲಯದ ಆರೋಪ. ಮೊನ್ನೆ 20ರಂದು ಮುರುಘಾಶರಣರ ಸಮ್ಮುಖದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಇಂತಹ ವಿಷಯ ಪ್ರಸ್ತಾಪಿಸಿದಾಗ ಬಸವರಾಜನ್ ಬೆಂಬಲಿಗರು ತೀವ್ರವಾಗಿ ಆಕ್ಷೇಪಿಸಿದ್ದಾರೆ. ಕೊನೆಗೆ ಅದು ದಾಂಧಲೆಯಲ್ಲಿ ಪರ್ಯಾವಸಾನಗೊಂಡು ಶಾಸಕ ಬಸವರಾಜನ್, ಅಶ್ಫಕ್ ಆಲಿ, ನಿಸಾರ್, ಸಿದ್ದಪ್ಪ ಸೇರಿದಂತೆ ಐದು ಜನರ ಮೇಲೆ 109, 120ಬಿ, ಕಲಂನಡಿ ಕೇಸು ದಾಖಲಿಸಲಾಗಿದೆ.

ಸಿದ್ದಪ್ಪ ಎಂಬಾತ ಮುರುಘಾಮಠದ ಸಹಕಾರ್ಯದರ್ಶಿ ಕೆ.ವಿ. ಪ್ರಭಾಕರ್, ಉಪನ್ಯಾಸಕ ಶಿವಲಿಂಗಪ್ಪ, ಮಕ್ಬೂಲ್ ಅಹಮ್ಮದ್, ಪಾರ್ಕ್ ಶಿವು, ರಮೇಶ್, ಎಂಬುವರ ಮೇಲೆ ಅಟ್ರಾಸಿಟಿ ಕೇಸನ್ನು ದಾಖಲಿಸಿದ್ದಾನೆ. ಈ ದೂರು-ಪ್ರತಿದೂರುಗಳ ಯಾದಿ ಇನ್ನು ಮುಗಿಯುವ ಲಕ್ಷಣಗಳು ಕಾಣಿಸುತ್ತಿಲ್ಲ.

ಈ ವಿದ್ಯಮಾನಗಳಿಗೆ ಹೊರತಾದ ಈ ಪ್ರಕರಣದ ಬಗ್ಗೆ ಬೆಳಕು ಚೆಲ್ಲುವ ಅಂಶವೊಂದನ್ನು ಇಲ್ಲಿ ವಿಶೇಷವಾಗಿ ದಾಖಲಿಸಬೇಕಿದೆ.

ರಾಮಪ್ಪ ಯಾವ ಜಮೀನನ್ನು ಮುರುಘಾಶರಣರು ಖರೀದಿಸಿದ್ದಾರೆಂದು ಎಸ್ಸಿ ಪಿ.ಟಿ.ಎಲ್ ಕೇಸು ದಾಖಲಿಸಿದ್ದಾನೋ ಅದೇ ಜಮೀನನ್ನು ಅದಕ್ಕೂ ಮೊದಲೇ ಅಂದಿನ ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ಹೆಸರಿಗೆ ಒಂದೇ ದಿನ ಕ್ರಯ ಹಾಗೂ ಗುತ್ತಿಗೆ ಕರಾರು ಮಾಡಿಕೊಂಡಿರುವುದು.

ವಿವರಗಳು ಹೀಗಿವೆ: ರಾಮಪ್ಪ ಇವರ ಹೆಸರಿನಲ್ಲೇ ಖರೀದಿಸಲಾಗಿರುವ ಸ್ಟಾಂಪ್ ಬಿಡಿ/ 2.ನಂ.384888ರಲ್ಲಿ ಗುತ್ತಿಗೆ ಕರಾರುಪತ್ರ ಬರೆಯಲಾಗಿದ್ದು 17-4-2006ರಂದು ಬೃಹನ್ಮಠದ ಆಡಳಿತಾಧಿಕಾರಿಯಾಗಿ ಶ್ರೀ ಎಸ್.ಕೆ. ಬಸವರಾಜನ್ ಬಿನ್ ಕರಿಸಿದ್ದಯ್ಯ ಇವರಿಗೆ ರಾಮಪ್ಪ ಮತ್ತು ಆತನ

▶▶▶ 9

ಮನಮೋಹನ್ ಸಿಂಗ್‌ರ ಬ್ಯಾಡಗಿ ಮೆಣಸಿನಕಾಯಿ


ತುರುಕು ಬಾಯಿಯ ಕೆಲವರಿರುತ್ತಾರೆ. ಯಾವಾಗಲೂ ಮಾಧ್ಯಮಗಳೆದುರಿಗೆ ಬಂದು ಪೋಜು ಕೊಡುತ್ತಾ ತಮ್ಮ ವಿರೋಧಿಗಳ ಬಗ್ಗೆ, ರಾಜಕೀಯ ಶತ್ರುಗಳ ಬಗ್ಗೆ ತಮ್ಮ ಫಿಲ್ಟರ್ ಇಲ್ಲದ ನಾಲಿಗೆಯಿಂದ ಕಪ್ಪೆಗಳಂತೆ ವಟಗುಟ್ಟುತ್ತಲೇ ಇರುತ್ತಾರೆ. ಇವರ ವಟಗುಟ್ಟುವಿಕೆಯನ್ನು ಕೇಳಿಕೇಳಿ ಸಾಕಾಗಿಹೋಗಿರುವ ಮಾಧ್ಯಮಗಳೂ ಕೂಡ ಈ 'ಹಾಡಿದ್ದನ್ನೇ ಹಾಡುವ ಕಿಸಬಾಯಿ ದಾಸ'ರ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಎಲ್.ಕೆ.ಅಡ್ವಾಣಿ, ಉಮಾಭಾರತಿ, ಯಡಿಯೂರಪ್ಪ, ಸುಷ್ಮಾ ಸ್ವರಾಜ್ ಮುಂತಾದ ಬಿಜೆಪಿಗಳು ಈ ದಾಸರ ಪಟ್ಟಿಯಲ್ಲಿರುವ ಕೆಲವು ಪ್ರಮುಖರು.


ಇನ್ನು ಕೆಲವರಿರುತ್ತಾರೆ. ತಮ್ಮ ರಾಜಕೀಯ ವಿರೋಧಿಗಳು ತಮ್ಮ ಬಗ್ಗೆ ಎಷ್ಟೇ ಟೀಕೆ ಮಾಡಲಿ, ಬಯ್ಯಲಿ ಅದನ್ನೆಲ್ಲಾ ಕೇಳಿಸಿಕೊಂಡು ನಕ್ಕು ಸುಮ್ಮನಾಗಿಬಿಡುತ್ತಾರೆ. ಅವರು ಮಾತನಾಡುವುದೇ ಅಪರೂಪ. ಅವರಲ್ಲೂ ತಮ್ಮ ವಿರೋಧಿಗಳ ಬಗ್ಗೆ ಟೀಕೆ ಮಾಡುವುದು, ವಿರೋಧಿಗಳು ಮಾಡಿದ ಟೀಕೆಗಳಿಗೆ ಉತ್ತರ ಕೊಡುವುದಂತೂ ತೀರಾ ವಿರಳ. ಆದರೆ, ಮಾತನಾಡಿದರೆ ಬ್ಯಾಡಗಿ ಹಸಿಮೆಣಸಿನಕಾಯಿ ಮುರಿದು ತುರುಕಬಾರದ ಜಾಗದಲ್ಲಿ ತುರುಕಿದಂತೆ ಮಾತನಾಡುತ್ತಾರೆ. ಅಂಥವರ ಲಿಸ್ಟಿನಲ್ಲಿ ಅಗ್ರಸ್ಥಾನದಲ್ಲಿರುವವರೆಂದರೆ ಮನಮೋಹನ್ ಸಿಂಗ್.

ಮನಮೋಹನ್ ಸಿಂಗ್ ಪ್ರಧಾನಿ ಪಟ್ಟಕ್ಕೇರಿದ ಮೇಲೆ ಕಳೆದ ಐದು ವರ್ಷಗಳಿಂದಲೂ ಇದೇ ಅಡ್ವಾಣಿ, ಸುಷ್ಮಾ ಸ್ವರಾಜ್, ಮೋದಿಗಳು 'ದುರ್ಬಲ ಪ್ರಧಾನಿ', 'ರಬ್ಬರ್ ಸ್ಟಾಂಪ್' 'ಸೋನಿಯಾಳ ಕೈಗೊಂಬೆ' ಎಂದೆಲ್ಲಾ ವಟಗುಟ್ಟುತ್ತಲೇ ಬಂದಿದ್ದಾರೆ. ಅದಕ್ಕೆಲ್ಲಾ ನಕ್ಕು ಸುಮ್ಮನಾಗಿದ್ದಾರೆ ಸಿಂಗ್. ಆದರೆ, ಮೊನ್ನೆವರೆಗೂ ಕಾದು ಒಂದು ಬ್ಯಾಡಗಿ ಮೆಣಸಿನಕಾಯಿಯನ್ನು ಮುರಿದು ಅಡ್ವಾಣಿಗೆ ತುರುಕೇ ಬಿಟ್ಟಿದ್ದಾರೆ: "ನನ್ನನ್ನು ದುರ್ಬಲ ಪ್ರಧಾನಿ ಎಂದು ಅಡ್ವಾಣಿ ಮಹಾಶಯರು ಟೀಕೆ ಮಾಡುತ್ತಾರೆ. ನಾನು ದುರ್ಬಲನೇ ಅಥವಾ ಪ್ರಬಲನೇ ಎಂಬುದನ್ನು ಸರ್ಕಾರಿ ರೆಕಾರ್ಡ್‌ಗಳೇ ಹೇಳುತ್ತವೆ. ನನ್ನನ್ನು ದುರ್ಬಲ ಎಂದು ಹೇಳುವ ಅಡ್ವಾಣಿಯವರ ರೆಕಾರ್ಡ್‌ಗಳನ್ನು ನೋಡೋಣ. ಬಾಬ್ರಿ ಮಸೀದಿ ಕೆಡವಿದ್ದು, ಗುಜರಾತ್ ನರಮೇಧಕ್ಕೆ ಬೆಂಬಲವಾಗಿ ನಿಂತಿದ್ದು – ಇವೇ ಅವರ ಸಾಧನೆಗಳು. ಪಾರ್ಲಿಮೆಂಟ್ ಮೇಲೆ ದಾಳಿ ನಡೆದದ್ದು, ಕೆಂಪುಕೋಟೆಯ ಮೇಲೆ ದಾಳಿ ನಡೆದದ್ದು, ಅಕ್ಷರಧಾಮದ ಮೇಲೆ ದಾಳಿ ನಡೆದದ್ದು ಅಡ್ವಾಣಿ ಮಹಾಶಯರು ಗೃಹಮಂತ್ರಿಗಳಾಗಿದ್ದ ಕಾಲದಲ್ಲೇ. ಭಯೋತ್ಪಾದಕರು ವಿಮಾನವನ್ನು ಹೈಜಾಕ್ ಮಾಡಿದಾಗ ಕುಖ್ಯಾತ ಭಯೋತ್ಪಾದಕ ನಾಯಕನನ್ನು ಕಂದಹಾರ್‌ತನಕ ಹೋಗಿ ಬಿಟ್ಟುಬಂದಿದ್ದು ಇದೇ ಅಡ್ವಾಣಿ ಮಹಾಶಯರು ಗೃಹಮಂತ್ರಿಗಳಾಗಿದ್ದ ಕಾಲದಲ್ಲೇ. ತಮ್ಮ ರಾಜಕೀಯ ಜೀವನದುದ್ದಕ್ಕೂ ಕೋಮುವಾದಿಗಳನ್ನು ಮುನ್ನಡೆಸಿದ ಅಡ್ವಾಣಿ ಪರಮ ಅವಕಾಶವಾದಿ. ಭಾರತದಲ್ಲಿದ್ದಾಗ ಅವರಿಗೆ ಮುಸ್ಲಿಮರೆಲ್ಲರೂ ಭಯೋತ್ಪಾದಕರಂತೆ ಕಾಣುತ್ತಾರೆ, ಪಾಕಿಸ್ತಾನಕ್ಕೆ ಹೋದ ತಕ್ಷಣ ಮಹ್ಮದ ಆಲಿ ಜಿನ್ನಾನಂಥವರಲ್ಲಿ ಹಠಾತ್ತನೆ ಸಕಲ ಸದ್ಗುಣಗಳನ್ನು ಕಾಣುತ್ತಾರೆ; ಅವರನ್ನು ಜಾತ್ಯತೀತ ಎಂದು ಬಣ್ಣಿಸಿಬಿಡುತ್ತಾರೆ. ಅಡ್ವಾಣಿಯವರು ಎಷ್ಟು ಪ್ರಬಲರು ಎಂದರೆ ಭಾರತಕ್ಕೆ ಮರಳಿ ಬಂದ ತಕ್ಷಣ ಆರ್‌ಎಸ್‌ಎಸ್ ಅವರನ್ನು ಹಿಂದುಮುಂದು ನೋಡದೇ ಬಿಜೆಪಿ ಅಧ್ಯಕ್ಷ ಗಾದಿಯಿಂದಲೇ ಇಳಿಸಿಬಿಟ್ಟಿತು. ನಾನು ದುರ್ಬಲನೋ ಅಥವಾ ಅಡ್ವಾಣಿ ದುರ್ಬಲರೋ ಎಂಬುದನ್ನು ವಿವರಿಸುವುದಕ್ಕೆ ಇದಕ್ಕಿಂತ ಬೇರಿನ್ನೇನು ಬೇಕು? ಯಾರು ದುರ್ಬಲ, ಯಾರು ಪ್ರಬಲ ಎಂಬುದನ್ನು ಚರಿತ್ರೆ ನಿರ್ಧರಿಸುತ್ತದೆ."

ಇದು ಮನಮೋಹನ್ ಸಿಂಗ್ ಅಡ್ವಾಣಿಗೆ ತುರುಕಬಾರದ ಜಾಗದಲ್ಲಿ ಬ್ಯಾಡಗಿ ಮೆಣಸಿನ ಕಾಯಿ ಮುರಿದು ತುರುಕಿದ ಪರಿ. ಇಷ್ಟು ಸಾಕಲ್ಲವೆ ಅಡ್ವಾಣಿಗೆ ಆ ಉರಿಯಿಂದ ಬಾಯಿ ಬಾಯಿ ಬಡಿದುಕೊಳ್ಳುವುದಕ್ಕೆ?

ಮತ್ತೆ ಎಂದಿನಂತೆ ಅಡ್ವಾಣಿ ಅಂಡ್ ಗ್ಯಾಂಗ್ ತನ್ನ ವಟಗುಟ್ಟುವಿಕೆಯನ್ನು ಮುಂದುವರಿಸಿದೆ. ಮನಮೋಹನ್ ಸಿಂಗ್ ಉರಿಯನ್ನು ತುರಿಸಿಕೊಳ್ಳುತ್ತಿರುವ ಅಡ್ವಾಣಿಯನ್ನು ನೋಡುತ್ತಾ ನಗುತ್ತಿದ್ದಾರೆ. ಅದಿನ್ಯಾವಾಗ ಮತ್ತೊಂದು ಮೆಣಸಿನ ಕಾಯಿ ಮುರಿಯುತ್ತಾರೋ?





ಸುತ್ತ ಮುತ್ತ

▸ಕುಮಾರ್ ಬುರಡಿಕಟ್ಟಿ



ಮಾಯಾವತಿ-ಸತೀಶ್ಚಂದ್ರ ವಾಜಪೇಯಿ-ಬ್ರಿಜೇಶ್ ಸೋನಿಯಾ-ಪ್ರಣಬ್ ಅಡ್ವಾನಿ-ಜೇಟ್ಲಿ ಮನಮೋಹನ್-ಸಂಜಯ್

ಇವು ಚಾಣಕ್ಯ ತಲೆಗಳು!

ದೇಶದ ಜನಸಂಖ್ಯೆಯಲ್ಲಿ ಬ್ರಾಹ್ಮಣರ ಪ್ರಮಾಣ ಶೇ.5 ರಷ್ಟು ಮಾತ್ರ. ಆದರೆ ಉಳಿದ ಶೇ.95ರಷ್ಟು ಜನಸಮೂಹಗಳನ್ನು ಅವರು ನಿಯಂತ್ರಿಸುತ್ತಾರೆ. ತಂತ್ರ, ಕುತಂತ್ರಗಳಿಂದ ಉಳಿದವರನ್ನು ಸೋಲಿಸುವ, ಬಗ್ಗುಬಡಿಯುವ ಅವರ ಚಾಣಾಕ್ಷತನವೇ ಅವರಿಗೆ ಈ ಶಕ್ತಿಯನ್ನು ತಂದುಕೊಟ್ಟಿದೆ.

1984ರಲ್ಲಿ ಲೋಕಸಭೆಯಲ್ಲಿ ಶೇ.20ರಷ್ಟು ಬ್ರಾಹ್ಮಣರೇ ತುಂಬಿಕೊಂಡಿದ್ದರು. ಈಗ ಪ್ರಸ್ತುತ 14ನೇ ಲೋಕಸಭೆಯ 543 ಸದಸ್ಯರಲ್ಲಿ 50 ಸದಸ್ಯರು ಬ್ರಾಹ್ಮಣರು. ಅಂದರೆ, ಅವರ ಸಂಖ್ಯಾತ್ಮಕ ಪ್ರಮಾಣ 9.17ಕ್ಕೆ ಇಳಿದಿದೆ. ರಾಜಕೀಯದಲ್ಲಿ ಅವರ ಹಿಡಿತ ಮಾತ್ರ ತಪ್ಪಿಹೋಗಿದೆ ಎಂದೇನೂ ಅಲ್ಲ. ಪಕ್ಷ ಯಾವುದೇ ಇರಬಹುದು, ಅದಕ್ಕೆ ಎದುರಿಗೆ ಎದ್ದು ಕಾಣುವ ನಾಯಕ ಯಾರೇ ಇರಬಹುದು, ಆದರೆ ನಿಯಂತ್ರಣ ಮಾತ್ರ ಬ್ರಾಹ್ಮಣರ ಕೈಯಲ್ಲಿಯೇ ಇದೆ. ಇಲ್ಲೊಂದಿಷ್ಟು ಉದಾಹರಣೆಗಳಿವೆ ನೋಡಿ.

ಮೊದಲನೆಯದಾಗಿ ದಲಿತರ ಪಕ್ಷವೆಂದೇ ಹೆಸರಾಗಿದ್ದ ಬಹುಜನ ಸಮಾಜ ಪಕ್ಷವನ್ನೇ ತೆಗೆದುಕೊಳ್ಳಿ. ನೋಡುವುದಕ್ಕೆ ಇದರ ಅಧಿನಾಯಕಿ ಮಾಯಾವತಿ ಎಂದೇ ಕಂಡರೂ ವಾಸ್ತವದಲ್ಲಿ ಇಡೀ ಪಕ್ಷವನ್ನು ನಿಯಂತ್ರಿಸುತ್ತಿರುವುದು ಸತೀಶ್ಚಂದ್ರ ಮಿಶ್ರ ಎಂಬ ಬ್ರಾಹ್ಮಣ. ಹೈಕೋರ್ಟಿನ ನ್ಯಾಯಾಧೀಶರ ಮಗನಾದ ಈತ ವೃತ್ತಿಯಲ್ಲಿ ಒಬ್ಬ ವಕೀಲ. ಈತನ ಚಾಣಾಕ್ಷತನ ಮಾಯಾವತಿಯನ್ನು ಬಹುವಾಗಿ ಆಕರ್ಷಿಸಿದ್ದರಿಂದ ಈ ಹಿಂದೆ ಮಾಯಾವತಿ ಮುಖ್ಯಮಂತ್ರಿಯಾಗಿದ್ದಾಗ ಆತನನ್ನು ಉತ್ತರ ಪ್ರದೇಶ ರಾಜ್ಯದ ಅಡ್ವೋಕೇಟ್ ಜನರಲ್ ಆಗಿ ನೇಮಿಸಿದ್ದರು. ನಂತರ 2004ರ ಕೊನೆಯ ಹೊತ್ತಿಗೆ ತಮ್ಮ ಬಿಎಸ್ಪಿ ಸೇರುವಂತೆಯೂ ಆಹ್ವಾನಿಸಿದರು. ಮಿಶ್ರ ಪಕ್ಷಕ್ಕೆ ಸೇರಿದಾಕ್ಷಣವೇ ಪಕ್ಷದ ಇಡೀ ಸಿದ್ಧಾಂತವನ್ನೇ ಬದಲಿಸಿಬಿಟ್ಟರು. "ಇಲ್ಲಿಯತನಕ ಕಾಂಗ್ರೆಸ್ ದಲಿತರನ್ನು ಓಟ್‌ಬ್ಯಾಂಕ್ ಆಗಿ ಮಾತ್ರ ಬಳಸಿಕೊಂಡಿದೆ. ಪಕ್ಷವೊಂದರ ಯಶಸ್ಸಿಗೆ ದಲಿತರು-ಹಿಂದುಳಿದವರು-ಬ್ರಾಹ್ಮಣರು ಸಂಯೋಜನೆ ಅತ್ಯವಶ್ಯ" ಎನ್ನುವ ಮೂಲಕ ಬಿಎಸ್ಪಿಯ 'ಬಹುಜನ' ತತ್ವಕ್ಕೆ ಪರ್ಯಾಯವಾಗಿ 'ಸರ್ವಜನ' ತತ್ವವನ್ನು ಮುಂದಿಟ್ಟರು. ಅಂತೆಯೇ ಒಂದು ಕಾಲದಲ್ಲಿ ಒಬ್ಬನೂ ಬ್ರಾಹ್ಮಣನಿರದಿದ್ದ ಬಿಎಸ್‌ಪಿಯಲ್ಲಿ 2007ರ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಮಟ್ಟದಲ್ಲಿ ಬ್ರಾಹ್ಮಣರಿಗೆ ಟಿಕೆಟ್ ಕೊಡಿಸಿದರು. ಮಾಯಾವತಿಯವರು ಮಿಶ್ರರಿಗಾಗಿಯೇ ಒಂದು ವಿಶೇಷ ಹೆಲಿಕಾಪ್ಟರ್ ಕೊಟ್ಟು ಚುನಾವಣೆಯಲ್ಲಿ ಪ್ರಚಾರ ಮಾಡುವಂತೆ ಸೂಚಿಸಿದರು. ಮಿಶ್ರ ತಮ್ಮ ಈ ಸೋಶಿಯಲ್ ಎಂಜಿನಿಯರಿಂಗ್‌ನಿಂದಾಗಿ 2007ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್ಪಿ ಪಕ್ಷ ಬಹುಮತ ಪಡೆದು ಅಧಿಕಾರಕ್ಕೇರುವಂತೆ ಮಾಡಿದರು. ಇಂದಿಗೂ ಮಾಯಾವತಿಯ ಬಿಎಸ್ಪಿ ಪಕ್ಷದ ಬ್ರೇನ್ ಎಂದರೆ ಸತೀಶ್ಚಂದ್ರ ಮಿಶ್ರರೇ.



ಇನ್ನು ಬಿಜೆಪಿಯಲ್ಲಿ ಬ್ರಾಹ್ಮಣರ ಮಿದುಳು ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಿ. 90ರ ದಶಕದಲ್ಲಿ ಎಲ್.ಕೆ.ಅಡ್ವಾಣಿಯವರನ್ನು ರಾಷ್ಟ್ರೀಯ ನಾಯಕನನ್ನಾಗಿ ರೂಪಿಸಿದ್ದು ಕೆ.ಗೋವಿಂದಾಚಾರ್ಯ ಎಂಬ ಬ್ರಾಹ್ಮಣನ ಮಿದುಳು. ಗೋವಿಂದಾಚಾರ್ಯರು ಮಂದಿರ್-ಮಂಡಲ್‌ಗಳನ್ನು ಚಾಣಾಕ್ಷತನದಿಂದ ಬಳಸಿಕೊಂಡು ಅಡ್ವಾಣಿ ರಾಷ್ಟ್ರೀಯ ನಾಯಕರಾಗುವಂತೆ ಮಾಡಿದರು.

ನಂತರ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೇರಿದಾಗ ಅಡ್ವಾಣಿ ಉಪಪ್ರಧಾನಿಯಾಗಿದ್ದರೂ ಅವರಿಗಿಂತ ಅಕ್ಷರಶಃ ಹೆಚ್ಚು ಅಧಿಕಾರವನ್ನು, ಪ್ರಭಾವವನ್ನು ಹೊಂದಿದ್ದು ಮತ್ತು ಸರ್ಕಾರವನ್ನು ಮುನ್ನಡೆಸಿದ್ದು ಎಂದರೆ ಪ್ರಮೋದ್ ಮಹಾಜನ್ ಮತ್ತು ಬ್ರಿಜೇಶ್ ಮಿಶ್ರ ಎಂಬ ಬ್ರಾಹ್ಮಣರು. ಅದರಲ್ಲೂ ಬ್ರಿಜೇಶ್ ಮಿಶ್ರ ಅವರೇ ವಿದೇಶಾಂಗ ನೀತಿಯಿಂದ ಹಿಡಿದು, ಆಂತರಿಕ ಭದ್ರತೆಗಳ ತನಕ ಎಲ್ಲಾ ವಿಚಾರಗಳಲ್ಲಿ ಸರ್ಕಾರವನ್ನು ಮುನ್ನಡೆಸಿದರು. ಸೋಲಿಲ್ಲದ ಸರದಾರ ಎಂದು ಪ್ರಖ್ಯಾತನಾಗಿದ್ದ ಮಧ್ಯಪ್ರದೇಶದ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರ ಭದ್ರಕೋಟೆಯನ್ನು ಒಡೆದು 2003ರಲ್ಲಿ ಬಿಜೆಪಿ ಅಧಿಕಾರಕ್ಕೇರುವಂತೆ ಮಾಡಿದ್ದು, 2005ರಲ್ಲಿ ಲಾಲೂ ಪ್ರಸಾದ್ ಯಾದವ್‌ನ ಬಿಹಾರ ಕೋಟೆಯನ್ನು ಛಿದ್ರ ಮಾಡಿ ಬಿಜೆಪಿಯ ಮಿತ್ರಪಕ್ಷ ಜನತಾದಳ (ಯುನೈಟೆಡ್) ಗೆದ್ದು ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗುವಂತೆ ಮಾಡಿದ್ದು ಹಾಗೂ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ (ಕರ್ನಾಟಕದಲ್ಲಿ) ಬಿಜೆಪಿ ಅಧಿಕಾರಕ್ಕೇರುವಂತೆ ಮಾಡಿದ್ದು ಅರುಣ್ ಜೇಟ್ಲಿ ಎಂಬ ಬ್ರಾಹ್ಮಣ. ಈಗ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅಡ್ವಾಣಿಯನ್ನು ಪ್ರಧಾನಿ ಪಟ್ಟದಲ್ಲಿ ಕೂರಿಸುವುದಕ್ಕಾಗಿ ಜೇಟ್ಲಿ ಮಿದುಳು ರಣತಂತ್ರ ಹೆಣೆಯುತ್ತಿದೆ.

ಇನ್ನು ಒರಿಸ್ಸಾದ ಬಿಜು ಜನತಾದಳವನ್ನು, ಅದರ ನಾಯಕ ನವೀನ್ ಪಟ್ನಾಯಕ್‌ನನ್ನು ಮುನ್ನಡೆಸುತ್ತಿರುವುದು ಪ್ಯಾರಿಮೋಹನ್ ಮೊಹಾಪಾತ್ರ ಎಂಬ ಬ್ರಾಹ್ಮಣ. ಇವರು 1963ರ ಬ್ಯಾಚ್‌ನ ಐಎಎಸ್ ಪದವೀಧರರು. ಬಿಜು ಪಟ್ನಾಯಕ್ ಎರಡನೇ ಅವಧಿಗೆ ಮುಖ್ಯಮಂತ್ರಿಯಾದಾಗ ಮೊಹಾಪಾತ್ರ ಅವರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ನವೀನ್ ಪಟ್ನಾಯಕ್ ಅವರ ಗಮನ ಸೆಳೆದಿದ್ದರು. ನಂತರ 1998ರಲ್ಲಿ ಮೊಹಾಪಾತ್ರ ನಿವೃತ್ತಿಯಾದರು. ಅದಾದ ಒಂದೇ ವರ್ಷದಲ್ಲಿ ನವೀನ್ ಪಟ್ನಾಯಕ್ ಮುಖ್ಯಮಂತ್ರಿಯಾದರು. ಅಲ್ಲಿಂದ ಪ್ರಾರಂಭವಾದ ಈ ಜೋಡಿ ಇಂದಿಗೂ ಯಶಸ್ವಿಯಾಗಿ ಮುಂದುವರೆದಿದೆ. ವಿರೋಧಿ ಪಕ್ಷಗಳನ್ನು ಮಣಿಸುವಲ್ಲಿ, ಸರ್ಕಾರದ ಕೀಲಕ ಸ್ಥಾನಗಳಿಗೆ ಸೂಕ್ತ ಅಧಿಕಾರಿಗಳನ್ನು ಕೂರಿಸುವಲ್ಲಿ, ಸರ್ಕಾರವನ್ನು ಮುನ್ನಡೆಸುವಲ್ಲಿ – ಎಲ್ಲೆಲ್ಲೂ ಪ್ಯಾರಿಮೋಹನ್ ಮೊಹಾಪಾತ್ರರೆ. ತೀರಾ ಇತ್ತೀಚೆಗೆ 11 ವರ್ಷಗಳಷ್ಟು ಸುದೀರ್ಘವಾದ ಬಿಜೆಪಿ-ಬಿಜು ಜನತಾದಳ ಮೈತ್ರಿಯನ್ನು ಮುರಿದು ಯಶಸ್ವಿಯಾಗಿ ಅಧಿಕಾರ ಉಳಿಸಿಕೊಂಡ ಪ್ರಕರಣದಲ್ಲೂ ಪ್ಯಾರಿಮೋಹನ್ ಮೆದುಳೇ ಕೆಲಸ ಮಾಡಿದ್ದು.

ಇನ್ನು ಕಾಂಗ್ರೆಸ್ ವಿಚಾರಕ್ಕೆ ಬಂದರೆ ಇಂದಿರಾ ಗಾಂಧಿಯವರಿಗೆ ಎಡಗೈ, ಬಲಗೈ, ಮೆದುಳು, ಹೃದಯ – ಎಲ್ಲಾ ಆಗಿದ್ದವರು ಕಾಶ್ಮೀರಿ ಬ್ರಾಹ್ಮಣ ಪಿ.ಎನ್. ಹಕ್ಸರ್. ಈಗ ಸೋನಿಯಾ ಗಾಂಧಿಯ ಬೆನ್ನಿಗೆ ನಿಂತು ವ್ಯೂಹತಂತ್ರ-ಕಾರ್ಯತಂತ್ರ ರೂಪಿಸುತ್ತಿರುವವರು ಬಂಗಾಳಿ ಬ್ರಾಹ್ಮಣ ಪ್ರಣಬ್ ಮುಖರ್ಜಿ. ಎಷ್ಟೇ ಕ್ಲಿಷ್ಟಕರ ಸಮಸ್ಯೆಎದುರಾದರೂ ಪ್ರಣಬ್ ಮುಖರ್ಜಿ ಅದನ್ನು ನಿಭಾಯಿಸುತ್ತಾರೆ ಎಂಬ ಸಂಪೂರ್ಣ ವಿಶ್ವಾಸ, ಭರವಸೆ ಸೋನಿಯಾಗಿದೆ. ಈ ಕಾರಣಕ್ಕಾಗಿಯೇ ವಿವಿಧ ವಿಚಾರಗಳಿಗಾಗಿ ವಿವಿಧ ಮಂತ್ರಿಗಳನ್ನೊಳಗೊಂಡು ರಚಿತವಾದ ಸುಮಾರು 30 ಬೇರೆ ಬೇರೆ ಸಮಿತಿಗಳ ನೇತೃತ್ವವನ್ನು ಅವರಿಗೆ ವಹಿಸಲಾಗಿದೆ. ಮುಂಬೈ ಭಯೋತ್ಪಾದಕ ದಾಳಿ ಹೊಣೆಯನ್ನು ಪಾಕಿಸ್ತಾನ ಹೇರುವಂತೆ ಮಾಡಿದ್ದು, ಇಂಡೋ-ಅಮೆರಿಕ ಅಣುಬಂಧವನ್ನು ಎಡಪಕ್ಷಗಳ ವಿರೋಧದ ನಡುವೆಯೂ ಯಶಸ್ವಿಯಾಗಿ ಪೂರೈಸಿದ್ದು - ಹೀಗೆ ಎಲ್ಲಾ ವಿಚಾರಗಳಲ್ಲೂ ಮುಖರ್ಜಿ ಚಾಣಾಕ್ಯ ಬುದ್ಧಿ ಪ್ರದರ್ಶಿಸಿದ್ದಾರೆ. ಅವರಿಗೆ ಅಪಾರ ಚಾರಿತ್ರಿಕ ಜ್ಞಾನವಿದೆ. ಇಂದಿಗೂ ಪಕ್ಷದ ಪ್ರಕಟಣೆಗಳನ್ನು, ಪತ್ರಿಕಾ ಹೇಳಿಕೆಗಳನ್ನು ಸಿದ್ಧಪಡಿಸುತ್ತಿರುವವರೇ ಅವರು. ಅವುಗಳನ್ನವರು ಹೇಗೆ ಬರೆಯುತ್ತಾರೆಂದರೆ ಮುಂದೆ ಅವುಗಳನ್ನೇ ವಿರೋಧ ಪಕ್ಷಗಳು ದಾಳವನ್ನಾಗಿ ಬಳಸಿಕೊಂಡರೂ ಅದನ್ನು ಸಮರ್ಥವಾಗಿ ನಿಭಾಯಿಸುವುದಕ್ಕೆ ಸಾಧ್ಯವಿರುವಂತೆ ನೋಡಿಕೊಳ್ಳುತ್ತಾರೆ. ಆದ್ದರಿಂದಲೇ ಅವರನ್ನು 'ಎಲ್ಲಾ ಕಾಲಕ್ಕೂ ಸಲ್ಲುವ ಕಾಂಗ್ರೆಸ್‌ನ ಚಾಣಕ್ಯ' ಎಂದು ಕರೆಯುತ್ತಾರೆ.

ಕಾಂಗ್ರೆಸ್‌ನಲ್ಲಿ ಇನ್ನೊಂದು ಬ್ರಾಹ್ಮಣ ಮಿದುಳಿದೆ. ಅವರು 1990ರ ದಶದಲ್ಲಿ ಪತ್ರಿಕೆಯೊಂದಕ್ಕೆ ಚಾಣಾಕ್ಯನ ಇನ್ನೊಂದು ಹೆಸರಾದ 'ಕೌಟಿಲ್ಯ' ಎಂಬ ಹೆಸರಿನಲ್ಲಿ ಅಂಕಣ ಬರೆಯುತ್ತಿದ್ದರು. ಅವರ ಹೆಸರೆಂದರೆ ಜೈರಾಮ್ ರಮೇಶ್. ಬಹಳಷ್ಟು ದಿನಗಳಿಂದ ಹತ್ತಾರು ರಾಜ್ಯ ಸರ್ಕಾರಗಳಿಗೆ ಸಲಹೆಗಾರರಾಗಿರುವ ಇವರು ಪಿ.ವಿ.ನರಸಿಂಹರಾವ್ ಕಾಲದಲ್ಲಿ ಪ್ರಧಾನಮಂತ್ರಿಗಳ ಸಚಿವಾಲಯದಲ್ಲೂ ಕಾರ್ಯನಿರ್ವಹಿಸಿದ್ದರು. 2004ರ ಲೋಕಸಭಾ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್‌ನ ರಣತಂತ್ರ ಹೆಣೆದ ಮಿದುಳುಗಳಲ್ಲಿ ಜೈರಾಮ್ ರಮೇಶ್ ಕೂಡ ಪ್ರಮುಖರು. ಇವತ್ತಿಗೂ ಸೋನಿಯ ಅವರ ಇಂಗ್ಲಿಷ್ ಭಾಷಣಗಳನ್ನು, ಪಕ್ಷದ ಪ್ರಕಟಣೆಗಳನ್ನು ಬರೆಯುತ್ತಿರುವವರೇ ಜೈರಾಮ್ ರಮೇಶ್.

ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರಲ್ಲಿ ಕೆಲಸ ಮಾಡುತ್ತಿರುವುದು ಸಂಜಯ್ ಬಾರು ಎಂಬ ಬ್ರಾಹ್ಮಣ ಮೆದುಳು. ಬಾರು ಅವರು ಪ್ರಧಾನಿಗಳಿಗೆ ಕೇವಲ ಮಾಧ್ಯಮ ಸಲಹೆಗಾರರು ಮಾತ್ರವಲ್ಲ, ಅವರ ಆಪ್ತ ನಂಬುಗೆಯ ವ್ಯಕ್ತಿ ಕೂಡ. ಮನಮೋಹನ್ ಸಿಂಗ್ ಅವರಿಗೆ ಅತ್ಯುತ್ತಮ, ಸಮರ್ಥ ನಾಯಕ ಎಂಬ ಇಮೇಜು ಬಂದಿದ್ದರಲ್ಲಿ ಬಾರು ಪಾತ್ರ ದೊಡ್ಡದು. ಅದೇ ವೇಳೆಯಲ್ಲಿ ಸೋನಿಯಾ ಗಾಂಧಿಯನ್ನು ಸೈಡ್‌ಲೈನ್ ಮಾಡದ ಹಾಗೆ ಈ ಕೆಲಸ ಮಾಡಿದ್ದು ಅವರ ಚಾಣಾಕ್ಷತನ.

ತಮಿಳುನಾಡಿನ ಎಐಎಡಿಎಂಕೆ ಪಕ್ಷದ ಜಯಲಲಿತಾಳ ಬೆನ್ನಿಗಿರುವುದು ಚೋ ರಾಮಸ್ವಾಮಿ ಎಂಬ ತಮಿಳು ಬ್ರಾಹ್ಮಣನ ತಲೆ. ಬಿಹಾರದ ಮುಖ್ಯಮಂತ್ರಿ ಜನತಾದಳ (ಯುನೈಟೆಡ್) ಪಕ್ಷದ ನಾಯಕ ನಿತೀಶ್ ಕುಮಾರ್‌ನನ್ನು ಮುನ್ನಡೆಸುತ್ತಿರುವುದು ಶಿವಾನಂದ ತಿವಾರಿ ಎಂಬ ಬ್ರಾಹ್ಮಣ. ಒಂದು ಕಾಲದಲ್ಲಿ ಸಮಾಜವಾದಿ ಪಕ್ಷದ ಮುಲಾಯಂ ಸಿಂಗ್ ಯಾದವ್‌ನನ್ನು ಯಶಸ್ವಿಯಾಗಿ ಮುನ್ನಡೆಸಿದ್ದು ಜ್ಞಾನೇಶ್ವರ್ ಮಿಶ್ರ ಎಂಬ ಬ್ರಾಹ್ಮಣ. ಎಡಪಕ್ಷಗಳೂ ಇದಕ್ಕೆ ಹೊರತಲ್ಲ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸಿಪಿಎಂನ ಬುದ್ಧದೇವ್ ಭಟ್ಟಾಚಾರ್ಯ ಖುದ್ದಾಗಿ ತಾವೇ ಒಬ್ಬ ಚಾಣಕ್ಯ. ಅಲ್ಲದೇ ಮೈತ್ರಿಕೂಟ ತಂತ್ರಗಳನ್ನು ಯಶಸ್ವಿಯಾಗಿ ಹೆಣೆಯಬಲ್ಲ ಸಿಪಿಎಂನ ಸೀತಾರಾಮ್ ಯೆಚೂರಿ ಕೂಡ ಒಬ್ಬ ಬ್ರಾಹ್ಮಣ.




ದೇವೇಗೌಡ-ದತ್ತ ನಿತೀಶ್ - ತಿವಾರಿ ನ.ಪಟ್ನಾಯಕ್-ಮೊಹಪಾತ್ರ ಸೀತಾರಾಂ-ಯುಚೂರಿ ಜಯಲಲಿತ-ಚೊ.ರಾಮ ಸ್ವಾಮಿ

ಬ್ರಾಹ್ಮಣ ವಿರೋಧಿ ಪಕ್ಷವೆಂದೇ ಹೆಸರಾಗಿರುವ ತಮಿಳುನಾಡಿನ ಡಿಎಂಕೆ ಪಕ್ಷದ ನಾಯಕ ಎಂ.ಕರುಣಾನಿಧಿ ಬಹಳಷ್ಟು ವರ್ಷಗಳ ಕಾಲ ಎಸ್.ಗುಹಾನ್ ಎಂಬ ಬ್ರಾಹ್ಮಣನನ್ನೇ ಅವಲಂಬಿಸಿದ್ದರು. 1996ರಲ್ಲಿ ಡಿಎಂಕೆ ಎನ್‌ಡಿಎ ಬಿಟ್ಟು ಯುಪಿಎ ಜೊತೆ ಹೋಗುವಂತೆ ಮಾಡಿದ್ದು ಇದೇ ಗುಹಾನ್. 1998ರಲ್ಲಿ ಅವರು ಮರಣ ಹೊಂದುವುದರೊಂದಿಗೆ ಕರುಣಾನಿಧಿ ಒಬ್ಬ ಚಾಣಕ್ಯನನ್ನು ಕಳೆದುಕೊಂಡಂತಾಯಿತು. ಇನ್ನು ನಮ್ಮ ದೇವೇಗೌಡರ ಬಗಲಲ್ಲೂ ದತ್ತ ಎಂಬ ಚಾಣಕ್ಯ ಇದ್ದಾರೆ. ಗೌಡರ ತಂತ್ರ, ತರ್ಕಗಳಲ್ಲಿ ದತ್ತನ ಪಾಲೂ ಇದ್ದೇ ಇರುತ್ತದೆ. ಮಾತ್ರವಲ್ಲ ಗೌಡರ ಚಿಂತನೆಗಳನ್ನು ಅಕ್ಷರರೂಪಕ್ಕೆ ಇಳಿಸುವುದು, ಪತ್ರಿಕಾ ಹೇಳಿಕೆಗಳನ್ನು ಬರೆಯುವುದು, ಜಾತ್ಯತೀತ ಜನತಾ ದಳದ ಪರ ಸಮರ್ಥವಾಗಿ ಚರ್ಚಿಸಬಲ್ಲ ಏಕೈಕ ವ್ಯಕ್ತಿ ಈ ದತ್ತ. ಗೌಡರ ಮೆದುಳನ್ನು ಮೀರಿಸುವಷ್ಟು ದತ್ತ ಪ್ರಬುದ್ಧರಲ್ಲದಿದ್ದರೂ ತನ್ನೊಂದಿಗೆ ಒಂದು extra ಚಾಣಕ್ಯ ಮೆದುಳು ಇರಲೆಂದು ಗೌಡರು ಇವರನ್ನು ತಮ್ಮ ಪಕ್ಕದಲ್ಲೇ ಇಟ್ಟುಕೊಂಡಿದ್ದಾರೆ!

...ಮಾವೇಶದ ...ಸರಲ್ಲಿ ...ೋಲ್ ಕಾಲ್

...ಟ್ಟಾ ನಾಶಕ್ಕೆ ...ಕಮ್ಮಾ ಶಾಪ

ಕಮ್ಮಾ ಸಮಾವೇಶದ ಹೆಸರಲ್ಲಿ ಕಮ್ಮಿಯೆಂದರೂ ಮೂರು ಕೋಟಿ ಬಾಚಿದ್ದು ಕಟ್ಟಾ ನಾಯ್ಡುವಿನ ಕಿಲಾಡಿ ಬುದ್ಧಿಯಷ್ಟೆ. ಸಮಾವೇಶ ಮಾಡಿ ಅಂತ ಯಾರೂ ಕೇಳಿಲ್ಲ, ನಿಜಕ್ಕೂ ಇದು ಕಮ್ಮ ಜನಾಂಗದ ಅನಿವಾರ್ಯ ಸಮಾವೇಶವಾಗಿರಲಿಲ್ಲ. ಕಮ್ಮಗಳ ಮೀಸಲಾತಿ ಕುರಿತಾಗಲಿ, ಆರ್ಥಿಕ ಏಳಿಗೆಯ ಬಗ್ಗೆಯಾಗಲಿ, ಶೈಕ್ಷಣಿಕ ಸಬಲೀಕರಣದ ಕುರಿತಾಗಲಿ ಒಂದೇ ಒಂದು ನಿರ್ಣಯ ಕೈಗೊಳ್ಳಲಿಲ್ಲ. ಊಟ-ನೀರು ಬಿಟ್ಟರೆ ಬಂದವರಿಗೆ ಕನಿಷ್ಠ ಸಾರಿಗೆ ವ್ಯವಸ್ಥೆಯನ್ನು ಮಾಡಲಿಲ್ಲ. ಆಯಾ ಕಮ್ಮ ಸಂಘಗಳಿಗೆ ಕೊಡುತ್ತೇನೆಂದ ದುಡ್ಡನ್ನೂ ಕಟ್ಟಾ ಬಟವಾಡೆ ಮಾಡಿಲ್ಲ. ಹಾಗಾದರೆ ಸಂಗ್ರಹಿಸಿದ ದುಡ್ಡು ಏನಾಯಿತು?



...ೋಭಿಗೆ ತನ್ನದೇ ಸಂಬಂಧಿಯಾದರೇನು? ಜಾತಿ ...ರೇನು? ಆಪ್ತರಾದರೇನು? ಎಷ್ಟೇ ಸುಟ್ಟರೂ ಹುಟ್ಟು ...ಹೋಗುತ್ತಾ? ಅಬಕಾರಿ ಮಂತ್ರಿ ಕಟ್ಟಾ ಸುಬ್ರಮಣ್ಯಂ ... ತಾನು ಕಲಿತ ಬುದ್ಧಿಯನ್ನು ಕೊನೆಗೂ ತನ್ನದೇ ...ಂಧವರಾದ ಕಮ್ಮಗಳಿಗೆ ತೋರಿಸಿಯೇ ಬಿಟ್ಟ. ...ಟ್ಟಾನಾಯ್ಡು ವಿರುದ್ಧ ಅವರದೇ ಕಮ್ಮ ಸಮೂಹ ...ಬೀಳುವುದಕ್ಕೂ ಕಾರಣಗಳಿವೆ. ಅದು ಫೆಬ್ರವರಿ ... ಭಾನುವಾರದಂದು ಬೆಂಗಳೂರಿನ ಅರಮನೆ ಮೈ...ಲ್ಲಿ ನಡೆದ ಕಮ್ಮವಾರಿ ಸಮಾವೇಶ. ರಾಜ್ಯದ ಜನ...ಮಲ್ಲಿ ಸರಿಸುಮಾರು 30 ಲಕ್ಷದಷ್ಟಿರುವ 'ಕಮ್ಮ'ಗಳ ...ಕು-ಭವಿಷ್ಯಕ್ಕೆ ಸೋಪಾನವಾಗಬೇಕಿದ್ದ ಬೃಹತ್

ನಾಯ್ಡು, ಭೂಕಂಟಕ ರೆಡ್ಡಿ ವೀರಣ್ಣ, ಲಹರಿ ರೆಕಾರ್ಡಿಂಗ್ ಕಂಪೆನಿಯ ಮನೋಹರ್ ನಾಯ್ಡು ಮುಂತಾದವರೆಲ್ಲ ತಲಾ ಇಪ್ಪತ್ತೈದು ಲಕ್ಷದಂತೆ ಸಮಾವೇಶಕ್ಕೆಂದು ಸುರಿದಿದ್ದಾರೆ. ಹೀಗೆ ಸಂಗ್ರಹಗೊಂಡ 'ಕಮ್ಮ' ಕುಬೇರರ ದುಡ್ಡೆಲ್ಲ ನೇರವಾಗಿ ಕಟ್ಟಾ ಕೈಗೇ ಬಂದಿದೆ. ಏಕೆಂದರೆ ಇಡೀ ಸಮಾವೇಶದ ಪರಿಕಲ್ಪನೆ ಮತ್ತು ಸಂಘಟನೆಯ ಪೂರ್ತಿ ಜವಾಬ್ದಾರಿಯಿದ್ದದ್ದು ಕಟ್ಟಾ ಕೈಯಲ್ಲೇ. ಸ್ವಾಗತ ಸಮಿತಿಯ ಅಧ್ಯಕ್ಷನಾಗಿದ್ದದ್ದು ಕೂಡ ಕಟ್ಟಾ ನಾಯ್ಡುವೇ.


ಏನೋ ಕಮ್ಮ ಜನಾಂಗ ಈ ಕಾರಣಕ್ಕಾದರೂ ಸಂಘಟನೆಗೊಳ್ಳಲಿ ಎಂದೇ ಮಿಕ್ಕೆಲ್ಲ ಕಮ್ಮ ನಾಯಕರು ಮೊದಮೊದಲು ತೆಪ್ಪಗಿದ್ದು ಕಾರ್ಯಕ್ರಮದ ಯಶಸ್ಸಿಗೆ

ಪ್ರಾರಂಭದಲ್ಲಿ ಕಟ್ಟಾ ಮೇಲೆ ಪ್ರೀತಿಯಿಟ್ಟೇ ಒಂದಷ್ಟು ಮಂದಿ ಕಮ್ಮ ನಾಯಕರು ಸಮಾವೇಶಕ್ಕೆ ಕೈಜೋಡಿಸಿದ್ದಾರೆ. ಆದರೆ ಸಮಾವೇಶದ ಇಡೀ ವೇದಿಕೆಯೇ ಬಿಜೆಪಿಮಯವಾಗಿ ರೂಪುಗೊಂಡಿದ್ದನ್ನು ಕಂಡ ಮೇಲೆ ಅರ್ಥವಾಗಿದ್ದೆಂದರೆ ಇದು ಕಮ್ಮ ಸಮಾವೇಶವಲ್ಲ ಕಟ್ಟಾ ಸಮಾವೇಶ.


ಸರಿಸುಮಾರು 25 ಲಕ್ಷ ರೂಪಾಯಿಗಳಷ್ಟನ್ನು ಸುರಿದು ರಾಜ್ಯದ ಬೇರೆ ಬೇರೆ ಭಾಗಗಳಿಂದ ತನ್ನ ಕುಲಬಾಂಧವರನ್ನು ಕರೆತಂದಿದ್ದ ಜೆಡಿಎಸ್ ನಾಯಕ ಪ್ರಸಾದ್ ಬಾಬು ಉರ್ಫ್ ಕಬಡ್ಡಿ ಬಾಬು ಬೆಂಬಲಿಗರು ಅರಮನೆ ಮೈದಾನದುದ್ದಕ್ಕೂ ಹಾಕಿದ ಕಟೌಟ್ ಬ್ಯಾನರ್‌ಗಳನ್ನೆಲ್ಲ ಸ್ವತಃ ಕಟ್ಟಾ ನಾಯ್ಡುವೇ ನಿಂತು ಕಿತ್ತು ಹಾಕಿಸಿದ್ದ. ಅಂಥ ಜಾಗಕ್ಕೆಲ್ಲ ಕಟ್ಟಾ ನಾಯ್ಡುವಿನ


ಮುಖ್ಯಮಂತ್ರಿ ಯಡಿಯೂರಪ್ಪ ವೇದಿಕೆಗೆ ಬಂದದ್ದೇ ತಡ, ಎರ್ರಾಬರ್ರಿ ಕಟ್ಟಾ ಗುಣಗಾನ ಶುರು ಹಚ್ಚಿಕೊಂಡರು. ಬಿಜೆಪಿಯ ಮತ್ತೊಬ್ಬ ನಾಯಕ ಆರ್. ಅಶೋಕ್ ಏಕಾಏಕಿ ವೇದಿಕೆ ಆಕ್ರಮಿಸಿಕೊಂಡರು. ಕೇಂದ್ರ ಸಚಿವೆ ಪುರಂದರೇಶ್ವರಿಯನ್ನೇ ಮೂಲೆಗುಂಪು ಮಾಡಿದ ಕಟ್ಟಾ ತನ್ನ ಪತ್ನಿ ಸೌಭಾಗ್ಯಮ್ಮನನ್ನು ವೇದಿಕೆಗೆ ಹತ್ತಿಸಿ ಪತ್ನಿ ಸಮೇತ ಭಾರೀ ಹೂವಿನ ಹಾರ ಹಾಕಿಸಿಕೊಂಡರು. ಕಟ್ಟಾ ಪುತ್ರ ಜಗ್ಗನ ಗ್ಯಾಂಗ್ ಇದ್ದಕ್ಕಿದ್ದಂತೆ ಅಪ್ಪನಿಗೆ ಜೈಕಾರ ಶುರು ಹಚ್ಚಿಕೊಂಡಿತು. ಕಮ್ಮ ಜನಾಂಗದ ಬದುಕು-ಭವಿಷ್ಯದ ಕುರಿತು ಚರ್ಚೆ ಶುರುವಾಗುವ ಬದಲು ಕಟ್ಟಾ ದಂಪತಿಗಳ ಭಜನೆ ನಡೆಯುತ್ತಿದ್ದನ್ನು ಕಂಡು ಬಳ್ಳಾರಿಯ ದಿವಾಕರ್


...ನಂದ್‌ಕುಮಾರ್



ಪ್ರಸಾದ್ ಬಾಬು


ಏಕಾಂಬರಂ ನಾಯ್ಡು



ಆರ್.ವಿ. ಹರೀಶ್


ರಾಕ್‌ಲೈನ್ ವೆಂಕಟೇಶ್


ದೊರೆಸ್ವಾಮಿ ನಾಯ್ಡು


ಗೋಪಾಲ್ ನಾಯ್ಡು


ಗುರಪ್ಪ ನಾಯ್ಡು


ರುಕ್ಮಾಂಗದ ನಾಯ್ಡು

...ಮನ್ನು ಮುಖ್ಯಮಂತ್ರಿ ಯಡಿಯೂರಪ್ಪನವರ 'ಪಾದ...'ಕ್ಕೆ ಪೊಡಮಟ್ಟಿಸಿ, ಇಡೀ ಕಮ್ಮ ಸಮೂಹಕ್ಕೇ ತೊಡಿಸಿ, 'ಕಮ್ಮಾ ಅಂದರೇನೇ ಕಟ್ಟಾ-ಕಟ್ಟಾ ...ಲೇನೇ ಕಮ್ಮಾ' ಎನ್ನುವಷ್ಟರಮಟ್ಟಿಗೆ ಎಕ್ಕುಡಿಸಿದ ಕಟ್ಟಾ ವಿರುದ್ಧ ಇಡೀ ಕಮ್ಮಾ ಸಮೂಹ ತಿರುಗಿ ಹಿಡಿಶಾಪಹಾಕುತ್ತಿದೆ.

...ಷ್ಟೆಲ್ಲಾ ಕೋಟಿ ಸುರಿದು, ಲಕ್ಷಗಟ್ಟಲೇ ಜನ ಸೇರಿಸಿ, ...ಲೀಡರುಗಳನ್ನೆಲ್ಲ ಕಲೆಹಾಕಿ ಹಿಂದೆಂದೂ ಕಾಣದಂಥ ... ಸಮಾವೇಶ ಅಂತ ಸಂಘಟಿಸಿದರೆ ಇಡೀ ಕಾರ್ಯ...ನ್ನೇ ಹೈಜಾಕ್ ಮಾಡಿ ಬಿಜೆಪಿಯ ಕಾಲಿಗೆ ಕೆಡವಿದ್ದು ...ಾಯ್ಡು. ಈ ಪುರುಷಾರ್ಥಕ್ಕೆ ನಾವೆಲ್ಲ ದುಡ್ಡು ಕೊಡ...ತ್ತಾ? ಬಿಜೆಪಿಗೆ ಜೈಕೂಗೋದಕ್ಕೆ ನಾವೆಲ್ಲ ಜನ ಸೇರಿಸ...ತ್ತಾ? ಆ ಕಾಲದಿಂದಲೂ ಜನಾಂಗದವರನ್ನು ಸಂಘಟಿಸಿ...ಕು ಬಂದ ನಮಗೇ ಮೂರ್ಕಾಸಿನ ಬೆಲೆ ಇಲ್ಲದ ...ಇನ್ನು ಜನಾಂಗಕ್ಕೆ ಏನು ಮರ್ಯಾದೆ ಕೊಡ್ತಾರೆ? ...ದು ಫೆಬ್ರವರಿ 22 ರ ಅರಮನೆ ಮೈದಾನದ ... ಸಮಾವೇಶದ ನಂತರ ವಿವಿಧ ಕಮ್ಮ ರಾಜಕಾರಣಿ...ಾಯಿಂದ ಉದುರಿದ ಶಬ್ದಾವಳಿ. ಇದನ್ನೇ ನೆಪ...ಕೊಂಡು ಸರಿಸುಮಾರು ಮೂರು ಕೋಟಿಯಷ್ಟು ...ಕಾಲ್' ಮಾಡಿಕೊಂಡಿದ್ದಾರೆಂದು 'ಕಮ್ಮ' ಉದ್ಯಮಿ...ರು ಕಟ್ಟಾ ವಿರುದ್ಧ ಆರೋಪಿಸಿದ್ದಾರೆ. ಸಮಾವೇಶದ ...ಕೊಡುವಂತೆ ಕಟ್ಟಾ ವಿರುದ್ಧ ಒಂದಿಬ್ಬರು ಕಮ್ಮ...ಕರು ಪದೇಪದೇ ಗುದುಗುತ್ತಿದ್ದಾರೆಂದರೆ ಏನರ್ಥ? ...ಬ್ರವರಿ 22 ರ ಕಮ್ಮಾ ಸಮಾವೇಶಕ್ಕೆಂದು ಕಂಟ್ರಾಕ್ಟರ್ ಚಿತ್ರ ನಿರ್ಮಾಪಕ ಮುನಿರತ್ನಂ ನಾಯ್ಡು ದೊಡ್ಡ...ದ ನಿಧಿ ಕೊಟ್ಟರು. ಪೀಇಎಸ್ ಕಾಲೇಜಿನ ಧಣಿ ...ಸ್ವಾಮಿ ನಾಯ್ಡು ಮಿಕ್ಕೆಲ್ಲರಿಗಿಂತಲೂ ಹೆಚ್ಚು ಮೊತ್ತದ ...ಬಿಚ್ಚಿದ್ದರು. ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ...ಟ್ಟ ಕುಬೇರ ನೀಲಕಂಠ ನಾಯ್ಡು, ಆನಂದ್ ಗ್ಲಾಸ್‌ನ ...ಕ ಕೆ. ಆನಂದ್‌ಕು...ರ್, ಕುಮಾರಸ್ವಾಮಿಯುವರ ...ಬಂಟ ಕಬಡ್ಡಿ ಬಾಬು, ನಿವೃತ್ತ ಕಮರ್ಷಿಯಲ್ ಅಧಿಕಾರಿ ಎಸ್. ಗುರಪ್ಪ, ಕಾಂಗ್ರೆಸ್ ಪುಢಾರಿ ... ನಾಯ್ಡು, ಐಡಿಯಲ್ ಹೋಮ್ಸ್‌ನ ಎಂ. ರಾಜ್...ರ್- ಹೀಗೆ 'ಕಮ್ಮ' ಕುಲಬಾಂಧವರ ಸಂಘಟನೆಗೆಂದು ...ತಂದು ಕಟ್ಟಾ ಕೈಗಿತ್ತವರ ದೊಡ್ಡ ಪಟ್ಟಿಯೇ ಇದೆ. ... ಪ್ರೈಸಿ ಡೆವಲಪರ್ ರಾಜಗೋಪಾಲ ನಾಯ್ಡು, ...ರ್ ಪಿಸ್ಟೇಟ್ ಕುಳ ರುಕ್ಮಾಂಗದ ನಾಯ್ಡು, ಲ್ಯಾಂಡ್ ...ರ್ ನಾಗರಾಜ ನಾಯ್ಡು, ಬಿಡಿಎ ಕಂಟ್ರಾಕ್ಟರ್ ವಿ.ಕೆ. ...ಲ್, ಏಷ್ಯನ್ ಅಕಾಡೆಮಿ ಕಾಲೇಜಿನ ಏಕಾಂಬರಂ

ಕೈಜೋಡಿಸಿದ್ದಾರೆ. ತಮ್ಮ ಕೈಯಾರೇ ದುಡ್ಡು ಹಾಕಿ ದೂರದ ರಾಯಚೂರು, ಸಿಂಧನೂರು, ಬಳ್ಳಾರಿ, ಕೊಪ್ಪಳಗಳಿಂದ ಲಾರಿ ಬಸ್ಸುಗಳ ಮೂಲಕ ಜನಾಂಗದ ಬಡವರನ್ನು ಕರೆತಂದಿದ್ದಾರೆ. ಇನ್ನೇನು ಸಮಾವೇಶ ಮುಗಿಸಿ ಕರೆತಂದವರನ್ನೆಲ್ಲ ವಾಪಸ್ಸು ಕರೆದೊಯ್ಯಬೇಕಲ್ಲ; ಬಸ್ಸು ಲಾರಿಗೆ ದುಡ್ಡು ಕೊಡಿ ಎಂದು ಕಮ್ಮನಾಯಕರು ಕೇಳಿದರೆ 'ಡಬ್ಬುಲೇದು' ಎಂದು ಕೈಚೆಲ್ಲಿಬಿಟ್ಟರು ಮಂತ್ರಿ ಕಟ್ಟಾ ನಾಯ್ಡು.

ಹಾಗಾದರೆ ಸಮಾವೇಶಕ್ಕೆಂದು ಎತ್ತಿದ ದುಡ್ಡು ಏನಾಯಿತು? ಇದು ಕಮ್ಮ ನಾಯಕರೆಲ್ಲ ಸೇರಿ ಕಟ್ಟಾರನ್ನು ಕೇಳಿದ ಪ್ರಶ್ನೆ.

ಊಟಕ್ಕೆ, ಜಾಹೀರಾತಿಗೆ, ಪೆಂಡಾಲಿಗೆ, ಜಾಗದ ಬಾಡಿಗೆಗೆ, ಮೈಕಿಗೆ ಏನು ಬಿಟ್ಟಿ ಬರುತ್ತಾ? ಎಂದು ಕಟ್ಟಾ ಮುಖ ಸಿಂಡರಿಸುತ್ತಿದ್ದರು. ಎಲ್ಲಿ ದುಡ್ಡು ಕೇಳುತ್ತಾರೋಎಂದು ಸಿಕ್ಕಸಿಕ್ಕವರ ಮೇಲೆ ರೇಗುತ್ತಿದ್ದರು. ಕೊನೆಗೂ ಜನಾಂಗದ ಬಡವರನ್ನು ಕರೆತಂದ ತಪ್ಪಿಗೆ ತಮ್ಮ ಕೈಯಿಂದ ದುಡ್ಡು ಹಾಕಿ ವಾಪಸ್ಸು ಕರೆದೊಯ್ದ ಕಮ್ಮ ನಾಯಕರೆಲ್ಲ ಇವತ್ತಿಗೂ ಕಟ್ಟಾ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ.

ಕಮ್ಮಾ ಸಮಾವೇಶದ ಹೆಸರಲ್ಲಿ ಕಮ್ಮಿಯೆಂದರೂ ಮೂರು ಕೋಟಿ ಬಾಚಿದ್ದು ಕಟ್ಟಾ ನಾಯ್ಡುವಿನ ಕಿಲಾಡಿ ಬುದ್ಧಿಯಷ್ಟೆ. ಸಮಾವೇಶ ಮಾಡಿ ಅಂತ ಯಾರೂ ಕೇಳಿಲ್ಲ, ನಿಜಕ್ಕೂ ಇದು ಕಮ್ಮ ಜನಾಂಗದ ಅನಿವಾರ್ಯ ಸಮಾವೇಶವಾಗಿರಲಿಲ್ಲ. ಮೀಸಲಾತಿ ಸಮಸ್ಯೆಯಾಗಲಿ, ಜಾತಿಯ ಕಾರಣಕ್ಕೆಂದೇ ಏರ್ಪಟ್ಟ ಶೋಷಣೆಯಾಗಲಿ ಕಮ್ಮಗಳಿಗಿಲ್ಲ, ಬೆಂಗಳೂರಿನ ಮಟ್ಟಿಗೆ ಹೇಳಬೇಕೆಂದರೆ ಕಮ್ಮಗಳು ಮಣ್ಣಿನ ಮಕ್ಕಳಾದ ಒಕ್ಕಲಿಗರಿಗಿಂತಲೂ ಆರ್ಥಿಕವಾಗಿ ಬಲಿಷ್ಠರು. ರೆಡ್ಡಿ ವೀರಣ್ಣ, ಪೀಇಎಸ್ ಧಣಿ ದೊರೆಸ್ವಾಮಿ ನಾಯ್ಡು, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಲಹರಿ ಮನೋಹರ್ ನಾಯ್ಡು, ಲ್ಯಾಂಡ್ ಡೆವಲಪರ್ ರಾಜಗೋಪಾಲ ನಾಯ್ಡು, ರುಕ್ಮಾಂಗದ ನಾಯ್ಡು, ಕ್ಯಾಪಿಟೇಶನ್ ಖದೀಮ ಏಕಾಂಬರಂ ನಾಯ್ಡು ಮುಂತಾದವರಿಗೆ ಹೋಲಿಸಿದರೆ ಲಿಂಗಾಯತರು, ಒಕ್ಕಲಿಗರು ಏನೇನೂ ಅಲ್ಲ!

ಇಂಥ ಅನುಕೂಲಸ್ಥ ಸಮೂಹದ ಸಂಘಟನೆಯ ನೆಪದಲ್ಲಿ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುವ ತಲೆ ಓಡಿಸಿದ್ದು ಕಟ್ಟಾ. ತನ್ಮೂಲಕ ಇಡೀ ಕಮ್ಮ ಸಮೂಹವನ್ನು ಕೇಸರೀಕರಣಗೊಳಿಸುವುದು, ತಾನೇ ಕಮ್ಮಗಳ ಏಕಚಕ್ರಾಧಿಪತಿಯೆಂದು ಪೋಜು ಕೊಡುವುದು ಮತ್ತು ಈ ನೆಪದಲ್ಲಿ ಒಂದಿಷ್ಟು ಕೋಟಿ ಬಾಚುವುದು!

ಕಟೌಟುಗಳು ಬಂದಿದ್ದವು. ಹಾಗೇ ವೇದಿಕೆಯಲ್ಲೇ ಅಪಮಾನಿತರಾಗಿ ಅರ್ಧಕ್ಕೇ ಎದ್ದು ಹೋಗಿದ್ದು ಮಾಜಿ ಮಂತ್ರಿ ಎಂ. ರಘುಪತಿ!

ಫೆಬ್ರವರಿ 22 ರ ಅರಮನೆ ಮೈದಾನದ ಇಡೀ ವೇದಿಕೆಯನ್ನೇ ಕಟ್ಟಾ ಗ್ಯಾಂಗ್ ಹೈಜಾಕ್ ಮಾಡಿತ್ತು. ಮಾಜಿ ಮಂತ್ರಿ ಎಂ. ದಿವಾಕರ್ ಬಾಬು ಹೇಳಿಕೇಳಿ ಕಮ್ಮ ಜನಾಂಗದ ಪ್ರಭಾವಿ ನಾಯಕ. ಮತ್ತೊಬ್ಬ ಮಾಜಿ ಮಂತ್ರಿ ತಿಪ್ಪಾರೆಡ್ಡಿ ಕೂಡ ಆ ಕಾಲದಿಂದಲೂ ಕಮ್ಮ ಜನಾಂಗದ ಶ್ರೇಯೋಭಿಲಾಷಿಯೆ. ಅವರ ಅಣ್ಣ ಅಶ್ವತ್ಥ ರೆಡ್ಡಿ, ಕಾಂಗ್ರೆಸ್ ಎಂಎಲ್‌ಸಿ ಆರ್.ವಿ. ವೆಂಕಟೇಶ್, ಬಿಜೆಪಿಯ ಮತ್ತೊಬ್ಬ ನಾಯಕ ಆರ್.ವಿ. ಹರೀಶ್ ಮುಂತಾದ ಯಾರೇ ಕಮ್ಮ ರಾಜಕಾರಣಿಗಳನ್ನು ಕಾಟಾಚಾರಕ್ಕೂ ವೇದಿಕೆಯಲ್ಲಿ ಸನ್ಮಾನಿಸದೇ ಇಡೀ ಕಾರ್ಯಕ್ರಮವನ್ನೇ ಬಿಜೆಪಿಮಯಗೊಳಿಸಿಬಿಟ್ಟರು ಕಟ್ಟಾ ನಾಯ್ಡು.


ಬಾಬು, ಮಾಜಿ ಮಂತ್ರಿಗಳಾದ ಅಶ್ವತ್ಥರೆಡ್ಡಿ, ತಿಪ್ಪಾರೆಡ್ಡಿ ಮುಂತಾದವರೆಲ್ಲ ಅರ್ಧಕ್ಕೇ ಕಾರ್ಯಕ್ರಮದಿಂದ ಹೊರನಡೆದರು.

ಅಂತಿಮವಾಗಿ ಸಮಾವೇಶ ಮುಕ್ತಾಯವಾಗಿದ್ದು ಕೂಡ ಕಟ್ಟಾ ಭಜನೆಯೊಂದಿಗೆಯೇ!

ಈ ಪುರುಷಾರ್ಥಕ್ಕೆ ರಾಜ್ಯಾದ್ಯಂತ ಇಷ್ಟೊಂದು ಕಮ್ಮಗಳು ತಲೆಕೆಡಿಸಿಕೊಳ್ಳಬೇಕಿತ್ತೆ? ಕಮ್ಮಗಳ ಮೀಸಲಾತಿ ಕುರಿತಾಗಲಿ, ಆರ್ಥಿಕ ಏಳಿಗೆಯ ಬಗ್ಗೆಯಾಗಲಿ, ಶೈಕ್ಷಣಿಕ ಸಬಲೀಕರಣದ ಕುರಿತಾಗಲಿ ಒಂದೇ ಒಂದು ನಿರ್ಣಯ ಕೈಗೊಳ್ಳಲಿಲ್ಲ, ಊಟ-ನೀರು ಬಿಟ್ಟರೆ ಬಂದವರಿಗೆ ಕನಿಷ್ಠ ಸಾರಿಗೆ ವ್ಯವಸ್ಥೆಯನ್ನು ಮಾಡಲಿಲ್ಲ. ಆಯಾ ಕಮ್ಮ ಸಂಘಗಳಿಗೆ ಕೊಡುತ್ತೇನೆಂದ ದುಡ್ಡನ್ನೂ ಕಟ್ಟಾ ಬಟವಾಡೆ ಮಾಡಿಲ್ಲ, ಹಾಗಾದರೆ ಸಂಗ್ರಹಿಸಿದ ದುಡ್ಡು ಏನಾಯಿತು?

● ರಾ. ಸೋಮನಾಥ್

ಅಬಕಾರಿ ಅಧಿಕಾರಿಗಳ ಎತ್ತುವಳಿ


ಕೃಷ್ಣ ಕೆ.

ಕಮ್ಮ ನಾಯಕರು ಮತ್ತು ಶ್ರೀಮಂತರಷ್ಟೇ ಅಲ್ಲದೇ ತನ್ನ ಇಲಾಖೆಯ ಅಧಿಕಾರಿಗಳು ಮತ್ತು ಲಿಕ್ಕರ್ ದೊರೆಗಳಿಂದಲೂ ಕಮ್ಮ ಸಮಾವೇಶಕ್ಕೆಂದು ಕಟ್ಟಾ ದುಡ್ಡೆತ್ತಿದ್ದಾರೆ. ಲಿಕ್ಕರ್ ದೊರೆ ಜೆ.ಪಿ. ನಾರಾಯಣಸ್ವಾಮಿ ಒಬ್ಬರೇ ರ್‍ಯಾಲಿಗೆಂದು 25 ಲಕ್ಷ ಕೊಟ್ಟಿದ್ದಾರೆಂದರೆ ಉಳಿದಂತೆ ಅಬಕಾರಿ ಅಧಿಕಾರಿಗಳು ಮತ್ತು ಕಟ್ಟಾ ಸುಪರ್ದಿಗೆ ಬರುವ ಬೆಂಗಳೂರು ಜಲಮಂಡಳಿಯ ಕಂಟ್ರಾಕ್ಟರುಗಳಿಂದ ಬಂದ ದುಡ್ಡೆಷ್ಟು?

ಹಿರಿಯ ಅಬಕಾರಿ ಅಧಿಕಾರಿಯೊಬ್ಬರ ಪ್ರಕಾರ ತನ್ನ ಇಲಾಖೆಯೊಂದರಿಂದಲೇ ಕಟ್ಟಾ ಜೇಬಿಗೆ ಒಂದು ಕೋಟಿಯ ನಿಧಿ ಸಂದಾಯವಾಗಿದೆ. ಅಬಕಾರಿ ಕಮೀಷನರ್ ಯೋಗೇಂದ್ರ ತ್ರಿಪಾಠಿ ಅಬಕಾರಿ ಡಿಸಿಗಳಾದ ಗದ್ದಿ, ಲಕ್ಷ್ಮೀನಾರಾಯಣ, ಮೋಹನ್‌ಕುಮಾರ್ ಮಾತ್ರವಲ್ಲದೇ ವಿಚಕ್ಷಣಾ ದಳದ ಮುಖ್ಯಸ್ಥ ಈರಪ್ಪ ಮತ್ತಾತನ ಶಿಷ್ಯ ಭರತೇಶ್‌ಗೌಡನ ಮೂಲಕ ಕಮ್ಮ ಸಮಾವೇಶಕ್ಕೆಂದು ಎತ್ತುವಳಿ ಮಾಡುವಂತೆ ಸ್ವತಃ ಕಟ್ಟಾಮಗ ಜಗ್ಗನೇ ಕಮೀಷನರ್ ತ್ರಿಪಾಠಿಗೆ ದುಂಬಾಲು ಬಿದ್ದಿದ್ದಾನೆ. ಇದಲ್ಲದೆ ಜಲಮಂಡಳಿಯ ಇಂಜಿನಿಯರ್‌ಗಳೂ ಕೂಡ ಕೆಲ ಕಂಟ್ರಾಕ್ಟರ್‌ಗಳಿಂದ ರೊಕ್ಕ ವಸೂಲಿ ಮಾಡಿದ್ದಾರೆ. ಮಿಕ್ಕಂತೆ ಪೀಇಎಸ್ ಕಾಲೇಜಿನ ಧಣಿ ದೊರೆಸ್ವಾಮಿ ನಾಯ್ಡು ಮತ್ತು ಕಮ್ಮವಾರಿ ಸಂಘದ ಅಧ್ಯಕ್ಷ ಕೆ. ಕೃಷ್ಣ ತಮ್ಮ ಶಕ್ತ್ಯಾನುಸಾರ ದುಡ್ಡೆತ್ತಿ ಕಟ್ಟಾ ಕೈಗಿತ್ತಿದ್ದಾರೆ. ಎಲ್ಲಾ ಲೆಕ್ಕ ಹಾಕಿದರೂ ಕನಿಷ್ಠ ಐದೂವರೆ ಕೋಟಿ ರೂಪಾಯಿಗಳಷ್ಟು ಸಂಗ್ರಹ ವಾಗಿರುವ ಸಾಧ್ಯತೆಯಿದೆ. ಏನೇ ದುಂದುವೆಚ್ಚ ಅಂತ ಮಾಡಿದರೂ ಸೇರಿದ 75 ಸಾವಿರದಷ್ಟು ಜನಸಾಗರಕ್ಕೆ ಎರಡು ಕೋಟಿಯ ಮೇಲೆ ಖರ್ಚಾಗಿಲ್ಲ, ಬಂದ ದುಡ್ಡೆಲ್ಲ ಸ್ವಾಗತ ಸಮಿತಿ ಅಧ್ಯಕ್ಷ ಕಟ್ಟಾ ಕೈಗೇ ಹೋಗಿದೆ. ಹಾಗಾದರೆ ಉಳಿದ ಮೂರೂವರೆ ಕೋಟಿ ಏನಾಯಿತು?

ಸೈಟಿನ ಹೆಸರಲ್ಲಿ ನುಂಗಿದ್ದು, ಅರಣ್ಯ ಭೂಮಿಯನ್ನೇ ದೋಚಿದ್ದು, ಹಾಲಿಕೆ ಆಸ್ತಿ ಬಿಡಿಎ ಆಸ್ತಿ ಕೆರೆ ಭೂಮಿ ಯಾವುದನ್ನೂ ಬಿಡದೇ ನೆಕ್ಕಿದ ಕಟ್ಟಾ ಕೊನೆಕೊನೆಗೆ ತನ್ನ ಜಾತಿಯನ್ನೂ ಬಿಡಲಿಲ್ಲವೆಂದರೆ ಎಂಥಾ [illegible]? ■

ಕೂಸು ಹುಟ್ಟುವ ಮುಂಚೆಯೇ ಕುಲಾವಿಗೆ ಸ್ಕೆಚ್ಚು

ಪಾರ್ಲಿಮೆಂಟ್ ಚುನಾವಣೆ ಮುಗಿದು ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬಂದಿದ್ದೇಯಾದರೆ ಬಿಜೆಪಿ ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆ ಸೆಂಟ್ರಲ್ ಮಿನಿಸ್ಟರ್ ಆಗುತ್ತಾರಂತೆ. ಹಾಗಂತ ಅವರೇ ಲೆಕ್ಕಸೂತ್ರ ತೇಲಿಬಿಟ್ಟಿದ್ದಾರೆ. ಹೇಗೂ ಸುರೇಶ ಅಂಗಡಿ ಬೆಳಗಾವಿ ಜಿಲ್ಲೆಯಲ್ಲಿರುವ ಪಂಚಮಸಾಲಿ ಮಠಗಳಾಗಿರುವ ನಾಗನೂರು ಮಠ, ಕಾರಂಜಿ ಮಠ, ಗೋಕಾಕದ ದುರೆದುಂಡೇಶ್ವರ ಮಠ, ಬೈಲಹೊಂಗಲ ಮಠದ ಎಲ್ಲಾ ಸ್ವಾಮಿಗಳ ಮಾತಿಗೆ ಬೆಲೆಕೊಡದೆ ಪ್ರಬಲ ಪಂಚಮಸಾಲಿ ಕೋಮಿನ ವಿರೋಧ ಕಟ್ಟಿಕೊಂಡಿದ್ದಾನೆ. ಅದರ ಜತೆ ಮೊನ್ನೆ ಕೇಸರಿ ಧ್ವಜ ಹಿಡಿದು ಕನ್ನಡಿಗರ ಭಾವನೆಗೆ ಧಕ್ಕೆ ತಂದಿದ್ದಾನೆ.


ಈತನಕ ಅಂಗಡಿಯ ಜೊತೆಗಿದ್ದ ಪ್ರಬಲ ಮರಾಠಿ ನಾಯಕರಾದ ಮನೋಹರ ಕಿಣೇಕರ, ಕಿರಣ ಠಾಕೂರ, ವಿಜಯ ಮೋರೆ, ದೀಪಕ್ ದಳವಿಗಳ ದಂಡು ಅಂಗಡಿ ವಿರುದ್ಧ ವ್ಯವಹಾರವೊಂದರ ಕಾರಣಕ್ಕೆ ಜಗಳವಾಡಿಕೊಂಡಿದ್ದಾರೆ. ಸಾಲದ್ದಕ್ಕೆ ಕಿತ್ತೂರಿನ ಸುರೇಶ ಮಾರಿಹಾಳ, ಸವದತ್ತಿಯ ಆನಂದ ಮಾಮನಿ ಕೂಡ ಬಹಿರಂಗವಾಗಿ ಸುರೇಶ ಅಂಗಡಿಯನ್ನು ಸೋಲಿಸಲು ಕರೆ ನೀಡುತ್ತಾರೆ. ಹೀಗಾಗಿ ಸುರೇಶ ಅಂಗಡಿ ಈ ಚುನಾವಣೆಯಲ್ಲಿ ಸೋಲು ಕಾಣುತ್ತಾನೆ. ಆ ಮೂಲಕ ರಾಜ್ಯಸಭಾ ಸದಸ್ಯನಾಗಿರುವ ಪ್ರಭಾಕರ ಕೋರೆ ಬೆಳಗಾವಿಯ ಕೋಟಾದಲ್ಲಿ ಸೆಂಟ್ರಲ್ ಮಿನಿಸ್ಟರ್ ಆಗುವ ಹುಚ್ಚು ಹಗಲುಗನಸು ಕಾಣುತ್ತಿದ್ದಾನೆ. ಬಹುಶಃ ಸುರೇಶ ಅಂಗಡಿಯಷ್ಟೇ ಅಲ್ಲ; ಇಡೀ ದೇಶಾದ್ಯಂತ ಬಿಜೆಪಿ ಮಂದಿಯನ್ನು ಜನ ಮೂಲೆಗೆ ಎಸೆಯುತ್ತಾರೆ. ಮತ್ತೇನಿದ್ದರೂ ತೃತೀಯರಂಗ, ಯುಪಿಎ ಮೈತ್ರಿಕೂಟ ಸೇರಿಕೊಂಡು ಸಮ್ಮಿಶ್ರ ಸರಕಾರದ ಅಸ್ತಿತ್ವ ಕಾಣುತ್ತದೆಂಬ ವಾಸ್ತವ ಬಹುಶಃ ಕೋರೆಗೆ ಗೊತ್ತಿರಲಿಕ್ಕಿಲ್ಲ. ಕೋರೆ ಮಂತ್ರಿಗಿರಿಯ ಕನಸು ಕಾಣುತ್ತಿರುವುದು ಒಂಥರಾ ಕೂಸು ಹುಟ್ಟುವ ಮುನ್ನ ಕುಲಾವಿ ಹೊಲಿಸುವ ಸ್ಕೆಚ್‌ನಂತೆ ಬೆಳಗಾವಿ ಜನರಿಗೆ ಪುಕ್ಕಟೆ ಮನರಂಜನೆ ನೀಡುತ್ತಿದೆ. ■

ಬೆಳಗಾವಿ: ಸುರೇಶ ಅಂಗಡಿಯ ಪಟರ್ಸ್ ಕ್ಲೋಸ್!

ಯಾವ ಭಗವಾಧ್ವಜದ ಮೂಲಕ ಇಡೀ ಉತ್ತರ ಕರ್ನಾಟಕದಲ್ಲಿ ಚೆಡ್ಡಿಗಳು ಖಾತೆ ತೆರೆದಿದ್ದರೋ ಅದೇ ಭಗವಾಧ್ವಜವೇ ಈಗ ಭಗನಿ ಗೂಟವಾಗಿ ಅಂದಿಗೆ ಬಿದ್ದಿದೆ. ಅಕ್ಷರಶಃ ಬೆಳಗಾವಿ ಕನ್ನಡಿಗರು ಬಿಜೆಪಿಯ ಕೇಸರಿ ರೋಗಿಗಳಿಗೆ ಎಳ್ಳು-ನೀರು ಬಿಡುವ ಲಕ್ಷಣಗಳು ದಟ್ಟವಾಗಿವೆ. ಅಲ್ಲಿಗೆ ಸುರೇಶ ಅಂಗಡಿಯ ಪಟರ್ಸ್ ಕ್ಲೋಸಾಗಲು ಕ್ಷಣಗಣನೆ ಆರಂಭವಾದಂತಾಗಿದೆ.

18 ವಿಧಾನಸಭಾ ಕ್ಷೇತ್ರಗಳನ್ನು ಒಡಲಲ್ಲಿರಿಸಿಕೊಂಡಿರುವ ಜಿಲ್ಲೆಯ ರಾಜಕಾರಣ ಜಾರಕಿಹೊಳಿ, ಕತ್ತಿ, ಜಿಗಜಿಣಗಿ, ಪಾಟೀಲ, ಮಾಮನಿ ಫ್ಯಾಮಿಲಿಗಳ ಪಾಳೆಗಾರಿಕೆಯಲ್ಲಿ ನರಳುತ್ತಿದೆ. ಇಂಥಾ ಸಂದರ್ಭದಲ್ಲಿ ಕಳೆದ ಲೋಕಸಭಾ ಚುನಾವಣೆಗಾಗಿ ಫೀಲ್ಡಿಗೆ ಇಳಿದಿದ್ದ ಸುರೇಶ ಅಂಗಡಿ ಜನರಿಗೆ ಇಂದ್ರ-ಚಂದ್ರ ತೋರಿಸುತ್ತೇನೆಂದು ಮರುಳು ಮಾಡಿ ಎಂಪಿಯಾಗಿದ್ದ. ಆದರೆ ಅಂಗಡಿ ಸಾಹೇಬ ಮರಾಠಿ ಹೆಸರಿನಲ್ಲಿ ಹಫ್ತಾ ಎತ್ತುವಳಿ ಮಾಡುವ ಶಿವಸೇನೆ ಮತ್ತು ಎಂಇಎಸ್ ಪೋಕರಿಗಳಿಗೆ ಶ್ರೀರಕ್ಷೆಯಾಗಿ ನಿಂತುಕೊಂಡ. ಇದಕ್ಕೆ ಈ ಹಿಂದೆ ನಡೆದ ಎಪಿಎಂಸಿ ನಾಮಕರಣ ಮತ್ತು ಮರಾಠಿ ಸಾಹಿತ್ಯ ಸಮ್ಮೇಳನಗಳೆರಡೂ ಸಾಕ್ಷಿಗಳಾಗಿದ್ದವು.

ಹಾಗೆ ನೋಡಿದರೆ, ಬೆಳಗಾವಿ ಕ್ಷೇತ್ರದೊಂದಿಗೆ ಆಟ ಆಡಿಕೊಂಡು ಬೆಳೆದವರ ಕತೆ ದೊಡ್ಡದು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣರಂತಹವರು ಬೆಳಗಾವಿಯನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡಿದ್ದರು. ಅದರ ಪರಿಣಾಮದಿಂದಲೇ ಇಲ್ಲಿ ಇನ್ನೂ ಹೋರಾಟದ ಕಾವು ಜೀವಂತಿಕೆ ಉಳಿಸಿಕೊಂಡಿದೆ. 1952ರ ಆರಂಭದಿಂದಲೂ ಕಾಂಗ್ರೆಸ್ ಪಕ್ಷದಿಂದ ಬಿ.ಎಲ್. ದಾತಾರ ಮೂರು ಬಾರಿ, ಎಸ್.ಬಿ. ಸಿದ್ನಾಳ್ ನಾಲ್ಕು ಬಾರಿ, ಎ.ಕೆ. ಕೊಟ್ರಶೆಟ್ಟಿ ಎರಡು ಬಾರಿ,



ಎಚ್.ವಿ. ಕೌಜಲಗಿ, ಎನ್.ಎಂ. ನಬೀಸಾಬ್ ತಲಾ ಒಂದು ಬಾರಿ ಕ್ಷೇತ್ರದಿಂದ ಎಂ.ಪಿ.ಯಾಗಿ ಗೆದ್ದಿದ್ದರು. ಮುಂದೆ ಜನತಾದಳದ ಶಿವಾನಂದ ಕೌಜಲಗಿ, ಬಿಜೆಪಿಯ ಬಾಬಾಗೌಡ ಪಾಟೀಲ, ಕಾಂಗ್ರೆಸ್‌ನ ಅಮರಸಿಂಹ ಪಾಟೀಲ ಕೂಡ 90ರ ದಶಕದ ತನಕ ಅಧಿಕಾರ ಅನುಭವಿಸಿದ್ದವರು. ಯಾವಾಗ ಶಿವಸೇನೆಯೊಂದಿಗೆ ಬಿಜೆಪಿ ಹೊಂದಾಣಿಕೆ ಮಾಡಿಕೊಂಡಿತೋ ಬೆಳಗಾವಿ ಹುಚ್ಚು ಹಿಡಿಸಿಕೊಂಡಿತು. ಇದಾದನಂತರ ಎಂಇಎಸ್ ಮಂಗಾಟಕ್ಕೆ ಅಂತ್ಯವೇ ಇಲ್ಲದಂತಾಯಿತು.

2004ರ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಗಳು ಬೆಳಗಾವಿಗೆ ವಿಶೇಷ ಒತ್ತುಕೊಟ್ಟು ನಿಂತರು. ಕಾಂಗ್ರೆಸ್ಸಿಗರ ಪಾಳೆಗಾರಿಕೆ ಮಿತಿಮೀರಿದಕ್ಕಾಗಿ ಜನ ಪರ್ಯಾಯ ಪಕ್ಷ ಬಯಸಿದ್ದರು. ಕ್ಷೇತ್ರದಲ್ಲಿ ಲಿಂಗಾಯತ ಮತಗಳ ಸಂಖ್ಯೆ ಹೆಚ್ಚಿದ್ದರಿಂದ ಮತ್ತು ಬೆಳಗಾವಿ ಸದಾಶಿವನಗರದ ವಾಸವದತ್ತಾ ಸಿಮೆಂಟ್ ಏಜೆನ್ಸಿ ಮಾಲಿಕ ಸುರೇಶ ಅಂಗಡಿ ಜಾತಿಯಲ್ಲಿ ಬಣಜಿಗನಾಗಿದ್ದರಿಂದ ಬಿಜೆಪಿಗೆ ಸರಿಹೋಗಿತ್ತು, ಸುರೇಶ ಅಂಗಡಿ ಕೈಯಲ್ಲಿ ಕಲಬೆರಕೆ ಸಿಮೆಂಟು ಮಾರಿದ್ದ ಹರಾಮಿ ದುಡ್ಡಿತ್ತು. ಈ ಎಲ್ಲಾ 'ಅರ್ಹತೆಗಳ' ಕಾರಣಕ್ಕೆ ಕಳೆದಬಾರಿ ಲೋಕಸಭಾ ಎಲೆಕ್ಷನ್‌ನಲ್ಲಿ ಸುರೇಶ ಅಂಗಡಿ ಬಿಜೆಪಿ ಅಭ್ಯರ್ಥಿಯಾಗಿ ನಿಂತುಕೊಂಡ. ಮರಾಠಿ ಮುಂದರ ಹುಚ್ಚು ಬೆಂಬಲದ ಜೊತೆಗೆ ಲಿಂಗಾಯತರ ಪ್ರಾಬಲ್ಯ ಕೂಡಿಕೊಂಡು ವಾಜಪೇಯಿ ಅಲೆಯಲ್ಲಿ ಅಂಗಡಿ ಮುಸ್ಲಿಮರ ಓಟು ಹಿಡಿದುಕೊಂಡು ಗೆದ್ದು ಬಂದ. ಅಂಗಡಿ ಗೆದ್ದಾದ ಮೇಲೆ ತಮ್ಮ ಬವಣೆಗಳು ತೀರಿಹೋದವು ಎಂದುಕೊಂಡಿದ್ದ ಬೆಳಗಾವಿ ಜನರ ಭರವಸೆ ಅಕ್ಷರಶಃ ಹುಸಿಯಾಗಿತು.

ಅಂಗಡಿ ಗೆದ್ದಿದ್ದೇ ತಡ, ತನ್ನ ಬಣಜಿಗ ಜಾತಿಯ ಮುಖಂಡರನ್ನು ಮಾತ್ರ ಹತ್ತಿರ ಬಿಟ್ಟುಕೊಂಡ. ತನ್ನ ವ್ಯಾಪ್ತಿಗೆ ಬರುವ ಪಂಚಮಸಾಲಿ ಸಮುದಾಯವನ್ನು ಕೀಳಾಗಿ ಕಂಡ. ಜಿಲ್ಲೆಯಲ್ಲಿ ನಡೆದ ಅಷ್ಟೂ ಸರಕಾರಿ ಕಾಮಗಾರಿಗಳಿಗೆ ತನ್ನದೆ ವಾಸವದತ್ತಾ ಸಿಮೆಂಟು ಪೂರೈಸಿ ತನ್ನ ಶೆಟ್ಟಿ ಬುದ್ಧಿಯನ್ನು ತೋರಿಸಿಕೊಟ್ಟ. ಜತೆಗೆ ಅಸಿಸ್ಟೆಂಟ್ ಕಮೀಷನರ್ ಸತೀಶ, ಡಿವಿಜಿನಲ್ ಕಮೀಷನರ್ ಮಂಜುನಾಥ, ಕಾರ್ಪೊರೇಷನ್ ಕಮೀಷನರ್ ಎಚ್.ಜಿ. ಪಾಟೀಲ ಹಾಗೂ ಜಿಲ್ಲಾಧಿಕಾರಿ ಸ್ಥಾನಕ್ಕೆ ಶಾಲಿನಿ ರಜನೀಶ್‌ಗಳಂತಹ ಹುಟ್ಟಾ ಭ್ರಷ್ಟರನ್ನು ಕರೆಸಿಕೊಂಡು ಬೆಳಗಾವಿಯನ್ನು ಪೊಗದಸ್ತಾಗಿ ಮೇಯಲು ಬಿಟ್ಟ.


ವಿ.ಹುರುಳಿಕುಪ್ಪಿ

ಇವೆಲ್ಲವೂ ಬೆಳಗಾವಿ ಜನರ ನಿದ್ದೆಗೆಡಿಸಿದ್ದವು. ನೇಕಾರಿಕೆ-ಉದ್ಯಮ ನಷ್ಟಕ್ಕೆ ಬಿತ್ತು. ಸಾವಿರಾರು ▶▶▶

ಕುನ್ನೂರ ಕಮಾಲ್ ಜೋಶಿ ಮಟಾಶ್

ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಕುನ್ನೂರ್ ಕಮಾಲ್ ದಾಂಗುಡಿಯಿಟ್ಟಿದೆ. ಅದರ ಹೊಡೆತಕ್ಕೆ ಜೋಶಿ ಮಟಾಶ್ ಆಗುವ ಲಕ್ಷಣಗಳೇ ಜಾಸ್ತಿಯಾಗುತ್ತಿವೆ. ಯಾವ ಈದ್ಗಾ ಗಲಾಟೆಯಿಂದ ಜೋಶಿ ಪ್ರವರ್ಧಮಾನಕ್ಕೆ ಬಂದಿದ್ದನೋ ಅದೇ ಈದ್ಗಾ ನೆಲದಲ್ಲಿ ಆತ ತರಗೆಲೆಯಂತೆ ಉದುರಿಬೀಳುವ ಕಾಲವೀಗ ಬಂದೊದಗಿದೆ. ಜೋಶಿಯನ್ನು ಮಕಾಡೆ ಮಲಗಿಸುವುದಕ್ಕಾಗಿ ಪಂಚಮಸಾಲಿ ಸಮುದಾಯ ಹಾಗೂ ಅಲ್ಪಸಂಖ್ಯಾತ ಸಮುದಾಯಗಳೆರಡೂ ಜಂಟಿಯಾಗಿ ರಣತಂತ್ರ ಹೆಣೆಯುತ್ತಿವೆ. ಇದು ಕುನ್ನೂರ್ ಕಮಾಲ್ ಎನ್ನದೇ ಬೇರೆ ದಾರಿಯಿಲ್ಲ.


2004ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಲ ಬೇರೆಯಾಗಿತ್ತು. ಆಗ ಈದ್ಗಾ ಗದ್ದಲ ದಿನದಿನಕ್ಕೂ ಹೊಸ ಆಯಾಮ ಪಡೆದುಕೊಳ್ಳುತ್ತಿತ್ತು. ಇದೇ ಕಾರಣಕ್ಕೆ ಚಂದ್ರಕಾಂತ್ ಬೆಲ್ಲದ್, ಜಗದೀಶ್ ಶೆಟ್ಟರ್, ಅಶೋಕ್ ಕಾಟವೆಗಳೆಲ್ಲಾ ರಾತ್ರೋರಾತ್ರಿ ಎಮ್ಮೆಲ್ಲೆಗಳಾಗಿ ಮಿಂಚಿ ಭಾರತೀಯ ಜನತಾಪಾರ್ಟಿ ಎಂಬ ರಕ್ತದಾಹಿ ಗುಂಪಿಗೆ ಗಟ್ಟಿ ಅಡಿಪಾಯ ಹಾಕಿದ್ದರು. ಮುಂದೆ ಪ್ರಹ್ಲಾದ್ ಜೋಶಿ ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದ ಎಂಪಿಯಾಗುವುದಕ್ಕೂ ಇದೇ ಬಹುಮುಖ್ಯ ಕಾರಣವಾಯಿತು. ಧಾರವಾಡ ಜನತೆಗೆ ಧರ್ಮಜ್ವರ ಹಚ್ಚಿ ಗೆದ್ದು ಬಂದ ಜೋಶಿ ಕಾಲಾನಂತರದಲ್ಲಿ ಗೆದ್ದು ಕಳಿಸಿದ ಜನರನ್ನೇ ಮರೆತು ತನ್ನ ಹಳೆಯ ಫಿನೈಲ್ ಮತ್ತು ಕಸಬರಿಗೆ ಉದ್ಯಮದ ವಿಸ್ತರಣೆಗೆ ನಿಂತುಕೊಂಡಿದ್ದು ಜನರಿಗೆ ಕೋಪ ತರಿಸಿತ್ತು. ಧಾರವಾಡದ ಗಲ್ಲಿಗಲ್ಲಿಗಳಿಂದ ಜನ ತಮ್ಮ ಸಮಸ್ಯೆಗಳನ್ನು ಹೊತ್ತುಕೊಂಡು ಜೋಶಿಯ ಮುಂದೆ ಬಂದಾಗಲೂ ಆತ ಅವುಗಳನ್ನು ಬಗೆಹರಿಸುವ ಕಡೆ ಗಮನ ಕೊಡುವುದಿರಲಿ, ಜನರನ್ನೇ ನಾಯಿಗೆ ಬಯ್ಯುವ ಹಾಗೆ ಬೈದು ಕಳಿಸುತ್ತಿದ್ದ. ಬೇರೆ ಜಾತಿಗಳ ಜನರ ಮಾತು ಒತ್ತಟ್ಟಿಗಿರಲಿ, ತನ್ನದೇ ಜಾತಿಯ ಬಡ ಬ್ರಾಹ್ಮಣರನ್ನೂ ಈತ ಹತ್ತಿರಕ್ಕೆ ಸುಳಿಯಗೊಡಲಿಲ್ಲ. ಕಮರಿಪೇಟೆಯ ಕಳ್ಳಭಟ್ಟಿ ದಂಧೆ ಎಗ್ಗಿಲ್ಲದಂತೆ ಸಾಗಿದ್ದು ಇವನ ಆಡಳಿತ ಕಾಲದಲ್ಲಿಯೇ. ಪೊಲೀಸ್ ವ್ಯವಸ್ಥೆ ಹಫ್ತಾ ವಸೂಲಿಯ ಪಡೆಯಾಗಿ ಪರಿಣಮಿಸಿದ್ದೂ ಈ ಮಹಾಶಯನ ಕೃಪಾಕಟಾಕ್ಷದಲ್ಲಿಯೇ.



ಕುನ್ನೂರ್


ಇಂತಹ ಜಂಭದ ಕೋಳಿ ಜೋಶಿಯನ್ನು ಗೆಲ್ಲಿಸುವ ಮೂಲಕ ತಾವು ಮಾಡಿದ ತಪ್ಪು ಜನರಿಗೀಗ ಅರ್ಥವಾಗಿದೆ. ಜೋಶಿಯನ್ನು ಪರ್ಮನೆಂಟಾಗಿ ಮನೆಗೆ ಕಳಿಸುವ ಮೂಲಕ ಈ ಹಿಂದೆ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಅವಕಾಶವೂ ಈಗ ಅವರಿಗೆ ಸಿಕ್ಕಿದೆ. ವಾಸ್ತವದಲ್ಲಿ ಇದು ಕುನ್ನೂರ್‌ಗೆ ವರದಾನವಾಗಲಿದೆ.

ಪ್ರಹ್ಲಾದ್ ಜೋಶಿ ಸಂಸದನಾಗಿ ಗೆದ್ದು ಬರುವುದಕ್ಕೆ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿರುವ ಲಿಂಗಾಯತರು, ಅದರಲ್ಲೂ ವಿಶೇಷವಾಗಿ ಪಂಚಮಸಾಲಿ ಲಿಂಗಾಯತರು ಪ್ರಮುಖ ಕಾರಣ. ಅದೂಅಲ್ಲದೇ ದೊಡ್ಡ ಸಂಖ್ಯೆಯಲ್ಲಿರುವ ಕುರುಬ ಸಮುದಾಯವೂ ಕಳೆದ ಚುನಾವಣೆಯಲ್ಲಿ ಜೋಶಿಯ ಹಿಂದೆ ನಿಂತಿದ್ದು ಆತನ ಗೆಲುವನ್ನು ಸರಾಗಗೊಳಿಸಿತ್ತು. ಆದರೆ ಜೋಶಿಯದ್ದು ಏರಿದ ಏಣಿಯನ್ನು ಒದೆಯುವ ಜಾಯಮಾನ. ಅದಕ್ಕೆ ತಕ್ಕಂತೆ ಆತ ಗೆದ್ದು ಬರುತ್ತಿದ್ದಂತೆಯೇ ಈ ಎರಡೂ ಸಮುದಾಯಗಳನ್ನು ಎಷ್ಟರಮಟ್ಟಿಗೆ ತುಚ್ಛವಾಗಿ ಕಾಣಲಾರಂಭಿಸಿದ ಎಂದರೆ ಅವರ್‍ಯಾರನ್ನೂ ಹತ್ತಿರಕ್ಕೆ ಸುಳಿಯಗೊಡಲಿಲ್ಲ. ಸಾಲದ್ದಕ್ಕೆ ರಾಜ್ಯದಲ್ಲಿ ಸುಮಾರು 75 ಲಕ್ಷದಷ್ಟಿರುವ ಪಂಚಮಸಾಲಿ ಸಮುದಾಯದಿಂದ ಬಿಜೆಪಿಯಲ್ಲಿ 14 ಜನ ಎಮ್ಮೆಲ್ಲೆಗಳಿದ್ದರೂ ಢೋಂಗಿ ಪಂಚಮಸಾಲಿ ಮುರುಗೇಶ್ ನಿರಾಣಿಗೆ ಮಾತ್ರವೇ ಮಂತ್ರಿ ಪದವಿ ಕೊಟ್ಟಿರುವ ಬಿಜೆಪಿಯ ಪಂಚಮಸಾಲಿ ವಿರೋಧಿ ಧೋರಣೆಗೆ ಇದೇ ಜೋಶಿ ಬೆಂಬಲವಾಗಿ ನಿಂತಿದ್ದ. ಈ ಚುನಾವಣೆಯಲ್ಲೂ ಬಿಜೆಪಿ ಅತಿ ಹೆಚ್ಚು ಜನಸಂಖ್ಯೆಯಿರುವ ಪಂಚಮಸಾಲಿಗಳಿಗೆ ಟಿಕೆಟ್ ಕೊಡದೆ ವಂಚಿಸಿರುವುದರಿಂದ ಸಹಜವಾಗಿ ಆ ಸಮುದಾಯ ಕ್ರೋಧಗೊಂಡಿದೆ.



ಚಂದ್ರಕಾಂತ್ ಬೆಲ್ಲದ್

ಬಣಜಿಗ ಲಿಂಗಾಯತರು ಪಂಚಮಸಾಲಿ ಲಿಂಗಾಯತರಿಗೆ ನಿರಂತರವಾಗಿ ವಂಚನೆ ಮಾಡುತ್ತಿರುವುದರ ವಿರುದ್ಧ ಪಂಚಮಸಾಲಿಗಳನ್ನು ಸಂಘಟಿಸಿ ರಾಜ್ಯವ್ಯಾಪಿಯಾಗಿ ಬಹುದೊಡ್ಡ ಪ್ರತಿರೋಧ ಒಡ್ಡಿದ ಕಾಶಪ್ಪನವರ್ ಅಕಾಲಿಕವಾಗಿ ಮರಣ ಹೊಂದಿದ ಮೇಲೆ ಆ ಸಮುದಾಯದ ನಾಯಕತ್ವವನ್ನು ಮಂಜುನಾಥ್ ಕುನ್ನೂರ್ ಅವರೇ ವಹಿಸಿಕೊಂಡಿದ್ದಾರೆ. ಪಂಚಮಸಾಲಿಗಳನ್ನು ಬಿಜೆಪಿ ಮತ್ತು ವೈದಿಕ ಸಿದ್ಧಾಂತಕ್ಕೆ ಬಲಿಕೊಡುತ್ತಿರುವ ಹರಿಹರದ ಪಂಚಮಸಾಲಿ ಪೀಠವನ್ನು ಧಿಕ್ಕರಿಸಿ ನಿಜವಾದ ಬಸವತತ್ವದ ಅಡಿಪಾಯದ ಮೇಲೆ ಆ ಸಮುದಾಯವನ್ನು ಸಂಘಟಿಸುತ್ತಿರುವ ಕೂಡಲಸಂಗಮದ ಜಯಬಸವ ಮೃತ್ಯುಂಜಯ ಸ್ವಾಮಿಗಳೂ ಕೂಡ ಈಗ ಕುನ್ನೂರ್ ಬೆನ್ನಿಗಿದ್ದಾರೆ. ಪಂಚಮಸಾಲಿಗಳಿಗೆ ಯಡ್ಡಿ ಮಾಡಿದ, ಮಾಡುತ್ತಿರುವ ದ್ರೋಹಕ್ಕೆ ಪ್ರತಿಯಾಗಿ ಆ ಸಮುದಾಯವೂ ಕೂಡ ಸೇಡು ತೀರಿಸಿಕೊಳ್ಳುವುದಕ್ಕೆ ಈಗ ಈ ಚುನಾವಣೆ ಒಂದು ಅವಕಾಶವಾಗಿ ಬಂದಿದೆ. ಈ ಹಿನ್ನೆಲೆಯಲ್ಲಿ ಬ್ರಾಹ್ಮಣ, ಬ್ರಾಹ್ಮಣವಾದಿಯಾಗಿರುವ ಪ್ರಹ್ಲಾದ್ ಜೋಶಿಗೆ ಹೆಡೆಮುರಿ ಕಟ್ಟಿ ತಮ್ಮದೇ ಸಮುದಾಯದ ಮಂಜುನಾಥ್ ಕುನ್ನೂರ್‌ನನ್ನು ಗೆಲ್ಲಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.



ಜೋಶಿ

ಧಾರವಾಡ ಲೋಕಸಭಾ ಕ್ಷೇತ್ರವನ್ನು ಜಾತಿಯಾಧಾರಿತವಾಗಿ ಇನ್ನೊಂದು ಮಗ್ಗುಲಿನಿಂದ ನೋಡಿದರೂ ಕುನ್ನೂರ್‌ಗೆ ಪಾಸಿಟಿವ್ ಆಗಿದೆ. ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಮುಸ್ಲಿಂ ಮತಗಳಿವೆ. ಹಾಗೇ ನೋಡಿದರೆ ಪಂಚಮಸಾಲಿಗಳನ್ನು ಬಿಟ್ಟರೆ ಎರಡನೇ ದೊಡ್ಡ ಸಮುದಾಯವೆಂದರೆ ಮುಸ್ಲಿಮರೆ. ಅದರಲ್ಲೂ ಕುನ್ನೂರ್ ಆಡಿ ಬೆಳೆದಂತಹ ಹಾವೇರಿ ಜಿಲ್ಲೆಯ ಶಿಗ್ಗಾಂವಿ, ಸವಣೂರುಗಳು ಕ್ಷೇತ್ರಪುನರ್ವಿಂಗಡಣೆಯಿಂದ ಧಾರವಾಡಕ್ಕೆ ಸೇರ್ಪಡೆಯಾಗಿವೆ. ಆ ಭಾಗದ ಮುಸ್ಲಿಮರೆಲ್ಲರಿಗೂ ಕುನ್ನೂರ್ ಒಬ್ಬರೇ ಆಶಾಕಿರಣ. ಅದೂಅಲ್ಲದೇ ಈ ನಡುವೆ ಸವಣೂರು ಮತ್ತು ಶಿಗ್ಗಾಂವಿಗಳ ಪಂಚಾಯತಗಳು ಕಾಂಗ್ರೆಸ್ ಮಯವಾಗಿರುವುದು ಕುನ್ನೂರ್ ಬಲವನ್ನು ಹೆಚ್ಚಿಸಿವೆ. ನಿರ್ಲಕ್ಷ್ಯ ಜಲಮಂತ್ರಿ ಬಸವರಾಜ್ ಬೊಮ್ಮಾಯಿ ಶಿಗ್ಗಾಂವಿಯಿಂದ ಎಮ್ಮೆಲ್ಲೆಯಾಗಿದ್ದರೂ ಅಲ್ಲಿನ ಎಪಿಎಂಸಿ ಚುನಾವಣೆಯಲ್ಲಿ ಅವನಿಗೆ, ಅವನ ಬಿಜೆಪಿ ಪಕ್ಷಕ್ಕೆ ಮುಖಭಂಗವಾಗುವಂತೆ ಐದು ಜನ ಕುನ್ನೂರ್ ಬೆಂಬಲಿಗರು ಗೆದ್ದುಬಂದಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಎಂದರೆ ಪಂಚಮಸಾಲಿ ಪ್ರಾಬಲ್ಯದ ಶಿಗ್ಗಾಂವಿ, ಸವಣೂರುಗಳಲ್ಲಿ ಸಾದರ ದರ್ಬಾರು, ಅಟ್ಟಹಾಸ ಮಿತಿಮೀರಿದ್ದು.

ಧಾರವಾಡ ಕ್ಷೇತ್ರದಾದ್ಯಂತ ದೊಡ್ಡ ಸಮುದಾಯವಾಗಿರುವ ಮುಸ್ಲಿಮರು ಈ ಬಾರಿ ಸಾಲುಸಾಲಾಗಿ ಕುನ್ನೂರ್ ಪರ ವಾಲಲಿದ್ದಾರೆ. ಈದ್ಗಾ ಗಲಾಟೆಯಿಂದ ಹಿಡಿದು ಮೊನ್ನೆಮೊನ್ನೆಯ ಕೋರ್ಟ್ ಬ್ಲಾಸ್ಟ್ ತನಕ ಬಿಜೆಪಿ ಮಾಡಿದ ಭಯೋತ್ಪಾದನೆಯಿಂದ ತತ್ತರಿಸಿಹೋಗಿರುವ ಅವರೆಲ್ಲಾ ಅದರಿಂದ ಮುಕ್ತಿ ಹೊಂದಬೇಕೆಂದರೆ ಕಾಂಗ್ರೆಸ್‌ನ ಕುನ್ನೂರ್‌ಗೆ ಓಟು ಹಾಕುವುದು ಅನಿವಾರ್ಯ ಎಂದುಕೊಂಡಿದ್ದಾರೆ. ಇತ್ತೀಚೆಗೆ ಪಂಚಮಸಾಲಿ ಸಮುದಾಯವೂ ಬಿಜೆಪಿಯ ರಕ್ತಪಿಪಾಸು ಸಿದ್ಧಾಂತದಿಂದ ಒಂದಿಷ್ಟು ದೂರ ಉಳಿದು ಮುಸ್ಲಿಮರೊಂದಿಗೆ ಬೆರೆಯುತ್ತಿರುವುದು ಜೋಶಿಗೆ ಕಂಟಕದಂತೆ ಕಾಣುತ್ತಿದೆ.

ಕ್ಷೇತ್ರದಲ್ಲಿ ಕುರುಬರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕುರುಬರ ನಾಯಕ ಸಿದ್ಧರಾಮಯ್ಯ ಈಗ ಕಾಂಗ್ರೆಸ್‌ನಲ್ಲಿರುವುದು, ನಿದ್ದೆಯಿಂದೆದ್ದು ಚುರುಕಾಗಿ ಓಡಾಡುತ್ತಿರುವುದು ಕುರುಬರು ಸಾಲಿಡ್ಡಾಗಿ ಕಾಂಗ್ರೆಸ್ ಕಡೆ ವಾಲುವುದಕ್ಕೆ ಕಾರಣವಾಗಲಿದೆ.

ಹೀಗೆ ಯಾವ ಮಗ್ಗುಲಿನಿಂದ ನೋಡಿದರೂ ಕುನ್ನೂರ್ ಕಮಾಲ್ ಎದ್ದು ಕಾಣುತ್ತದೆ. ಈಗಾಗಲೇ ಅರ್ಧ ಸೋಲನ್ನೊಪ್ಪಿಕೊಂಡಿರುವ ಜೋಶಿ ಹೇಗಿದ್ದರೂ ಸೋಲುತ್ತೇನೆ ಯಾಕೆ ದುಡ್ಡು ವೇಸ್ಟ್ ಮಾಡಲಿ ಎಂದುಕೊಂಡು ಚುನಾವಣೆಗಾಗಿ ದುಡ್ಡು ಬಿಚ್ಚುತ್ತಿಲ್ಲ

...ಗಳು ನಿರ್ಗತಿಕವಾದವು. ಕಬ್ಬು ...ರು ದಿವಾಳಿಯಾದರು. ಆಗಲೂ ಸುರೇಶ ಮನಸ್ಸು ಬದಲಾಯಿಸಲಿಲ್ಲ. ತನ್ನ ಎಂಪಿ ...ನ್ನು ತನ್ನದೇ ಜಾತಿಗೆ ಸೀಮಿತಗೊಳಿಸಿಬಿಟ್ಟರು. ...ಬೆಳಗಾವಿಯ ಜನ ಸುರೇಶ ಅಂಗಡಿಯ ...ರ ಬಿಡಿಸಲು ಮತ್ತೊಂದು ಪಾರ್ಲಿಮೆಂಟ್ ...ಣೆಗೆ ಕಾಯ್ದು ಕುಳಿತರು. ಈಗ ಆ ಕಾಲ ...ದೆ. ಅದಕ್ಕೆ ತಕ್ಕಂತೆ ತನ್ನ ವಿನಾಶಕ್ಕಾಗಿ ಅಂಗಡಿ ಸ್ವತಃ ಭಗವಾಧ್ವಜ ಹಿಡಿದು ಬಲೆ ...ಕೊಂಡಿದ್ದಾನೆ. ಸುರೇಶ ಅಂಗಡಿ ಕನ್ನಡ ...ರಿಗೆ ವಿರುದ್ಧವಾಗಿ ನಡೆದುಕೊಂಡಿದ್ದರೆ ...ಆವನೇ ತನ್ನ ಪಾರ್ಲಿಮೆಂಟ್ ...ಯೆಂದು ಘೋಷಿಸಿ ತನ್ನ ನಿರ್ಲಜ್ಜತನ ...ನೆ.

...ಸರೆ ಇದನ್ನು ಕೇಳಲು ಬೆಳಗಾವಿಯ ...ರು ಹುಚ್ಚರಾ? ಬೆಳಗಾವಿ ಕರ್ನಾಟಕದ ...ನ್ನುವುದನ್ನು ಮತ್ತೆ ಒತ್ತಿ ಹೇಳಬೇಕಿಲ್ಲ. ...ಸ್ ಮತ್ತು ಶಿವಸೇನೆಗಳೊಂದಿಗೆ ಸುರೇಶ ಬಹಿರಂಗವಾಗಿ ಕೂಡಿಕೊಳ್ಳುತ್ತಾನೆಂದರೆ ...ವಿ ಜನರು ಖಂಡಿತ ಅವನಿಗೊಂದು ಪಾಠ ...ತ್ತಾರೆ ಎನ್ನುವುದಕ್ಕೆ ಈಗಿನ ಚುನಾವಣಾ ...ಶವೇ ಸಾಕ್ಷಿ.

...ತ್ರ ಮರುವಿಂಗಡಣೆ ಕಾರಣಕ್ಕೆ ಬಾಗೇವಾಡಿ ...ಉಚ್ಚಗಾವಿಯನ್ನು ಕೈಬಿಟ್ಟು ಬೆಳಗಾವಿ ...ಮತ್ತು ಬೆಳಗಾವಿ ದಕ್ಷಿಣಗಳೆಂಬ ಎರಡು ...ರೂಗಿವೆ. ಕ್ಷೇತ್ರದಲ್ಲಿ ಲಿಂಗಾಯತರು 4.70 ...ದ್ದರೂ ಅದರಲ್ಲಿ ಪಂಚಮಸಾಲಿ ...ಗಡದ ಮತಗಳೇ ಹೆಚ್ಚು. ಕುರುಬ ...ಾಯದ 1.10ಲಕ್ಷ ಮತಗಳಿದ್ದೂ ಎಸ್‌ಸಿ, ಸೇರಿಕೊಂಡು 2.88 ಲಕ್ಷ ಮತಗಳಿವೆ. ...ಖ್ಯಾತರು 1.60 ಲಕ್ಷ, ಮರಾಠರು ...ಕ್ಷ, ಹಾಗೆಯೇ ಒಬಿಸಿ 2.5 ಲಕ್ಷ, ...ನ್ನರು 45 ಸಾವಿರ, ಮಾರ್ವಾಡಿಗಳು 12 ...ದಷ್ಟು ಮತದಾರರಿದ್ದಾರೆ. ಇದರಿಂದಾಗಿ ಈ ...ಅಂಗಡಿಯ ಗೆಲುವು ಅಷ್ಟೇನೂ ...ವಿಲ್ಲವೆಂದು ಬೆಳಗಾವಿಯ ರಾಜಕಾರಣ ...ರು ಮಾತಾಡುತ್ತಿದ್ದಾರೆ. ಯಾಕೆಂದರೆ ಜಾತಿ ರಾಜಕರಣದ ಲೆಕ್ಕಾಚಾರವನ್ನು ಅವಲೋಕಿಸಿದರೆ ಅಂಗಡಿಯ ಸೋಲು ಶತಸಿದ್ಧ ಎಂಬ ರಿಸಲ್ಟ್ ಬರುತ್ತದೆ.

ಅದಕ್ಕೆ ಕಾರಣ ಯಡಿಯೂರಪ್ಪ! ತನ್ನ ಅಧಿಕಾರಕ್ಕಾಗಿ ಲಿಂಗಾಯತರನ್ನು ಅದರಲ್ಲೂ ಪಂಚಮಸಾಲಿಗಳನ್ನು ಮೆಟ್ಟಿಲಾಗಿ ಉಪಯೋಗಿಸಿಕೊಂಡ ಯಡ್ಡಿ ಅಧಿಕಾರದ ವಿಷಯದಲ್ಲಿ ಪಂಚಮಸಾಲಿಗಳಿಗೆ ಸ್ಪಷ್ಟ ದ್ರೋಹ ಬಗೆದಿದ್ದಾನೆ. 14 ಜನ ಪಂಚಮಸಾಲಿ ಸಮುದಾಯದ ಬಿಜೆಪಿ ಎಂಎಲ್‌ಎಗಳಿದ್ದರೂ ಮುರಗೇಶ ನಿರಾಣಿಯೊಬ್ಬನಿಗೆ ಸಚಿವ ಪಟ್ಟಕಟ್ಟಿ ಬಣಜಿಗರಿಗೆ ಮಣೆ ಹಾಕಿದ್ದಾನೆ. ಇಂದು ಪಂಚಮಸಾಲಿ ಸಮುದಾಯ ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮಿಗಳ ನೇತೃತ್ವದಲ್ಲಿ ಕಾಂಗ್ರೆಸ್ ಅಥವಾ ಜೆಡಿಎಸ್‌ನತ್ತ ಆಯಾ ವಾತಾವರಣಕ್ಕೆ ತಕ್ಕಂತೆ ವಾಲುತ್ತಿದ್ದಾರೆ.

ಇದು ಬೆಳಗಾವಿಯಲ್ಲಿ ಕೂಡ ಈ ಬಾರಿ ಅಕ್ಷರಶಃ ಭರಕತ್ ಆಗುತ್ತದೆ. ಅದಕ್ಕೆ ಪಂಚಮಸಾಲಿ ಸಮುದಾಯ ಕಾಂಗ್ರೆಸ ಅಭ್ಯರ್ಥಿಯ ಆಯ್ಕೆಯನ್ನು ಕಾಯುತ್ತಿದ್ದಾರೆ. ಇನ್ನು ಉಳಿದಂತೆ ಬಿಜೆಪಿಯಿಂದ ದೇಶಾದ್ಯಂತ ಅಭದ್ರತೆಗೆ ನೂಕಲ್ಪಟ್ಟಿರುವ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಬಿಜೆಪಿ ವಿರುದ್ಧ ಮತ ಚಲಾಯಿಸಲು ಸಿದ್ಧರಾಗಿದ್ದಾರೆ. ಅಲ್ಲದೆ ಕುರುಬ ಸಮುದಾಯ ಸಿದ್ಧರಾಮಯ್ಯರ ಇಶಾರೆ ಕಾಯುತ್ತಿದೆ. ದಲಿತ ಮತಗಳಲ್ಲಿ ಅಲ್ಪ ಏರುಪೇರು ಆದರೂ ನರಸಿಂಹ ಪಾಟೀಲ ಕಾಂಗ್ರೆಸ್ ಅಭ್ಯರ್ಥಿಯಾದರೆ ಅದನ್ನು ಅವರು ಸರಿದೂಗಿಸುತ್ತಾರೆ. ಹಫ್ತಾ ದಂಧೆಯಿಂದ ರೋಸಿಹೋಗಿರುವ ಮರಾಠಿಗರು ಸಹ ಕನ್ನಡಿಗರ ಜೊತೆಗೂಡಿ ತಮ್ಮ ಭಾಷೆಗೆ ಹಚ್ಚಿರುವ ಕಳಂಕ ಹೋಗಲಾಡಿಸಲು ಕಾಂಗ್ರೆಸ್ ಪರ ನಿಲ್ಲುವ ಸೂಚನೆ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಯಾವುದೇ ಆ್ಯಂಗಲ್‌ನಿಂದ ನೋಡಿದರೂ ಸುರೇಶ ಅಂಗಡಿಯ ಪಟರ್ಸ್ ಬೆಳಗಾವಿಯಲ್ಲಿ ಕ್ಲೋಸಾಗುವುದು ನಿಶ್ಚಿತ. ●

...ಮಾಡಿಕೊಳ್ಳಬಹುದು ಎಂಬ ಕಾರಣಕ್ಕೇನೇ ಬಿಜೆಪಿ ...ಕರ್ತರು ಚುನಾವಣಾ ಸಮಯದಲ್ಲಿ ಓಡಾಡುತ್ತಾರೆ. ...ಕೋಶಿಯಿಂದ ಅದೂ ಸಿಗುವುದಿಲ್ಲ ಎಂತಾದರೆ ...ಲ್ಲಾ ಯಾಕೆ ಓಡಾಡುತ್ತಾರೆ? ಇದೂ ಕೂಡ ...ಯನ್ನು ಕೆಡುವುದಕ್ಕೆ ಒಂದು ಕಲ್ಲು ಎಸೆದಂತಾಗಿದೆ. ...ದೆಡೆ ಈಗಾಗಲೇ ಗೆದ್ದೇ ಬಿಟ್ಟೆವು ಎಂಬ ...ಸ್ಸಿನಲ್ಲಿರುವ ಕಾಂಗ್ರೆಸ್ ಕಾರ್ಯಕರ್ತರು ಭರ್ಜರಿ ...ಕ್ಷೇತ್ರದಾದ್ಯಂತ ಪ್ರಚಾರ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆಯಂತಿದ್ದ ಧಾರವಾಡ ಕಳೆದ ಕೆಲವು ವರ್ಷಗಳಿಂದ ಬಿಜೆಪಿಗಳ ತಾಣವಾಗಿದ್ದು ನಿಜ. ಈ ಬಾರಿ ಅದು ಮತ್ತೆ ತಿರುವು -ಮುರುವು ಆಗಲಿದೆ.


ಒಟ್ಟಿನಲ್ಲಿ ಕಾಂಗ್ರೆಸ್, ಕುನ್ನೂರ್ ಕಮಾಲ್‌ನಿಂದಾಗಿ ಬಿಜೆಪಿಯ ಜೋಶಿ ಮಟಾಶ್ ಆಗುವುದಂತೂ ಸತ್ಯ.

● ವಿನಯ್ ಹುರುಳಿಕುಪ್ಪಿ

...ಲ್ಲಿದ್ದಾಗ ಮನವಳ್ಳಿ, ಇಲ್ಲಿದ್ದಾಗ ಸವದತ್ತಿ

...ದು ಶಂಕ್ರಣ್ಣ ಮನವಳ್ಳಿ ಬಿಜೆಪಿಗೆ ಎಂಟ್ರಿ ...ಗಿನಿಂದ ಅವಳಿ ನಗರಗಳಲ್ಲಿ ಹಬ್ಬರಿರುವ ...ಒಗಟು. ಅಕ್ಕಿ ಕಳ್ಳತನ ಮಾಡಿಕೊಂಡು ...ತ್ತಿದ್ದ ಶಂಕ್ರಣ್ಣ ಮನವಳ್ಳಿಗೆ ರಾಜಕೀಯ ನಡೆ ...ಕಾಂಗ್ರೆಸ್. ಸಾಲದ್ದಕ್ಕೆ ಎರಡು ಬಾರಿ ಎಂಪಿ ...ಗೆ, ಒಮ್ಮೆ ಎಮ್ಮೆಲ್ಲೆ ಎಲೆಕ್ಷನ್‌ಗೆ ನಿಲ್ಲಿಸಿದರೂ ...ದಂಧೆಯಿಂದಾಗಿ ಜನರಿಂದ ...ಕೊಂಡು ಒಂದರಲ್ಲೂ ಗೆಲ್ಲಲಿಲ್ಲ. ...ಹೀನಾಯ ಸೋಲಿನೊಂದಿಗೆ ...ಗೂ ಸೋಲಿನ ಸೂತಕ ... ಕೆ.ಎಲ್.ಇ ಶಿಕ್ಷಣ ಸಂಸ್ಥೆಯ ...ಕನಾಗಿರುವ ಮನವಳ್ಳಿ ಅವಳಿ ...ಳಲ್ಲಿ ಕ್ಯಾಪಿಟೇಶನ್ ಪೀಡೆ ... ಪ್ರಧಾನ ಕಾರಣ. ಈ ಶಿಕ್ಷಣ ... ಒಡೆಯನಾಗಿರುವ ಪ್ರಭಾಕರ ...ರು ಪೆಚ್ಚಿನ ಭಂಟ ಕೂಡ. ... ಪ್ರಭಾಕರ ಕೋರೆ ಬಿಜೆಪಿಗೆ ...ಗಲೇ ಮನವಳ್ಳಿ ಕೂಡ ...ನ್ನೆಂದು ಲೆಕ್ಕ ಹಾಕಲಾಗಿತ್ತು. ... ತಂತ್ರಗಾರಿಕೆಯಲ್ಲಿ ಒಂದಿಷ್ಟು ಪಳಗಿರುವ ...ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಬಿಜೆಪಿ ಸೇಪೆ ...ತ್ತಿದ್ದ, ಚಂದ್ರಕಾಂತ್ ಬೆಲ್ಲದ್, ...ಉದ್ಯಮಿಗಳೊಂದಿಗೆ ಗುಪ್ತವಾಗಿ ವ್ಯವಹಾರ ...ಕೊಂಡಿದ್ದ, ಈತ ಬಿಜೆಪಿಯ ಸ್ಟಾರ್ ...ವ್ ಮಾಲೀಕ ವಿಜಯ ಸಂಕೇಶ್ವರ ...ಳು. ಹೀಗಾಗಿ ಕಾಂಗ್ರೆಸ್ ಒಳಗಿಂದೊಳಗೇ ...ವುದಕ್ಕೆ, ಏನೇನು ಬೇಕೋ ಅದನ್ನೆಲ್ಲಾ ಚಾಚೂತಪ್ಪದೇ ಮಾಡಿದ್ದ. ಈಗ ಅಧಿಕೃತವಾಗಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಎಂಟ್ರಿ ಕೊಟ್ಟಿದ್ದು ವಾಸ್ತವದಲ್ಲಿ ಬಿಜೆಪಿಗಿಂತ ಕಾಂಗ್ರೆಸ್‌ಗೇ ಒಳ್ಳೆಯದಾದಂತಾಗಿದೆ.

ಅಸಲಿಗೆ ಬಿಜೆಪಿಗೆ ಮನವಳ್ಳಿಯನ್ನು ಎಳೆದುಕೊಂಡು ಬಂದದ್ದು ಉದಾಸಿ.



ಮನವಳ್ಳಿ

ಧಾರವಾಡದಲ್ಲಿ ಬಣಜಿಗ ಜಗದೀಶ್ ಶೆಟ್ಟರ್ ಪ್ರಾಬಲ್ಯವನ್ನು ಮುರಿಯುವುದಕ್ಕೆ ಉದಾಸಿ ಕಂಡುಕೊಂಡದ್ದು ಅದೇ ಬಣಜಿಗ ಸಮುದಾಯದ ಮನವಳ್ಳಿಯನ್ನು.

ಕಾಂಗ್ರೆಸ್ಸಿನಲ್ಲಿದ್ದಾಗ ಮನವಳ್ಳಿಗೆ ಒಂದಿಷ್ಟು ಖದರಾದರೂ ಇತ್ತು. ಈಗ ಬಣಜಿಗರ ಪಕ್ಷ ಬಿಜೆಪಿಗೆ ಜಾರಿ ಅಲ್ಲಿಯೂ ಸಲ್ಲದೇ, ಇಲ್ಲಿಯೂ ಸಲ್ಲದೇ ಪಕ್ಕಾ ಸವದತ್ತಿ ಭಾಷಾ ಒತ್ತಿಸಿಕೊಂಡಂತಾಗಿದೆ. ಒಂದಂತೂ ಸತ್ಯ, ಮನವಳ್ಳಿಯ ನಿರ್ಗಮನದಿಂದ ಕಾಂಗ್ರೆಸ್‌ಗೆ ಅಂಟಿಕೊಂಡಿದ್ದ ಶನಿ ತೊಲಗಿದಂತಾಗಿದೆ. ಆದರೆ, ಅದು ಬಿಜೆಪಿಯನ್ನು ಅಡರಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಕಾಂಗ್ರೆಸ್ಸಿನಿಂದ ವಲಸೆ ಬಂದ ಈತನಿಗೆ ಬಿಜೆಪಿಯಲ್ಲಿ ಮುಗಿಹಾಕುತ್ತಿರುವ ಪರಿಯನ್ನು ನೋಡಿ ಮೂಲ ಬಿಜೆಪಿಗಳು ಒಳಗೊಳಗೇ ಸಮರ ಸಾರಿಯಾಗಿದೆ. ಇದೂ ಕೂಡ ಜೋಶಿಗೆ ಕುತ್ತಾಗಲಿದೆ. ■

ಚಾಲಾಕಿ ಯಡ್ಡಿಯೂ, ಸೋಮಣ್ಣನೆಂಬ ದಾಳವೂ



ಬೆಂಗಳೂರಿನ ಗೋವಿಂದರಾಜ್ ನಗರದ ಕಾಂಗ್ರೆಸ್ ಶಾಸಕ ವಿ. ಸೋಮಣ್ಣ ಈಗ ಮುಖ್ಯಮಂತ್ರಿ ಯಡ್ಡಿಯ 'ಬಲಿಕಾ ಬಕ್ರಾ'!

ಬಿಜೆಪಿಗೆ ಇವತ್ತು ಸೇರುತ್ತೇನೆ, ನಾಳೆ ಸೇರುತ್ತೇನೆ ಎಂದು ಯಡ್ಡಿಗೆ ಯಾಮಾರಿಸಿಕೊಂಡು, ಕಾಂಗ್ರೆಸ್ ಪಕ್ಷದಲ್ಲಿದ್ದರೂ ಬಿಜೆಪಿ ನಾಯಕರ ಮನೆಯಲ್ಲಿ ತಿಂಡಿ-ಊಟ ಮಾಡಿಕೊಂಡಿದ್ದ ಶಾಸಕ ಸೋಮಣ್ಣನನ್ನು ಈಗಾಗಲೇ ಯಡ್ಡಿ ಚೆನ್ನಾಗಿ ಬಳಸಿಕೊಂಡಿದ್ದಾರೆ. ಇನ್ನು ಪಕ್ಷಕ್ಕೆ ಕರೆತಂದು 'ಬಲಿ' ತೆಗೆದುಕೊಳ್ಳುವುದಷ್ಟೇ ಬಾಕಿ ಇದೆ.

ಈಗಾಗಲೇ ತಮ್ಮ ಮಗ ಡಾ. ಅರುಣ್ ಸೇರಿದಂತೆ ತನ್ನೆಲ್ಲಾ ಬೆಂಬಲಿಗರನ್ನು ಬಿಜೆಪಿಗೆ ಕಳುಹಿಸಿ ಬಿಜೆಪಿಯಲ್ಲಿ ಒಂದು ಕಾಲಿಟ್ಟಿರುವ ಸೋಮಣ್ಣನ ಕಾಲನ್ನು ಬಿಜೆಪಿಯವರು ಎಳೆಯುತ್ತಾರೋ ಅಥವಾ ಅದಕ್ಕಿಂತಲೂ ಮುಂಚೆಯೇ ಕಾಂಗ್ರೆಸ್ ಎಚ್ಚೆತ್ತು ಏನಾದರೂ ಮಾಡುತ್ತದೋ ಗೊತ್ತಿಲ್ಲ. ಆದರೆ ಸೋಮಣ್ಣ ಯಡ್ಡಿಯ ರಾಜಕೀಯ ಆಟಕ್ಕೆ ದಾಳವಾಗಿ ಬಲಿಯಾಗಲಿರುವುದನ್ನು ನೋಡಿ ಗೋವಿಂದರಾಜ್ ನಗರದ ನಿವಾಸಿಗಳು ಬಿದ್ದು ಬಿದ್ದು ನಗುತ್ತಿದ್ದಾರೆ.

ಈಗಾಗಲೇ ಒಂದು ಬಾರಿ ಸಚಿವ ಸ್ಥಾನದ ರುಚಿ ಕಂಡಿರುವ ವಿ.ಸೋಮಣ್ಣ ರಾಜಕೀಯವಾಗಿ ಮಹತ್ವಾಕಾಂಕ್ಷಿ. ಜನತಾ ಪರಿವಾರದಲ್ಲಿದ್ದಾಗ ದೇವೇಗೌಡರ ಹಿಂದೆ-ಮುಂದೆ 'ಅಪ್ಪಾಜಿ.... ಅಪ್ಪಾಜಿ' ಎಂದು ಸುತ್ತಾಡುತ್ತಾ ರಾಜಕೀಯವಾಗಿ ಮೇಲೆ ಬಂದ ಸೋಮಣ್ಣನನ್ನು ಜೆ.ಎಚ್. ಪಟೇಲ್ ಸಚಿವರನ್ನಾಗಿ ಮಾಡಿದ್ದರು. ಮುಂದೆ ಜನತಾ ಪರಿವಾರ ತೊರೆದು ಕಾಂಗ್ರೆಸ್ ಸೇರಿದರು. ಕಾಂಗ್ರೆಸ್ಸೆಂಬ ದೊಡ್ಡ ಕಡಲಲ್ಲಿ ಈ 'ವಿಜಯನಗರದ ವೀರ ಪುತ್ರ'ನಿಗೆ ಮಿಂಚಲು ಸಾಧ್ಯವಾಗಲೇ ಇಲ್ಲ. ಹೀಗಾಗಿ ಅಧಿಕಾರ ದಾಹ ಹಾಗೂ ಐಡೆಂಟಿಟಿ ಕ್ರೈಸಿಸ್‌ನಿಂದ ಬಳಲುತ್ತಿದ್ದ ಅವರನ್ನು ಯಡ್ಡಿ ಸುಲಭವಾಗಿಯೇ ಬುಟ್ಟಿಗೆ ಹಾಕಿಕೊಂಡರು. ಹೇಳಿ-ಕೇಳಿ ಸೋಮಣ್ಣ ಲಿಂಗಾಯತ ಸಮುದಾಯಕ್ಕೆ ಸೇರಿರುವುದರಿಂದ ಯಡ್ಡಿಗೆ ಅವರ ಮೇಲೆ ಒಂದಿಷ್ಟು ಜಾಸ್ತಿಯೇ ಪ್ರೀತಿ.

'ಆಪರೇಷನ್ ಕಮಲ' ಆರಂಭವಾದ ಸಂದರ್ಭದಲ್ಲಿಯೇ ಸೋಮಣ್ಣ ಬಿಜೆಪಿ ಸೇರುತ್ತಾರೆ, ಸಚಿವರಾಗುತ್ತಾರೆ ಎಂಬ ಸುದ್ದಿ ಇತ್ತು. ಅಂದಿನಿಂದಲೂ ಯಡ್ಡಿಯೊಂದಿಗೆ ಓಡಾಡುತ್ತಲೇ ಇರುವ ಸೋಮಣ್ಣನನ್ನು ಈಗ ಯಡ್ಡಿ ತಮ್ಮ ಬದ್ಧ ವೈರಿ ಅನಂತು ವಿರುದ್ಧ ದಾಳವಾಗಿ ಬಳಸಿಕೊಳ್ಳಲು ಸಜ್ಜಾಗಿದ್ದಾರೆ.

ಅನಂತು ವಿರುದ್ಧ ಸೋಮಣ್ಣ ಅಸ್ತ್ರ

ಗೋವಿಂದರಾಜ್‌ನಗರ ಕ್ಷೇತ್ರ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಇಲ್ಲಿಯ ಬಿಜೆಪಿ ಅಭ್ಯರ್ಥಿ ಯಡ್ಡಿಯ ಪರಮಶತ್ರು ಅನಂತ್ ಕುಮಾರ್! ಮೊನ್ನೆ ಮೊನ್ನೆ ಟಿಕೆಟ್ ಹಂಚಿಕೆಯಲ್ಲಿ ಮೇಲುಗೈ ಸಾಧಿಸಿದ ಯಡ್ಡಿ ವಿರುದ್ಧ ಅನಂತು ಬಹಿರಂಗವಾಗಿಯೇ ಬಂಡೆದ್ದರು. ಆಗ ಯಡ್ಡಿ ಅನಂತು ವಿರುದ್ಧ ಒಂದೇ ಒಂದು ಅಸ್ತ್ರ ಬಿಟ್ಟರು ನೋಡಿ, ಅನಂತು ಕುಯ್ ಗುಟ್ಟುತ್ತಾ ಯಡ್ಡಿಯ ಹಿಂದೆ-ಮುಂದೆ ಸುತ್ತಲಾರಂಭಿಸಿದರು. ಆ ಅಸ್ತ್ರವೇ ವಿ. ಸೋಮಣ್ಣ!

"ಅನಂತು ಹೀಗೆ ಬಂಡಾಯ ಮುಂದುವರೆಸಿದರೆ, ಆತ ಹೇಗೆ ಗೆಲ್ಲುತ್ತಾನೋ ನೋಡುತ್ತೇನೆ" ಎಂದು ಗುಡುಗಿದ ಯಡ್ಡಿ ಸೋಮಣ್ಣನಿಗೆ ಒಂದು ಫೋನ್ ಹಚ್ಚಿದರು. ಯಡ್ಡಿ ಫೋನ್ ಬರುತ್ತಿದ್ದಂತೆಯೇ ಈ ಸೋಮಣ್ಣ ಎಸ್.ಎಂ. ಕೃಷ್ಣರ ಮನೆಯಂಗಳದಲ್ಲಿ ಕಾಣಿಸಿಕೊಂಡು, ಅನಂತು ಬಿಪಿ ಜಾಸ್ತಿಯಾಗುವಂತೆ ಮಾಡಿದ್ದರು. ಮೊದಲೇ ಕಾಂಗ್ರೆಸ್‌ನಿಂದ ಎಸ್.ಎಂ. ಕೃಷ್ಣ ಸ್ಪರ್ಧಿಸುತ್ತಾರೆಂಬ ಸುದ್ದಿ ಕೇಳಿ ಮೂರ್ಛೆ ಹೋಗಿದ್ದ ಅನಂತು, ತನ್ನ ವಿರುದ್ಧ ಸೋಮಣ್ಣನೂ ನಿಂತರೆ ತನ್ನ ರಾಜಕೀಯ ಭವಿಷ್ಯವೇ ಮುಗಿದು ಹೋಯಿತೆಂದು ಯಡ್ಡಿಯೊಂದಿಗೆ ಸಂಧಾನಕ್ಕೆ ಇಳಿದರು. "ಈಗ ಎಲ್ಲವೂ ನೀವು ಹೇಳಿದಂತೆಯೇ ನಡೆಯಲಿ. ಏನಾದರೂ ಇದ್ದರೆ ಚುನಾವಣೆ ನಂತರ ಮಾತನಾಡಿಕೊಳ್ಳೋಣ. ನನ್ನನ್ನು ಸೋಲಿಸಲು ನಡೆಸುತ್ತಿರುವ ಸಂಚನ್ನು ಕೈಬಿಟ್ಟರೆ, ನಾನೂ ಸುಮ್ಮನಾಗುತ್ತೇನೆ" ಎಂದರು ಅನಂತು.

ಯಡ್ಡಿಗೂ ಅದೇ ಬೇಕಿತ್ತು, ಅಕಸ್ಮಾತ್ ಅನಂತು ಸೋತು ಇಲ್ಲಿಯೇ ಉಳಿದರೆ ಆತನ ಕಿರಿಕಿರಿ ಜಾಸ್ತಿಯಾಗುತ್ತದೆ. ಬದಲಾಗಿ ಗೆದ್ದು ಅತ್ತ ಸೆಂಟ್ರಲ್‌ಗೆ ಹೋದರೆ ಒಂದು ರಗಳೆ ತಪ್ಪುತ್ತದೆ ಎಂದು ಲೆಕ್ಕಹಾಕಿದ ಯಡ್ಡಿ ಕೂಡಲೇ ಅನಂತುವಿನ ಈ ಸಂಧಾನದ ಪ್ರಸ್ತಾಪಕ್ಕೆ ಹಸಿರು ನಿಶಾನೆ ತೋರಿಸಿ ಅನಂತು ಹೆಗಲ ಮೇಲೆ ಕೈಹಾಕಿದರು. ಸದ್ಯ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರು ವರ್ಷ ಆಯುಸ್ಸು ಎಂದುಕೊಂಡ ಅನಂತು ಯಡ್ಡಿಯನ್ನು ಈಗ ಎಷ್ಟು ಹಾಡಿ ಹೊಗಳುತ್ತಿದ್ದಾರೆಂದರೆ ಅದನ್ನು ಕೇಳಿ ಅವರೇ ಬೆಚ್ಚಿ ಬೀಳುತ್ತಿದ್ದಾರೆ!

ಶರಣಾದ ಅನಂತುಗೆ ಸಂಧಾನದ ಸಂದರ್ಭದಲ್ಲಿ ಮಾತುಕೊಟ್ಟಂತೆ ಈಗ ಯಡ್ಡಿ, ಸೋಮಣ್ಣನ ಕೆಲ ಬೆಂಬಲಿಗರು ಪಕ್ಷ ಸೇರುವಂತೆ ಮಾಡಿದ್ದಾರೆ. ಆ ಮೂಲಕ ಸೋಮಣ್ಣ ನಿಮ್ಮ ಪರವಾಗಿ ಕೆಲಸ ಮಾಡಲಿದ್ದಾರೆ ಎಂದು ಅನಂತುಗೆ ಸಂದೇಶ ರವಾನಿಸಿದ್ದಾರೆ. ಆದರೆ ಸೋಮಣ್ಣನನ್ನು ಇನ್ನೂ ಪಕ್ಷಕ್ಕೆ ಸೇರಿಸಿ ಕೊಂಡಿಲ್ಲ. ಮುಂದೆ ಅನಂತು ಬಾಲ ಬಿಚ್ಚಿದರೆ ಬೇಕಲ್ಲ ಸೋಮಣ್ಣ ಎಂಬ ಅಸ್ತ್ರ?! ಹಾಗಾಗಿ ಸೋಮಣ್ಣ ಚುನಾವಣೆ ಮುಗಿಯುವವರೆಗೂ ಕಾಂಗ್ರೆಸ್‌ನಲ್ಲಿಯೇ ಇರಲಿ ಎಂದು ಸುಮ್ಮನೆ ಬಿಟ್ಟಿದ್ದಾರೆ ಯಡ್ಡಿ.

ಈ ನಡುವೆ ಅನಂತುವನ್ನು ಹೊರಗಿನಿಂದ ಸೋಲಿಸುವುದು ಕಷ್ಟ ವಾಗಿದ್ದರಿಂದ ಸೋಮಣ್ಣನ ಬೆಂಬಲಿಗ ರನ್ನು ಪಕ್ಷಕ್ಕೆ ಸೇರಿಸಿಕೊಂಡು ಅನಂತು ವಿರುದ್ಧ ಕೆಲಸ ಮಾಡಲು ಯಡ್ಡಿ ಹಚ್ಚಿದ್ದಾರೆಂಬ ವದಂತಿಯು ದಕ್ಷಿಣ ಕ್ಷೇತ್ರದಾದ್ಯಂತ ಹಬ್ಬಿದ್ದು, ಇದರಿಂದ ಅನಂತು ಬೆಂಬಲಿಗರ ಚಡ್ಡಿ ಒದ್ದೆಯಾಗಿದೆ ಎಂಬ ಸುದ್ದಿಯೂ ಇದೆ.

ಸೋಮಣ್ಣನ ಭವಿಷ್ಯವೇನು?

ಕಾಂಗ್ರೆಸ್‌ನಲ್ಲಿಯೇ ಇದ್ದು ಅನಂತುವನ್ನು ಹೆದರಿಸಲು ಯಡ್ಡಿಗೆ ಅಸ್ತ್ರವಾಗಿರುವ ಸೋಮಣ್ಣನ ಭವಿಷ್ಯವೇನು ಎಂಬ ಪ್ರಶ್ನೆಗೆ ಉತ್ತರ ಎಲ್ಲರಿಗೂ ಗೊತ್ತಿದೆ. ಆದರೆ ಸೋಮಣ್ಣನಿಗೆ ಮಾತ್ರ ಗೊತ್ತಿದ್ದಂತಿಲ್ಲ. ಅದಕ್ಕೆ ಅವರು ಬಿಜೆಪಿ ಸೇರುವ ದಿನಕ್ಕಾಗಿ ಕಾದು ಕುಳಿತಿದ್ದಾರೆ. ಆದರೆ ಕಾಂಗ್ರೆಸ್‌ನಲ್ಲಿ ಸಿಗದಿರುವ ಅದ್ಯಾವ ಮರ್ಯಾದೆ ಬಿಜೆಪಿ ಯಲ್ಲಿ ಕಾದಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಈಗ ಅಬ್ಬೆಪಾರಿಯಾಗಿರುವ ಜಗ್ಗೇಶ್ ಮುಖವನ್ನಾದರೂ ಸೋಮಣ್ಣ ಒಮ್ಮೆ ನೋಡಿದರೆ ಸಾಕು!

ಬಿಜೆಪಿಯಲ್ಲೀಗ ಯಡ್ಡಿಯ ಮಾತು ನಡೆಯುತ್ತಿದೆ. ಆದರೆ ಚುನಾವಣೆಯ ನಂತರವೂ ಇದೇ ಪರಿಸ್ಥಿತಿ ಇರುತ್ತದೆಂದು ಹೇಳಲಾಗದು. ಈಗಾಗಲೇ ಬಂಡೆದ್ದಿರುವ ಒಂದು ದೊಡ್ಡ ಬಣ ಪಕ್ಷಕ್ಕೆ 'ಆಮದಾಗಿರುವ' ನಾಯಕರ ವಿರುದ್ಧ ಸಮರವನ್ನೇ ಸಾರಲು ಸಿದ್ಧವಾಗಿದೆ. ಈ ಸಮರದಲ್ಲಿ ಸೋಮಣ್ಣ ಬಲಿಯಾಗದಿರಲು ಅವರೇನು ಆಕಾಶದಿಂದ ಅವತರಿಸಿದ ನಾಯಕನೇನೂ ಅಲ್ಲ.

ಸೋಮಣ್ಣ ಎಷ್ಟು ಮಹತ್ವಾಕಾಂಕ್ಷಿ ಎಂದರೆ ಈಗ ಅವರ ಕಣ್ಣಿರುವುದು ಬೆಂಗಳೂರಿನ ಮೇಯರ್ ಹುದ್ದೆಯ ಮೇಲೆ. ಜನರಿಂದ ನೇರವಾಗಿ ಮೇಯರ್ ಆಯ್ಕೆ ಮಾಡುವ ವ್ಯವಸ್ಥೆ ರೂಪಗೊಂಡಲ್ಲಿ ಬೆಂಗಳೂರು ಮೇಯರ್ ಸ್ಥಾನ ರಾಜ್ಯದ ಮುಖ್ಯಮಂತ್ರಿಯ ಸ್ಥಾನದಂತೆಯೇ ಮಹತ್ವದ ಹುದ್ದೆಯಾಗಲಿದೆ. ಈ ಹುದ್ದೆಯ ಮುಂದೆ ಜುಜುಬಿ ಮಂತ್ರಿಗಿರಿ ಯಾರಿಗೆ ಬೇಕು ಎಂಬುದು ಸೋಮಣ್ಣನ ನಿಲುವು. ಪಕ್ಷಕ್ಕೆ ಬಂದರೆ ಮೇಯರ್ ಹುದ್ದೆಗೆ ಅಭ್ಯರ್ಥಿ ಮಾಡುವುದಾಗಿ ಯಡ್ಡಿ ಸೋಮಣ್ಣನ ಮೂಗಿಗೆ ತುಪ್ಪ ಸವರಿದ್ದಾರೆ. ಅಲ್ಲದೆ ತಮ್ಮ ಬೆಂಬಲಿಗರಿಗೆ ಬಿಬಿಎಂಪಿ ಚುನಾವಣೆ ಸಂದರ್ಭದಲ್ಲಿ ಟಿಕೆಟ್ ನೀಡುವುದಾಗಿ ಆಸೆ ತೋರಿಸಿದ್ದಾರೆ.

ಇದನ್ನು ನಂಬಿ ಸೋಮಣ್ಣ ಯಡ್ಡಿಯ ಅಸ್ತ್ರವಾಗಿದ್ದಾರೆ. ಆದರೆ ಈ ಮಹತ್ವದ ಹುದ್ದೆಯನ್ನು ವಲಸೆ ಬಂದವರಿಗೆ ನೀಡಲು ಮೂಲ ಬಿಜೆಪಿಯವರು ಬಿಡುತ್ತಾರೆಯೇ? ಮೇಯರ್ ಹುದ್ದೆ ಮಾತಿರಲಿ, ಚುನಾವಣೆಯ ನಂತರ 'ಜುಜುಬಿ' ಮಂತ್ರಿಗಿರಿಯನ್ನೂ ವಲಸೆ ಬಂದವರಿಗೆ ನೀಡುವುದು ಕಷ್ಟ ಎಂಬಂತಹ ವಾತಾವರಣ ಬಿಜೆಪಿಯಲ್ಲಿ ನಿರ್ಮಾಣವಾಗಿದೆ. ಇದೆಲ್ಲ ಅರ್ಥವಾಗದ ಸೋಮಣ್ಣ ಬಿಜೆಪಿ ಪರವಾಗಿ ನಿಂತು ಹಗಲು ಕನಸು ಕಾಣುತ್ತಿದ್ದಾರೆ.

ರಾಜಕೀಯ ಆಕಾಂಕ್ಷಿಯಾದವನು ಇದ್ದಲ್ಲಿಯೇ ಇದ್ದು ಕ್ರಿಯಾಶೀಲವಾಗಿ ಕೆಲಸ ಮಾಡಿ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕೇ ಹೊರತು, ಸಿದ್ಧಾಂತ, ಮೌಲ್ಯಗಳನ್ನು ಮರೆತು ಅವಕಾಶ ಸಿಕ್ಕಲ್ಲಿಗೆ ಜಾರುವ ಮಂಗನಂತಾಗ ಬಾರದು. ಇಷ್ಟು ಸೋಮಣ್ಣ ಅರ್ಥಮಾಡಿಕೊಂಡರೆ, ಅವರಿಗೂ ರಾಜ್ಯಕ್ಕೂ ಒಳಿತು.


● ವರದಿಗಾರ

ಶಿಷ್ಯ ಗೇಟ್ ಗಣೇಶನ ಕೊಲೆಯಾದ ಆರನೇ ದಿನಕ್ಕೆ ಪೂಣಿ ಫಿನಿಷ್

"ಇನ್ನೂ ಗೇಟ್ ಗಣೇಶನ ಕೊಲೆಯನ್ನೇ ಅರಗಿಸಿಕೊಳ್ಳಲಾಗದ ಚಾಮರಾಜಪೇಟೆಯ ಜನಕ್ಕಿದು ನಂಬಲಾಗದ ಸುದ್ದಿ.

ಪೂಣಿ ಕೊಲೆಯಾಗಿದ್ದಾನೆ!

ಕಲಾಸಿಪಾಳ್ಯದ ಕೂಲಿ ಮಾಫಿಯಾದ ದೊರೆ ಗೇಟ್ ಗಣೇಶನ ಹತ್ಯೆಯ ಸುವಿಸ್ತಾರ ವರದಿ ಇನ್ನೇನು ಅಚ್ಚಿಗೆ ಹೋಗಬೇಕೆನ್ನುವಾಗಲೇ ಪೂಣಿ ಕೊಲೆಯಾಗಿ ಹೋಗಿದ್ದಾನೆ. ಮಾರ್ಕೆಟ್ ದೇವಿಯ ಬಲಗೈ ಬಂಟ, ಚಾಮರಾಜಪೇಟೆಯ ಪಾಲಿಕೆ ಚುನಾವಣೆಗೆ ಮುಂದಿನ ಕಾಂಗ್ರೆಸ್ ಅಭ್ಯರ್ಥಿ, ಗೋವಿಂದರಾಜ ನಗರದ ಶಾಸಕ ಸೋಮಣ್ಣನ ಪರಮಾಪ್ತ ಅರ್ಧ ಡಜನ್ ರೇಸ್ ಕುದುರೆಗಳ ಒಡೆಯ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್, ಮೈಸೂರು ರಸ್ತೆ ಆಜಾದ್ ನಗರ, ಪಾರ್ವತಿಪುರ ಸೇರಿದಂತೆ ಚಾಮರಾಜಪೇಟೆಯ ಆಗುಹೋಗುಗಳ ಆಧಾರಸ್ತಂಭಗಳ ಪೈಕಿ ಒಬ್ಬನಾಗಿದ್ದ ಪೂಣಿ ಉರ್ಫ್ ನರಸಿಂಹ ಮೂರ್ತಿ ಎಂಬ ದೈತ್ಯದೇಹಿಯನ್ನು ಆತನ ಮನೆಯೆದುರಿಗೇ ಕೊಚ್ಚಿ ಹಾಕಿದ್ದಾರೆ.


ಪೂಣಿ

ಅದೂ ಆತನ ನೆಚ್ಚಿನ ಶಿಷ್ಯ ಗೇಟ್ ಗಣೇಶನ ಕೊಲೆಯಾದ ಆರನೇ ದಿನಕ್ಕೆ ಸರಿಯಾಗಿ-

ಪೂಣಿ ಬೆಂಗಳೂರು ಕಂಡ ಹಳೇ ರೌಡಿ. ಚಾಮರಾಜಪೇಟೆಯ ಮಾಜಿ ಶಾಸಕ ಆರ್.ವಿ. ದೇವರಾಜ್ ಉರ್ಫ್ ಮಾರ್ಕೆಟ್ ದೇವಿಯ ಎಡಗೈ ಮತ್ತು ಬಲಗೈಗಳಂತಿದ್ದ ಲೋಕಿ-ಪೂಣಿ ಜೋಡಿಯ ಅರ್ಧ ಪಾಲನ್ನು ನಿಕಾಲಿ ಮಾಡಿದವನು ಮತ್ತೊಬ್ಬ ಹಳೇ ರೌಡಿ ಕಪಾಲಿ ಆನಂದ!

ಪೂಣಿ ಉರ್ಫ್ ನರಸಿಂಹಮೂರ್ತಿ ಮತ್ತು ಕಪಾಲಿ ಆನಂದರ ಜಿದ್ದಾಜಿದ್ದಿಗೆ ಕಮ್ಮಿಯೆಂದರೂ ಇಪ್ಪತ್ತು ವರ್ಷದ ಇತಿಹಾಸವಿತ್ತು. ಇಲ್ಲಿಗೆ ಐದು ವರ್ಷದ ಹಿಂದಷ್ಟೇ ಪೂಣಿ ತನ್ನ ನೆಚ್ಚಿನ ಬಂಟ ಗೇಟ್ ಗಣೇಶ್ ಮತ್ತು ದಡಿಯಾ ಸೀನರನ್ನು ಬಿಟ್ಟು ಕಪಾಲಿ ಆನಂದನ ಮನೆಗೆ ನುಗ್ಗಿಸಿ ಕುಯ್ದು ಹಾಕಿಸಿದ್ದ. ಈಗ ಚುಕ್ತಾಗೊಂಡಿರುವುದು ಅದರ ರಿವೇಂಜಾ? ಪೂಣಿಯ ಹತ್ಯೆಗೆ ಮುಂಬರುವ ಪಾಲಿಕೆ ಚುನಾವಣೆಗೂ ನಂಟಿದೆಯಾ?


ಗೇಟ್ ಗಣೇಶ್

ಕಪಾಲಿ ಆನಂದನ ಬೆನ್ನಿಗಿರುವುದು ಚಾಮರಾಜಪೇಟೆಯ ಮಾಜಿ ಕೌನ್ಸಿಲರ್ ಅಪ್ಪೋಡರಾ? ಆಜಾದ್ ನಗರದ ಮತ್ತೊಬ್ಬ ಕೌನ್ಸಿಲರ್ ಶ್ರೀನಿವಾಸಮೂರ್ತಿಯಾ? ಅಥವಾ ಆಜಾದ್ ನಗರದ ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಕಣ್ಣಿಟ್ಟದ್ದ ಹಳೇ ಪಾತಕಿ ಎಸ್.ಎಂ. ಸರ್ದಾರಾ?

ರಾಜಕೀಯದ ಕತೆ ಒತ್ತಟ್ಟಿಗಿರಲಿ, ಪೂಣಿ ಯಾವತ್ತೂ ಯಾಮಾರಿದವನಲ್ಲ. ತನ್ನ ಇನ್ನೋವಾ ಗಾಡಿ ಹತ್ತಿದನೆಂದರೆ ಹಿಂದೆಯೇ ಒಂದು ಸ್ಕಾರ್ಪಿಯೋದ ತುಂಬ ಹುಡುಗರನ್ನಿಟ್ಟುಕೊಂಡಿರುತ್ತಿದ್ದ. ಸಾಲದ್ದಕ್ಕೆ ಒಬ್ಬರಲ್ಲಾ ಮೂವರು ಗನ್‌ಮನ್‌ಗಳನ್ನು ತನ್ನ ರಕ್ಷಣೆಗಿಟ್ಟುಕೊಂಡಿದ್ದ. ಖಾಸಗಿ ಸೆಕ್ಯೂರಿಟಿಯ ಬಂದೂಕುಧಾರಿ ಅಂಗರಕ್ಷಕರನ್ನಿಟ್ಟುಕೊಂಡು ಊರೆಲ್ಲಾ ಸುತ್ತಿ ಪೋಜು ಕೊಟ್ಟ ಪೂಣಿಗೆ ಆತನ ಕೊನೆಗಾಲದಲ್ಲಿ ಗನ್‌ಮನ್‌ಗಳಾಗಲಿ, ಜೊತೆಗಿದ್ದ ಹುಡುಗರಾಗಲಿ, ಕೊಂಡ ಐಷಾರಾಮಿ ಗಾಡಿಗಳಾಗಲಿ ಯಾವುದೂ ನೆರವಿಗೆ ಬರಲೇ ಇಲ್ಲ.

ಪ್ರತಿನಿತ್ಯ ಚಾಮರಾಜಪೇಟೆಯ ಎಸ್‌ಎಲ್‌ವಿ ಹೋಟೆಲ್ ಬಳಿ ಅಡ್ಡೆ ಹಾಕುವುದು ಪೂಣಿಯ ಚಟವಾಗಿತ್ತು. ಪೂಣಿಯಷ್ಟೇ ಅಲ್ಲ, ಲೋಕಿ, ಅಕ್ಕಿಮಂಡಿ ದಿನೇಶ, ಸುಧಾಮನಗರದ ಮಾಜಿ ಕೌನ್ಸಿಲರ್ ಪ್ರಭು ಮತ್ತು ಹಳೇಪಳೇ ಪುಢಾರಿಗಳ ಜೊತೆ ದಿನ ಬೆಳಗ್ಗೆಯಾದರೆ ಎಸ್‌ಎಲ್‌ವಿ ಹೋಟೆಲಿನ ಮುಂದೆ ಅಡ್ಡೆ ಹಾಕುತ್ತಿದ್ದ ಪೂಣಿಗೆ ಇಲ್ಲಿಗೆ ಐದು ದಿನಗಳ ಹಿಂದಷ್ಟೇ ಗೇಟ್ ಗಣೇಶನ ಕೊಲೆಯಾಗಿದ್ದು ಪಾಠವಾಗಬೇಕಿತ್ತು. ಏಕೆಂದರೆ ಗೇಟ್ ಗಣೇಶ ಪೂಣಿಯ ನೆಚ್ಚಿನ ಬಂಟ.


ಆನಂದ

ಗೇಟ್ ಗಣೇಶನ ಕೊಲೆಯಾಗಿದ್ದು ಇನ್ನೊಂದರ್ಥದಲ್ಲಿ ತನ್ನ ಹಳೇ ದುಷ್ಮನ್ ಕಪಾಲಿ ಆನಂದನಿಗೆ ಅನುಕೂಲವಾಗಲಿದೆಯೆಂಬ ಲೆಕ್ಕಾಚಾರ ಪೂಣಿಗಿರಬೇಕಿತ್ತು. ಹೇಗೂ ತನ್ನ ದುಷ್ಮನ್ ಕಪಾಲಿ ಆನಂದನಿಗೆ ವಯಸ್ಸಾಗಿದೆ. ಹಿಂದಿನಷ್ಟು ಹಣಕಾಸಿನ ಕೊಬ್ಬಾಗಲಿ, ಹುಡುಗರ ಬೆಂಬಲವಾಗಲಿ ಇಲ್ಲ. ನಟ ಕಂ ಫೈನಾನ್ಸಿಯರ್ ಕೆ.ಪಿ. ನಂಜುಂಡಿಯ ಹೊರತಾಗಿ ಕಪಾಲಿ ಆನಂದನಿಗೆ ಬೇರೆ ಯಾವ ಸಪೋರ್ಟೂ ಇಲ್ಲ. ಅಂಥವನು ಏನು ತಾನೇ ಮಾಡಿಕೊಳ್ಳಬಲ್ಲ? ಎಂದೇ ಲೆಕ್ಕ ಹಾಕಿದ ಪೂಣಿ ಯಾಮಾರಿಬಿಟ್ಟ.

■ ರಾ. ಸೋಮನಾಥ್

ದಿನಂಪ್ರತಿ ವಾಕಿಂಗ್‌ಗೆಂದು ಲಾಲ್‌ಬಾಗ್‌ಗೆ ಬಂದು ನಂತರ ಚಾಮರಾಜಪೇಟೆಯ ಎಸ್‌ಎಲ್‌ವಿ ಹೋಟೆಲಿನ ಮುಂದೆ ಗಾಡಿ ಪಾರ್ಕ್ ಮಾಡಿ, ತಿಂಡಿ ತಿಂದು ನಂತರ ಆಜಾದ್‌ನಗರದ ತನ್ನ ಮನೆ ಸೇರಿಸಿಕೊಳ್ಳುವುದು ಪೂಣಿಯ ದಿನಚರಿ.

ತಾನು ಬೆಳಗ್ಗೆಯೆದ್ದು ವಾಕಿಂಗ್‌ಗೆ ಹೋಗುವುದನ್ನು ದುಷ್ಮನ್ ಕಪಾಲಿ ಆನಂದ ಗಮನಿಸಿರಲಿಕ್ಕಿಲ್ಲ ಎಂದೇ ಪೂಣಿ ಭಾವಿಸಿದ್ದ. ಎಸ್‌ಎಲ್‌ವಿ ಹೋಟೆಲಿನ ಮುಂದೆ ಲೋಕಿಯ ಪಡೆ ಇರುತ್ತದೆಯಾದ್ದರಿಂದ ಅಲ್ಲಿ ತನ್ನನ್ನು ಯಾರೂ ಮುಟ್ಟಲಾರರೆಂದೇ ಲೆಕ್ಕ ಹಾಕಿದ್ದ. ಆದರೆ ಕಪಾಲಿ ಆನಂದ ಸಾಕ್ಷಾತ್ ನಾಗರ ಹಾವಿನಂಥವನು. ತನ್ನ ಇಪ್ಪತ್ತು ವರ್ಷಗಳ ದುಷ್ಮನಿಗೊಂದು ಅಂತ್ಯ ಕಾಣಿಸಲೇಬೇಕಿತ್ತು. ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಆನಂದನ ಮಗನನ್ನು ಅಟ್ಟಾಡಿಸಿದ್ದರು. ತನ್ನ ಮಗನನ್ನು ಕೊಲ್ಲಿಸಲು ಪೂಣಿ ಹುಡುಗರನ್ನು ಬಿಟ್ಟು ಸ್ಕೆಚ್ ಹಾಕಿದ್ದಾನೆಂದೇ ಕಪಾಲಿ ಚಾಮರಾಜಪೇಟೆ ಪೊಲೀಸ್ ಠಾಣೆಗೆ ದೂರು ಕೊಟ್ಟ.


ಗೇಟ್ ಗಣೇಶ್

ತನ್ನ ಮಗನ ಮೇಲೆ ಪೂಣಿ ಕಣ್ಣಿಟ್ಟಿದ್ದು ಕಪಾಲಿಯ ಗಮನಕ್ಕೆ ಬಂದ ಕೆಲದಿನಕ್ಕೆ ಮತ್ತೊಂದು ಘಟನೆ ಸಂಭವಿಸಿತು. ಅದು ಕಪಾಲಿಯ ಪತ್ನಿಗೆ ಬಂದ ಕಿರುಕುಳ. ಚಾಮರಾಜಪೇಟೆಯ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ ಕೆಲ ರೌಡಿಗಳು ಅಡ್ಡಗಟ್ಟಿ ಆಸಿಡ್ ಹಾಕ್ತೀವಿ ಎಂದು ಹೆದರಿಸಿದರಂತೆ. ತನ್ನ ಮೇಲಿನ ದುಷ್ಮನಿಗೆ ಪೂಣಿ ತನ್ನ ಮಗನನ್ನು ಮುಗಿಸಲು ಯತ್ನಿಸಿದ, ಹೆಂಡತಿಗೆ ಕಿರುಕು... ಕೊಟ್ಟ ಎಂದೇ ಕಪಾಲಿ ಆನಂದ ಅಲ್ಲಲ್ಲಿ ಹೇಳಿಕೊಂ...

ಈ ಮಧ್ಯೆಯೇ ಪೂಣಿಯ ನೆಚ್ಚಿನ ಬಂಟ ಗೇ... ಗಣೇಶನ ಕೊಲೆಯಾಯಿತು. ಮಾ... ಇಪ್ಪತ್ತರ ರಾತ್ರಿ ಕಲಾಸಿಪಾಳ್ಯದ ಸಾರಾ... ಅಂಗಡಿಯೆದುರು ಏತಕ್ಕೋ ತನ್ನ ಕಾ... ಬಿಟ್ಟು ಕೆಳಕ್ಕಿಳಿದ ಗೇಟ್ ಗಣೇಶನನ್ನು ಆತ... ಜೊತೆಗಿದ್ದ ಹುಡುಗರೇ ಕೊಚ್ಚಿ ಹಾಕಿದ್ದರು... ಇದೇ ಗೇಟ್ ಗಣೇಶನನ್ನು ಬಿಟ್ಟು... ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪೂಣಿ ತ... ಹೊಟ್ಟೆಗೆ ರೇಜರ್ ಹಾಕಿಸಿದ್ದು ಕಪಾಲಿ... ನೆನಪಾಗಿದೆ.

ಜೈಲಲ್ಲಿರುವ ತನ್ನ ಪಕ್ಕಾ ಶಿಷ್ಯ ಸ್ಟಾರ್ ಸುನೀಲನಿಗೆ ಸುದ್ದಿ ಮುಟ್ಟಿಸಿದ್ದಾನೆ. ಆದರೆ ಸ್ಟಾರ್ ಸುನೀಲ ಯಾವತ್ತೋ ಕಪಾಲಿ ಆನಂದನಿಂದ ದೂರಾಗಿಬಿಟ್ಟ... ಅದಕ್ಕೆ ಕಾರಣ ಸೈಕಲ್ ರವಿ. ಬೆಂಗಳೂರು ಕಂಡ ನಟೋರಿಯಸ್ ಸುಪಾರಿ ಹಂತಕರ ಪೈಕಿ ಅತ್ಯಂ... ಅಪಾಯಕಾರಿ ಮತ್ತು ಚಾಲಾಕಿಯಾದ ಸೈಕಲ್ ರ... ಮತ್ತು ಬನಶಂಕರಿಯ ಕ್ರಿಮಿ ಪರಂಧಾಮ ಇಬ್ಬರೂ ಸದ್ಯ ಜೈಲಿನಲ್ಲಿಲ್ಲ. ಹೊರಗಿದ್ದು ಕೊಂಡೇ ಜೈಲಿನೊಳಗೂ ಆಪರೇಟ್ ಮಾಡುವ ಇಂಥ ಪಾತಕಿಗಳ ಜೊತೆ ಇತ್ತೀಚೆಗೆ ಕಪಾಲಿ ಆನಂದ ಲಿಂಕ್ ಸಾಧಿಸಿದ್ದನ್ನು ಕಂಡೇ ಸ್ಟಾರ್ ಸುನೀಲ ಕಪಾಲಿಯಿಂದ ದೂರಾದ. ಬಹುಶಃ ಕಪಾಲಿ ಸೈಕಲ್ ರವಿಗೆ ಡೀಲು ಕೊಟ್ಟಿರಬೇಕು. ಪೂಣಿಗೆ ಮುಹೂರ್ತವಿಡುವಲ್ಲಿ ಪರಂಧಾಮನೂ ಕೈಜೋಡಿಸಿರ... ಬೇಕು. ಗೇಟ್ ಗಣೇಶನ ಕೊಲೆಯಾದ ಮರುದಿನದಿಂದಲೇ ಪೂಣಿಯ ಚಲನವಲನಗಳ ಮೇಲೆ ಹಂತಕ ಪಡೆ ಕಣ್ಣಿಟ್ಟಿದೆ. ಮಾಮೂಲಿನಂತೆ ಮಾರ್ಚ್ 26 ರ ಗುರುವಾರದ ಅಮಾವಾಸ್ಯೆಯ ಬೆಳಗ್ಗೆ ತನ್ನ ವಾಕಿಂಗ್ ಮುಗಿಸಿದ ಪೂಣಿ ಚಾಮರಾಜಪೇಟೆಯ ಎಸ್‌ಎಲ್‌ವಿ ಹೋಟೆಲಿಗೆ ಬಂದು ಲೋಕಿ ಮತ್ತಿತರರ ಜೊತೆ ಹರಟಿದ್ದಾನೆ. ಅಲ್ಲಿ ತಿಂಡಿ ಮುಗಿಸಿದವನು ನೇರವಾಗಿ ಚಾಮರಾಜಪೇಟೆಯ ಸಿಟಿ ಇನ್‌ಸ್ಟಿಟ್ಯೂಟ್‌ಗೆ ಬಂದಿದ್ದಾನೆ. ಜೊತೆಗಿದ್ದ ದಡಿಯಾ ಸೀನ "ಇವತ್ತು ಅಮಾವಾಸ್ಯೆ ಕಣೋ ಗಡ್ಡ ಬೋಳಿಸಬೇಡ" ಎಂದಿದ್ದಾನೆ. ಅದ್ಯಾವುದನ್ನೂ ಲೆಕ್ಕಿಸದ ಪೂಣಿ ಸೆಲೂನಿಗೆ ಹೋಗಿ ಶೇವ್ ಮಾಡಿಸಿಕೊಂಡವನು ತನ್ನಿಬ್ಬರು ಬಂದೂಕುಧಾರಿ ಬಾಡಿಗಾರ್ಡ್‌ಗಳ ಜೊತೆ ಇನ್ನೋವಾ ಗಾಡಿ ಹತ್ತಿದ್ದಾನೆ.

ಬಹುಶಃ ಹಂತಕರ ಪಡೆ ಸಿಟಿ ಇನ್‌ಸ್ಟಿಟ್ಯೂಟ್ ಬಳಿಯೇ ಆಟೆಂಪ್ಟ್ ಮಾಡಿದೆ. ಆದರೆ ಅವಕಾಶವಾಗಿದ್ದು ಪೂಣಿಯ ಮನೆ ಪಕ್ಕದಲ್ಲೇ ಇರುವ ಆಜಾದ್‌ನಗರದ ಪಾರ್ಕ್ ಬಳಿ. ಎರಡೋ ಅಥವಾ ಮೂರೋ ಬೈಕುಗಳಲ್ಲಿ ಹಂತಕರ ಗ್ಯಾಂಗ್ ಪೂಣಿಯನ್ನು ಹಿಂಬಾಲಿಸಿದೆ. ಪಾರ್ಕ್ ಬಳಿ ಏತಕ್ಕೋ ತನ್ನ ಗಾಡಿಯನ್ನು ನಿಲ್ಲಿಸಿದ ಪೂಣಿಗೆ ಎಂಥಾ ಶಾಕ್ ಕಾದಿತ್ತೆಂದರೆ ಹಿಂಬಾಲಿಸಿ ಬಂದ ಬೈಕ್ ಒಂದರಿಂದ ಇಳಿದವನೊಬ್ಬ ಗಾಡಿಯಲ್ಲಿ ಕೂತಿದ್ದ ಬಂದೂಕುಧಾರಿ ಬಾಡಿಗಾರ್ಡ್‌ಗಳಿಬ್ಬರ ಕಣ್ಣಿಗೂ ಕಾರದ ಪುಡಿ ಎರಚಿಬಿಟ್ಟ. ಏನಾಗುತ್ತಿದೆ ಎಂದು ಗೊತ್ತಾಗುವ ಮೊದಲೇ ಇನ್ನೆರಡು ಬೈಕ್‌ಗಳು ಪ್ರತ್ಯಕ್ಷಗೊಂಡವು. ಬಂದೂಕುಧಾರಿ ಬಾಡಿಗಾರ್ಡ್‌ಗಳು ಒಂದೆಡೆ ಕಣ್ಣುಜ್ಜಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಪೂಣಿಯನ್ನು ಗಾಡಿಯಿಂದೆಳೆದುಕೊಂಡ ಹಂತಕರ ಗ್ಯಾಂಗ್ ಬದುಕುಳಿಯಲೇಬಾರದೆಂಬಂತೆ ತಲೆತಲೆಗೆ ಲಾಂಗ್ ಬೀಸುತ್ತಿತ್ತು.

ಊಹೂಂ, ತಲೆ, ಮುಖ, ಕತ್ತು, ಎದೆ, ಭುಜ ಬೆನ್ನು ಎಲ್ಲೆಂದರಲ್ಲಿ ಅಸಂಖ್ಯಾತ ಲಾಂಗ್ ಏಟುಗಳಿಂದ ಪೂಣಿ ಕಿರುಚಿಕೊಳ್ಳುವುದಕ್ಕೂ ಆಗದೇ ಕುಸಿದುಬಿದ್ದ. ಜೊತೆಗಿದ್ದ ದಡಿಯಾ ಸೀನನ ಕೈಗೊಂದು ಲಾಂಗ್ ಏಟು ಬಿದ್ದಿದ್ದೇ ಆತ ಗಾಡಿಯಿಂದ ನೆಗೆದವನು ಎಲ್ಲೋ ನಾಪತ್ತೆಯಾಗಿದ್ದ. ಪಕ್ಕದಲ್ಲೇ ಮನೆಯಿತ್ತಾದ್ದರಿಂದ ಪೂಣಿಯ ಸಂಬಂಧಿಗಳೊಂದಿಬ್ಬರು ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದರಾದರೂ, ಪೂಣಿ ಯಾವತ್ತಿಗೋ ಕೊನೆಯುಸಿರೆಳೆದಿದ್ದ.

ಅಂತಿಮ ಜಯ ಕಪಾಲಿ ಆನಂದನದಾ? ಅಥವಾ ಆತನ ಹೆಸರಲ್ಲಿ ಕೊಂದು ಮುಗಿಸಿದ ಸೈಕಲ್ ರವಿಯದ್ದಾ?

ಪೂಣಿ ಹೆಸರಿಗಷ್ಟೇ ರೌಡಿಯಂತಿದ್ದ. ವಾಸ್ತವವಾಗಿ ಆತ ಓರ್ವ ಹುಂಬ. ಕಪಾಲಿ ಆನಂದನ ಜೊತೆ ದುಷ್ಮನಿಯಿಲ್ಲದೇ ಹೋಗಿದ್ದರೆ ಯಾವತ್ತೋ ಪಾಲಿಕೆ ಸದಸ್ಯನಾಗುತ್ತಿದ್ದ. ರೌಡಿಯಂತೆ ಪೋಜು ಕೊಡುವುದು ಗೊತ್ತಿತ್ತೇ ಹೊರತು ಪಾತಕ ಕಾರ್ಯಾಚರಣೆಗಳ ಮರ್ಮ ತಿಳಿದಿರಲಿಲ್ಲ. ಅದು ಗೊತ್ತಿದ್ದಿದ್ದರೆ ಹೀಗೆ ನಡುರಸ್ತೆಯಲ್ಲಿ ಸಾಯುತ್ತಿರಲಿಲ್ಲ.

ಗೇಟ್ ಗಣೇಶನ ಪಟ್ಟಕ್ಕೆ ಮಾರ್ಕೆಟ್ ವೇಡಿ

ಅವತ್ತು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಕಪಾಲಿ ಆನಂದನನ್ನು ಪೂಣಿ ಗ್ಯಾಂಗ್ ಯಾವ ಪರಿ ಕುಯ್ದು ಹಾಕಿತ್ತೆಂದರೆ, ಕಪಾಲಿ ಆನಂದನ ಹೊಟ್ಟೆಯೇ ಸೀಳಾಗಿ ಕರುಳುಗಳು ಆಚೆಗೆ ಬಂದಿದ್ದವು. ಮುಖ, ಎದೆ, ಭುಜ, ತಲೆ ಎಲ್ಲೆಂದರಲ್ಲಿ ಬಿದ್ದ ಮಚ್ಚಿನೇಟಿಗೆ ಕಪಾಲಿ ಸತ್ತೇ ಹೋದನೆಂದು ಭಾವಿಸಿದ ಪೂಣಿ ಗ್ಯಾಂಗ್ ಅಷ್ಟಕ್ಕೇ ಆತನನ್ನು ಬಿಟ್ಟು ಹೋಗಿತ್ತು.

ಅವತ್ತು ಹಾಗೆ ಕಪಾಲಿಯನ್ನು ಅಟ್ಟಾಡಿಸಿ ಕತ್ತರಿಸಿದ ಇಬ್ಬರುಪೂಣಿಯ ಬಂಟರ ಪೈಕಿ ಒಬ್ಬಾತ ಈಗ ಜೊತೆಗಿದ್ದ ದಡಿಯ ಸೀನನಾದರೆ, ಮತ್ತೊಬ್ಬ ಮೊನ್ನೆ - ಅಂದರೆ ಮಾರ್ಚ್ 20ರ ರಾತ್ರಿ-ಕಲಾಸಿಪಾಳ್ಯದ ಸಾರಾಯಿ ಅಂಗಡಿಯೆದುರು ಕೊಲೆಯಾದ ಗೇಟ್ ಗಣೇಶ.

ಗೇಟ್ ಗಣೇಶ ಪೂಣಿಯ ನೆಚ್ಚಿನ ಬಂಟ. ಕಲಾಸಿಪಾಳ್ಯದ ಕೂಲಿ ಮಾಫಿಯಾ ಕಂಡ ಲೇಟೆಸ್ಟ್ ದೊರೆಯೀತ. ಪ್ರತಿನಿತ್ಯ ಎಲ್ಲೆಲ್ಲಿಂದಲೋ ತರಕಾರಿ ಹೊತ್ತು ಕಲಾಸಿಪಾಳ್ಯದ ಮಾರುಕಟ್ಟೆಗೆ ಬರುವ ಅಸಂಖ್ಯಾತ ಲಾರಿಗಳಿಂದ ತರಕಾರಿ ಮೂಟೆಗಳನ್ನು ಇಳಿಸುವ ಕೂಲಿಗಳದೇ ಒಂದು ವಿಲಕ್ಷಣ ಲೋಕ. ಒಂದು ಮೂಟೆಯನ್ನು ಲಾರಿಯಿಂದ ಅನ್‌ಲೋಡ್ ಮಾಡಲು 10 ರೂಪಾಯಿ. ಆದರೆ ಏಳು ರೂಪಾಯಿ ಕೂಲಿಗಾದರೆ ಉಳಿಕೆ ಮೂರು ರೂಪಾಯಿ ಸೇರುವುದು ಕೂಲಿ ಮಾಫಿಯಾದ ದೊರೆಗೆ. ಅನಾದಿ ಕಾಲದಿಂದಲೂ ಇಂತಹದ್ದೊಂದು ಕೂಲಿ ಮಾಫಿಯಾ ಕಲಾಸಿಪಾಳ್ಯದಲ್ಲಿದೆ. ಇದರ ಪಟ್ಟಕ್ಕೆಂದೇ ಈವರೆಗೆ ಐದು ಭೀಕರ ಹತ್ಯೆಗಳಾಗಿವೆ. ಮೊದಲು ಕೂಲಿಗಳ ದೊರೆಯಾಗಿದ್ದವನು ರಾಮಣ್ಣ ಉರ್ಫ್ ಭಟ್ರು ಎಂಬ ಮಂಡ್ಯದ ಹೈದ. ದಿನವೊಂದಕ್ಕೆ ಅನಾಯಾಸವಾಗಿ ಸಾವಿರಾರು ರೂಪಾಯಿ ಬಡಕೂಲಿಗಳ ಬೆವರಿನ ದುಡ್ಡು ಬರುತ್ತದೆಯೆಂದರೆ ಯಾರಿಗೆ ಬೇಡ?

ಇದೇ ಕಾರಣಕ್ಕೆ ಭಟ್ರು ರಾಮಣ್ಣನನ್ನು ಅಯ್ಯೂಬ್ ಎಂಬ ಕೂಲಿ ಪಂಟರ್ ಓರ್ವ ಕೊಂದು ಹಾಕಿದ. ಆದರೆ ಎರಡೇ ವರ್ಷಕ್ಕೆ ಅಯ್ಯೂಬ್‌ನನ್ನು ಅಯ್ಯಾ ಬಾಬು ಕೊಲ್ಲಿಸಿ ತಾನು ಕೂಲಿಗಳ ದೊರೆಯಾಗಲು ಯತ್ನಿಸಿದ. ಅದಕ್ಕೆ ಅಡ್ಡ ಬಂದವನು ಶಂಕ್ರ ಉರ್ಫ್ ಕೋಳಿಜುಟ್ಟು ಎಂಬ ಮಗದೊಬ್ಬ ಪಂಟರ್. ಒಂದಷ್ಟು ದಿನಗಳವರೆಗೆ ಕೂಲಿಗಳ ದೊರೆಯಾಗಿದ್ದ ಕೋಳಿಜುಟ್ಟು ಶಂಕ್ರನನ್ನು ಮತ್ತದೇ ಅಯ್ಯಾ ಬಾಬು, ಗೇಟ್ ಗಣೇಶ, ಗೇಟ್ ಮೂರ್ತಿ, ಬೇಬಿ ಕೃಷ್ಣ ಪುಳ್ಳಿ, ಮಣಿ, ಗೋಪಾಲ, ಮುಂತಾದವರೆಲ್ಲ ಸೇರಿ ಕಲಾಸಿಪಾಳ್ಯದ ಸಾರಾಯಿ ಅಂಗಡಿ ಎದುರೇ ಕೊಚ್ಚಿ ಕೊಂದರು. ಶಂಕ್ರನ ಜಾಗಕ್ಕೆ ಕೂಲಿಗಳ ಹೊಸ ದೊರೆಯಾಗಿ ಬಂದವನೇ ಬೇಬಿ ಕೃಷ್ಣ.

ಆದರೆ ಬೇಬಿ ಕೃಷ್ಣ ಅಯ್ಯಾ ಬಾಬುವಿನ ಷರತ್ತಿನ ಮೇರೆಗೆ ಕೂಲಿಗಳ ದೊರೆಯಾಗಿದ್ದ!


ಆ ಪ್ರಕಾರ ಪ್ರತಿನಿತ್ಯ ಕೂಲಿಗಳಿಂದ ವಸೂಲಾಗುವ ಬಾಬತ್ತಿನ ಏಳು ಸಾವಿರ ರೂ.ಗಳನ್ನು ಬೇಬಿ ಕೃಷ್ಣ ಅಯ್ಯಾ ಬಾಬುವಿಗೆ ಕೊಡಬೇಕು. ಇದು ಕಲಾಸಿಪಾಳ್ಯದ ತರಕಾರಿ ಮಾರುಕಟ್ಟೆಯ ಪಾರುಪತ್ತೆಯ ಕಷ್ಟವಾದರೆ ಪಕ್ಕದ ಕೆ.ಆರ್. ಮಾರುಕಟ್ಟೆಯನ್ನು ನಿಭಾಯಿಸುತ್ತಿದ್ದ ಗೇಟ್ ಮೂರ್ತಿ ಎಂಬಾತನೂ ಅಷ್ಟೇ ಮೊತ್ತ ಕೊಡಬೇಕು!

ಅಲ್ಲಿಗೆ ಕುಂತ ಜಾಗದಲ್ಲೇ ಅಯ್ಯಾ ಬಾಬು ದಿನವೊಂದಕ್ಕೆ 14 ಸಾವಿರ ಗಳಿಸುತ್ತಿದ್ದ. ಅದೇನಾಯಿತೋ ಮೂರ್ನಾಲ್ಕು ವರ್ಷದಲ್ಲೇ ಬೇಬಿ ಕೃಷ್ಣ ಬಾಬು ವಿರುದ್ಧ ತಿರುಗಿಬಿದ್ದ. 2002ರಲ್ಲಿ ಮತ್ತೆ ಅಯ್ಯಾ ಬಾಬು, ಗೇಟ್ ಗಣೇಶ ಮುಂತಾದವರೆಲ್ಲ ಸೇರಿ ಬೇಬಿ ಕೃಷ್ಣನನ್ನು ಕೊಂದರು. ಬೇಬಿ ಕೃಷ್ಣನ ಜಾಗಕ್ಕೆ ನಿಂತವನೇ ಗೇಟ್ ಗಣೇಶ.

ಅದೇನು ಗಣೇಶನ ಲಕ್ಕೋ.. 2004ರ ಸುಮಾರಿಗೆ ಅಯ್ಯಾ ಬಾಬು ಕಾಯಿಲೆ ಬಿದ್ದು ಸತ್ತೇ ಹೋದ. ಅಲ್ಲಿಗೆ ಇಡೀ ಕಲಾಸಿಪಾಳ್ಯ ತರಕಾರಿ ಮಾರ್ಕೆಟ್ ಮೂರ್ತಿ

ಗೇಟ್ ಗಣೇಶನ ವಶವಾಗಿತ್ತಾದರೂ ಕೊಲೆಯಾಗಿದ್ದ ಬೇಬಿ ಕೃಷ್ಣನ ಬಂಟನೊಬ್ಬ ಮೆತ್ತಗೆ ಚಿಗುರಿಕೊಂಡಿದ್ದ. ಆತನೇ ಮಾರ್ಕೆಟ್ ವೇಡಿ!

ಪ್ರತಿನಿತ್ಯ ಬಿಟ್ಟಿಗೆ ಗಿಟ್ಟುವ ಕೂಲಿಗಳ ದುಡ್ಡೇ ಕನಿಷ್ಠ ಇಪ್ಪತ್ತು ಸಾವಿರದಷ್ಟಾಗುತ್ತಿತ್ತು. ನೋಡು ನೋಡುತ್ತಲೇ ಕುಬೇರನಾದ ಗೇಟ್ ಗಣೇಶ ತನ್ನ ಹುಟ್ಟೂರು ತಮಿಳುನಾಡಿನ ಪೆರುನಾಂಗುಪಟ್ಟಿಯಲ್ಲಿ ನಟ ವಿಜಯಕಾಂತ್ ಪಕ್ಷದಿಂದ ಚುನಾವಣೆಗೆ ನಿಂತು ಪಂಚಾಯ್ತಿ ಅಧ್ಯಕ್ಷನಾದ. ಆದರೆ ದುರಾಶೆ ಬಿಡಲಿಲ್ಲ. ಕಣ್ಣಮುಂದೆಯೇ ಮಾರ್ಕೆಟ್ ವೇಡಿ ಬೆಳೆದು ನಿಂತಿದ್ದ ಆತನ ಬೆನ್ನಿಗಿರುವವನು ಸೈಲೆಂಟ್ ಸುನೀಲ. ಪ್ರತಿನಿತ್ಯ ಸಾವಿರಾರು ರೂಪಾಯಿಯ ಆದಾಯವುಳ್ಳ ಕೂಲಿ ಮಾಫಿಯಾದ ದೊರೆ ಪಟ್ಟದ ಮೇಲೆ ಮಾರ್ಕೆಟ್ ವೇಡಿ ಕಣ್ಣಿಟ್ಟಿದ್ದು ಗೊತ್ತಿದ್ದೂ ಪದೇ ಪದೇ ಬೆಂಗಳೂರಿಗೆ ಬಂದು ದುಡ್ಡೆಣಿಸಿಕೊಳ್ಳುತ್ತಿದ್ದ. ಸುಖಕ್ಕೆ ಬಿದ್ದ. ಹೆಂಗಸರ ಖಯಾಲಿಗಿಳಿದ. ಜೊತೆಗಿದ್ದ ಯಾರನ್ನೂ ದುಡ್ಡು ಕಾಸು ಕೊಟ್ಟು ಚೆನ್ನಾಗಿಟ್ಟುಕೊಳ್ಳಲಿಲ್ಲ. ಇನ್ನು ಮಾರ್ಕೆಟ್ ಸಹವಾಸ ಸಾಕು ಎಂದು ಅನೇಕರು ಬುದ್ಧಿ ಹೇಳಿದರೂ ಕೇಳಲಿಲ್ಲ.


ಆರ್.ವಿ.ದೇವರಾಜ್

ಯಾವ ಕೋಳಿಜುಟ್ಟು ಶಂಕ್ರನನ್ನು ಇದೇ ಕಲಾಸಿಪಾಳ್ಯದ ಸಾರಾಯಿ ಅಂಗಡಿಯೆದುರಿಗೆ ಗಣೇಶ ಕತ್ತರಿಸಿ ಹಾಕಿದ್ದನೋ ಅದೇ ಜಾಗದಲ್ಲಿ ಗಣೇಶನನ್ನು ಆತನ ಹುಡುಗರೇ ಕೊಚ್ಚಿ ಹಾಕಿದ್ದಾರೆ. ಯಾವ ಪೂಣಿಗಾಗಿ ಕಪಾಲಿ ಆನಂದನನ್ನು ಕುಯ್ದಿದ್ದನೋ ಅಂಥ ಪೂಣಿಯೇ ಗಣೇಶನ ಹೆಣ ನೋಡಲು ಬರಲಿಲ್ಲ. ಯಾವ ಮಾರ್ಕೆಟ್ ದೇವಿಗಾಗಿ ಚುನಾವಣೆಯಲ್ಲಿ ಬಡಿದಾಡಿದ್ದನೋ ಅದೇ ದೇವಿ ನೆಪಕ್ಕೂ ಗಣೇಶನ ಸಾವಿನತ್ತ ತಲೆ ಹಾಕಲಿಲ್ಲ.

ಇದು ಗೇಟ್ ಗಣೇಶನಿಗಷ್ಟೇ ಅಲ್ಲ, ಆತನನ್ನು ಕೊಲ್ಲಿಸಿ ದೊರೆ ಪಟ್ಟಕ್ಕೆ ಬಂದ ಮಾರ್ಕೆಟ್ ವೇಡಿಗೂ ಪಾಠವಾಗಬೇಕು.

▶3

ಮಕ್ಕಳಾದ ಆರ್. ಕೊಟೇಶಪ್ಪ, ಆರ್. ನಾಗೇಂದ್ರ
ಗಳು ಚಿತ್ರದುರ್ಗ ತಾ. ಹಿರೇಗುಂಟನೂರು (ಹೋ)
ಲು ನಾಗೇನಹಳ್ಳಿ ಗ್ರಾಮದ ರಿ.ಸ.ನಂ. 14/4ಬ
ರ್ಣ 3.10 ಗುಂಟೆ ಖುಷ್ಕಿ ಜಮೀನನ್ನು 90
ಗಳು ಪೂರ್ತಿಯಾಗಿ ಗುತ್ತಿಗೆ ಕೊಟ್ಟು ಅದೇ ದಿನ
ಗಳ ಸಮಕ್ಷಮ ಒಂದೂವರೆ ಲಕ್ಷ ರೂ.ಗಳನ್ನು
ಾಗಿ ಪಡೆದಿರುತ್ತೇವೆ.

ಸದರಿ ಗುತ್ತಿಗೆದಾರರಿಂದ ಯಾವುದೇ ಬಾಕಿ ಹಣ
ವುದಿಲ್ಲ. 90 ವರ್ಷಗಳು ಸದರಿ ಜಮೀನಿನಲ್ಲಿ
ಾಯ ವಗ್ಯೆರೆ ಕೆಲಸ ಮಾಡಲು ಹಾಗೂ
ಹುದಾದ ಕಬ್ಬಿಣದ ಕಲ್ಲನ್ನು ಮತ್ತು ಖನಿಜ
ನ್ಮೂಲಗಳನ್ನು ಎಷ್ಟು ಆಳ ಬೇಕಾದರೂ ಅಗೆದು
ುಲು ನಿಮಗೆ ಸಂಪೂರ್ಣ ಹಕ್ಕು ಮತ್ತು ಅಧಿಕಾರ
ತ್ತದೆ. ನಮ್ಮ ಸಂಪೂರ್ಣ ಒಪ್ಪಿಗೆ ಇರುತ್ತದೆ. ಈ
ಧಿ ಮುಗಿದ ಮೇಲೆ ಸದರಿ ಜಮೀನನ್ನು ನಮ್ಮ
ಯಾವ ತಂಟೆ ತಕರಾರು ಮಾಡದೇ
ಕೊಡತಕ್ಕದ್ದು. ಸದರಿ ಜಮೀನಿನಲ್ಲಿ ಕಬ್ಬಿಣದ ಕಲ್ಲನ್ನು
ುಲು ಸಂಬಂಧಪಟ್ಟ ಕಚೇರಿಯಲ್ಲಿ ಅನುಮತಿ
ಯುಲು ಮತ್ತು ಪರವಾನಗಿ ವಗ್ಯೆರೆ ಪಡೆಯಲು
ಾದ ದಾಖಲಾತಿಗಳಿಗೆ ನೀವು ಕರೆದ ದಿವಸ ಬಂದು
ು ಮಾಡಲು ನಾವುಗಳು ಒಪ್ಪಿರುತ್ತೇನೆ.

ಹೀಗೆ ಸುದೀರ್ಘ ಟಿಪ್ಪಣಿಯೊಂದಿಗೆ
ಡಿಕೊಡಲಾಗಿರುವ ಈ ಗುತ್ತಿಗೆ ಕರಾರುಪತ್ರದ ಉದ್ದೇಶ
ಬುದು ಎಂಥವರಿಗೂ ತಿಳಿಯುತ್ತದೆ. ಇದೊಂದೇ
ಗೆ ಕರಾರುಪತ್ರವಾಗಿದ್ದರೆ ಯಾರೂ ತಲೆಕೆಡಿಸಿಕೊಳ್ಳುವ
ತ್ಯವಿರಲಿಲ್ಲ. ಆದರೆ ಅದೇ ದಿನ ಅದೇ ಜಮೀನನ್ನು
ಬಸವರಾಜನ್ ಹೆಸರಿಗೆ ಕ್ರಯದ ಕರಾರುಪತ್ರವನ್ನು
ಮಾಡಿಕೊಡಲಾಗಿದೆ.

ವರಗಳು ಈ ಕೆಳಕಂಡಂತಿವೆ:

ರಾಮಪ್ಪನವರ ಹೆಸರಿನಲ್ಲೇ ಖರೀದಿಸಲಾಗಿರುವ
ಪ್ ಬಿ.ಡಿ./2 ನಂ. 384889ರ ಜಮೀನು ಕ್ರಯದ
ರುಪತ್ರದಲ್ಲಿ ಮೇಲೆ ಗುತ್ತಿಗೆ ಕರಾರು ಪತ್ರದಲ್ಲಿ
ಮೂದಿಸಲಾಗಿರುವ ರಾಮಪ್ಪ ಮತ್ತು ಆತನ ಮಕ್ಕಳು,
ನ್ಮಠದ ಆಡಳಿತಾಧಿಕಾರಿ ಎಸ್.ಕೆ.
ವರಾಜನ್‌ರವರಿಗೆ ಅದೇ ಷೆಡ್ಯೂಲ್‌ನಲ್ಲಿ
ಲಿಸಲಾದ ಸೊತ್ತನ್ನು ಒಂದು ಲಕ್ಷದ ನಲವತ್ತಾರು
ರದ ಇನ್ನೂರ ಐವತ್ತು ರೂಪಾಯಿಗಳಿಗೆ ಕ್ರಯಕ್ಕೆ
ತಿರುತ್ತಾರೆ. ನಗದಾಗಿ 40 ಸಾವಿರ ಅಡ್ವಾನ್ಸ್ ಪಡೆದು
ಳಿದ ಹಣವನ್ನು ರಿಜಿಸ್ಟರ್ ಮಾಡುವ ಸಂದರ್ಭದಲ್ಲಿ
ಡಬೇಕೆಂದು ಆ ಸಂದರ್ಭದಲ್ಲಿ 2ನೇ ಪಾರ್ಟಿಯಾದ
ವರಾಜನ್‌ಗಾಗಲೀ, ಅಥವಾ ಅವರ ಸೂಚಿಸಿದ
ರಿನವರಿಗಾಗಲಿ ಮೂಲ ದಾಖಲೆಗಳೊಂದಿಗೆ ರಿಜಿಸ್ಟರ್
ಡಿಕೊಡಲು ಒಪ್ಪಿದ್ದೇವೆಂದು ಕರಾರು
ಡಿಕೊಂಡಿದ್ದಾರೆ.

ಈಗಿರುವ ಪ್ರಶ್ನೆ ಎಂದರೆ ಒಬ್ಬನೇ ವ್ಯಕ್ತಿ ತನ್ನ ಒಂದೇ
ಸಂ. ಜಮೀನನ್ನು ಒಂದೇ ದಿನ ಒಬ್ಬನೇ ವ್ಯಕ್ತಿಗೆ ಕ್ರಯ
ಗೂ ಗುತ್ತಿಗೆ ಎರಡನ್ನೂ ಮಾಡಿಕೊಡಬಹುದೇ?
ತ್ತಿಗೆಗೊಂದು ಬೆಲೆ, ಕರಾರಿಗೊಂದು ಬೆಲೆ
ಮೂದಿಸಬಹುದೆ? ಕ್ರಯಕ್ಕೆ ಜಮೀನು ಕೊಳ್ಳುವ ವ್ಯಕ್ತಿಗೆ
ಕೇ ಜಮೀನನ್ನು ಗುತ್ತಿಗೆ ಕರಾರು ಮಾಡಿಕೊಳ್ಳುವ
ತ್ಯವೇನು ಇರುತ್ತದೆ? ಇದು ಕಾನೂನುಬದ್ಧವಾಗಿ
ಯಬಹುದಾದ ವ್ಯವಹಾರವೇ? ಗುತ್ತಿಗೆ
ರುಪತ್ರದಲ್ಲಿ ನಮೂದಿಸಲಾದ ಕಬ್ಬಿಣದ ಕಲ್ಲು,
ಬಂಧಪಟ್ಟ ಕಚೇರಿ ಅನುಮತಿ ಇತ್ಯಾದಿ ವಿವರಗಳನ್ನು
ು ಕರಾರುಪತ್ರದಲ್ಲಿ ಏಕೆ ನಮೂದಿಸಿಲ್ಲ?

ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ಹೆಸರಿಗೆ
ರು ಆಗಿದ್ದ ಈ ಜಮೀನು ಶ್ರೀ ಶಿವಮೂರ್ತಿ
ಣರ ಹೆಸರಿಗೆ ರಿಜಿಸ್ಟರ್ ಆಗಿದ್ದು ಯಾವಾಗ?
ಮೀನು ಕ್ರಯ ಕರಾರುಪತ್ರದಲ್ಲಿ ಹೇಳಿರುವಂತೆ 2ನೇ
ರ್ಟಿ ಬಸವರಾಜನ್ ಸೂಚನೆ ಮೇರೆಗೆ ಶರಣರ ಹೆಸರಿಗೆ
ಜಿಸ್ಟರ್ ಮಾಡಲಾಗಿದೆಯೋ ಅಥವಾ ಪ್ರತ್ಯೇಕವಾಗಿ
ಮೀನು ಕ್ರಯವನ್ನು ಶರಣರ ಹೆಸರಿಗೆ ನೇರವಾಗಿ
ಡಲಾಗಿದೆಯೋ? ಹಾಗೆಯೇ ನೇರವಾಗಿ ಕ್ರಯ ಮಾಡಿ
ಟ್ಟಿದ್ದ ಪಕ್ಷದಲ್ಲಿ ಬಸವರಾಜನ್‌ರವರೊಂದಿಗೆ
ಾಡಿಕೊಳ್ಳಲಾದ ಈ ಕರಾರುಪತ್ರಗಳು ರದ್ದಾಗಿದ್ದು
ಾವಾಗ........? ಹೀಗೆ ಪ್ರಶ್ನೆಗಳ ಸರಮಾಲೆ
ಟ್ಟಿಕೊಳ್ಳುತ್ತದೆ.

ಬೃಹನ್ಮಠದ ಆಡಳಿತಾಧಿಕಾರಿಯಾಗಿದ್ದ ಬಸವರಾಜನ್‌ರ
ಳಿತದ ನಿರ್ವಹಣೆಯ ಶೈಲಿ ಹೇಗಿತ್ತು? ತಮ್ಮ
ಾಸ್ತಿಗಳನ್ನು ಹೇಗೆ ಕಾಪಾಡಿಕೊಳ್ಳುತ್ತಿದ್ದರು? ಪ್ರಸ್ತುತ
ರುಘಾಚರಣರ ವಿರುದ್ಧ ದಾಖಲಾಗಿರುವ ಇದೇ
ಮೀನಿಗೆ ಸಂಬಂಧಿಸಿದ ಪ್ರಕರಣದ ವಿಷಯದಲ್ಲಿ
ಸವರಾಜನ್‌ರ ಪಾತ್ರ ಯಾವ ಸ್ವರೂಪದ್ದು ಎಂಬುದನ್ನು
ರ್ಥ ಮಾಡಿಕೊಳ್ಳಲು, ವಿವೇಚಿಸಲು ಇದು
ಹಾಯಕವಾಗಬಹುದು.


ಬಿಜೆಪಿ: ತಣ್ಣಗಾಗದ ಭಿನ್ನಮತದ ಬೆಂಕಿ

ಬಿಜೆಪಿಯಲ್ಲಿ ಭುಗಿಲೆದ್ದಿದ್ದ ಭಿನ್ನಮತ ತಣ್ಣಗಾಗಿದೆಯೇ? 'ಖಂಡಿತ ಇಲ್ಲ' ಎನ್ನುತ್ತಿದ್ದಾರೆ ಬಂಡಾಯದ ಬಾವುಟ ಹಾರಿಸಿರುವ ಬಿಜೆಪಿ ನಾಯಕರು.

"ನಮ್ಮ ಮಾತು ಕೇಳಲು ಯುಗಾದಿಯವರಗೆ ಗಡುವು ನೀಡಿದ್ದೇವೆ. ಯುಗಾದಿ ನಂತರವೂ ಪರಿಸ್ಥಿತಿ ಹೀಗೆಯೇ ಇದ್ದಲ್ಲಿ ಪಕ್ಷ ಉಳಿಸಿ ಆಂದೋಲನ ನಡೆಸಿಯೇ ತೀರುತ್ತೇವೆ' ಎಂದು ಯತ್ನಾಳ್ ಅಂಡ್ ಶಿವಪ್ಪ ಗ್ಯಾಂಗ್ ಪ್ರಕಟಿಸಿದೆ.

ಆದರೆ, ಅಸಮಾಧಾನಗೊಂಡಿದ್ದ ಅನಂತು ಮಾತ್ರ ಮುಖ್ಯಮಂತ್ರಿ ಯಡ್ಡಿ ಮೇಲಿನ ಸಿಟ್ಟನ್ನು ಸದ್ಯಕ್ಕೆ ಬದಿಗಿಟ್ಟು ಸಂಧಾನ ಮಾಡಿಕೊಂಡಿದ್ದಾರೆ. 'ನಾವಿಬ್ಬರೂ ಹಕ್ಕಾ-ಬುಕ್ಕರು, ನಮ್ಮದು ದೋನಿ-ಸಚಿನ್ ಜೋಡಿ' ಎಂದೆಲ್ಲಾ ಬಿಂಬಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ಚುನಾವಣೆಯಲ್ಲಿ ಯಡ್ಡಿ ತಮ್ಮ ವಿರುದ್ಧ ಮಸಲತ್ತು ನಡೆಸಬಾರದೆಂಬುದು.

ಆದರೆ ಅನಂತು ಒಳಗೊಳಗೇ ಕುದಿಯುತ್ತಿದ್ದಾರೆ. ಈಗ ಸುಮ್ಮನಿದ್ದಂತೆ ಕಾಣಿಸಿಕೊಂಡು, ಚುನಾವಣೆ ನಂತರ ಯಡ್ಡಿಯನ್ನು ಖೆಡ್ಡಾಕ್ಕೆ ಕೆಡವಲು ಸಕಲ ಸಿದ್ಧತೆ ನಡೆಸಿದ್ದಾರೆ. ಬಂಡಾಯದ ಬಾವುಟ ಹಾರಿಸಿರುವ ಯತ್ನಾಳ್ ಅಂಡ್ ಗ್ಯಾಂಗ್ ಜೊತೆ ನಿರಂತರ ಸಂಪರ್ಕದಲ್ಲಿರುವ ಅನಂತು, ಅವರ ಹೋರಾಟಕ್ಕೆ ಮಾರ್ಗದರ್ಶನ ನೀಡುವುದರಲ್ಲಿ ಬಿಜಿಯಾಗಿದ್ದಾರೆ.



ಹಲ್ಮುಖಿ ಗೌಡರ ಉತ್ತರನ ಪೌರುಷ!

ಭಿನ್ನಮತ ಭುಗಿಲೆದ್ದಿದ್ದ ಸಂದರ್ಭದಲ್ಲಿ ಹಾಸ್ಯಾಸ್ಪದರಾದವರೆಂದರೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹಲ್ಮುಖಿ ಗೌಡ. ಬಂಡಾಯದ ಬಾವುಟ ಹಾರಿಸಿರುವ ಮಾಜಿ ಕೇಂದ್ರ ಸಚಿವ ಯತ್ನಾಳ್‌ರನ್ನು 'ಇವತ್ತು ಪಕ್ಷದಿಂದ ಹೊರಹಾಕುತ್ತೇವೆ', 'ಇನ್ನೆರಡು ದಿನಗಳ ಒಳಗೆ ತೀರ್ಮಾನ ಹೊರಬೀಳಲಿದೆ' ಎಂದು ಕಳೆದ ಒಂದು ತಿಂಗಳಿನಿಂದ ಬಡಬಡಾಯಿಸುತ್ತಲೇ ಬಂದಿದ್ದಾರೆ. ಆದರೆ ಯತ್ನಾಳ್‌ರ ಒಂದು ಕೂದಲು ಅಲ್ಲಾಡಿಸಲೂ ಅವರಿಂದ ಸಾಧ್ಯವಾಗಿಲ್ಲ. 'ನಿಮ್ಮಿಂದ ನನ್ನನ್ನು ಏನೂ ಮಾಡಲು ಸಾಧ್ಯವೇ ಇಲ್ಲ' ಎಂದು ಯತ್ನಾಳ್ ಪ್ರತಿ ಸವಾಲು ಹಾಕಿದರೂ ಗೌಡರ ಉತ್ತರನ ಪೌರುಷ ನಿಂತಿರಲಿಲ್ಲ.

ಆದರೆ, ಒಂದು ವಾರದ ಹಿಂದೆ ಯತ್ನಾಳ್‌ರ ಶಕ್ತಿ ಏನೆಂಬುದು ಗೌಡರಿಗೆ ಅರ್ಥವಾದಂತಿದೆ. ಹೀಗಾಗಿ ಈಗ ಬಾಯಿ ಮುಚ್ಚಿಕೊಂಡು ಸುಮ್ಮನಿದ್ದಾರೆ. ಯತ್ನಾಳ್ ಈಗ ಏಕಾಂಗಿಯಲ್ಲ. ಜೊತೆಗೆ ರಾಜ್ಯಸಭಾ ಸದಸ್ಯ ಕೆ.ಬಿ.ಶಾಣಪ್ಪ, ಮಾಜಿ ಸಂಸದ ಡಾ. ಬಿ.ಜಿ. ಜವಳಿ, ಮಾಜಿ ಶಾಸಕ ಬಿ.ಬಿ. ಶಿವಪ್ಪ, ದ.ಕ.ದ ಉರಿಮಜಲು ರಾಮಭಟ್ ಅಂಡ್ ಟೀಮ್- ಹೀಗೆ ದೊಡ್ಡ ಬಣವೇ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಅನಂತ್‌ಕುಮಾರ್ ಮತ್ತು ಅವರ ಬೆಂಬಲಿಗರು ಪರೋಕ್ಷವಾಗಿ ಇವರ ಜೊತೆ ಕೆಲಸ ಮಾಡುತ್ತಿದ್ದಾರೆ. 'ಯಾವುದೇ ಕಾರಣಕ್ಕೂ ಬಂಡಾಯದ ಬಾವುಟ ಇಳಿಸಬೇಡಿ, ನಿಮಗೇನೂ ಆಗದಂತೆ ನಾನು ನೋಡಿಕೊಳ್ಳುತ್ತೇನೆ' ಎಂದು ಅನಂತು ಸ್ಪಷ್ಟ ಸೂಚನೆ ನೀಡಿದ್ದಾರೆ.




ಹಲ್ಮುಖಿ ಗೌಡ ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಯತ್ನಾಳ್ ವಿರುದ್ಧ ಕ್ರಮ ತೆಗೆದುಕೊಂಡರೆ ತಾನೂ ಬಹಿರಂಗವಾಗಿ ಅವರ ಜೊತೆ ಸೇರಿಕೊಳ್ಳುತ್ತೇನೆ ಎಂದು ಅನಂತು ರಾಷ್ಟ್ರಾಧ್ಯಕ್ಷ ರಾಜನಾಥಸಿಂಗ್‌ಗೆ ತಿಳಿಸಿದ್ದಾರಂತೆ. ಈಗಾಗಲೇ ಬಿಜೆಪಿ ರಾಷ್ಟ್ರಮಟ್ಟದಲ್ಲಿ ಒಡೆದ ಮನೆಯಾಗಿದ್ದು, ಮತ್ತೊಂದು ರಿಸ್ಕ್ ತೆಗೆದುಕೊಳ್ಳಲು ಸಿಂಗ್ ಸಿದ್ಧರಿಲ್ಲ. ಹೀಗಾಗಿ ರಾಜ್ಯ ಬಿಜೆಪಿ ಘಟಕ ಕಳುಹಿಸಿದ ಶಿಫಾರಸ್ಸನ್ನು ಕೆಳಗೆ ಹಾಕಿಕೊಂಡು ಕುಳಿತಿದ್ದಾರೆ.

ಚುನಾವಣೆ ಮುಗಿಯುವವರೆಗೂ ಭಿನ್ನಮತದ ಕಾವನ್ನು ಜೀವಂತವಾಗಿರಿಸಿಕೊಂಡು, ಚುನಾವಣೆ ನಂತರ ಸ್ಫೋಟಿಸುವುದು ಅನಂತು ಬಣದ ಉದ್ದೇಶ ಎನ್ನಲಾಗಿದೆ. ಹೀಗಾಗಿ ಶಿವಪ್ಪ ಮತ್ತು ಯತ್ನಾಳ್ ಯಡ್ಡಿ ವಿರುದ್ಧದ ಟೀಕಾ ಪ್ರಹಾರ ಮುಂದುವರೆಸಿಕೊಂಡು ಬಂದಿದ್ದಾರೆ. ಈ ನಡುವೆ ರಾಜ್ಯದ ಉಸ್ತುವಾರಿ ನೋಡಿಕೊಳ್ಳುತ್ತಿರುವ ವೆಂಕಯ್ಯನಾಯ್ಡು ಕೂಡ ಒಳಗೊಳಗೇ ಭಿನ್ನಮತಕ್ಕೆ ನೀರೆರೆಯುತ್ತಿದ್ದಾರೆ. ಇದರಿಂದ ಉತ್ತೇಜಿತರಾಗಿರುವ ಯತ್ನಾಳ್, ಶಿವಪ್ಪ ಮತ್ತಿತರರು ಪ್ರತಿದಿನವೂ ಹೇಳಿಕೆ ನೀಡಿ, ಯಡ್ಡಿ ಮತ್ತು ಗೌಡಗೆ ಸವಾಲೊಡ್ಡುತ್ತಿದ್ದಾರೆ.

ಚುನಾವಣೆ ನಂತರ ಯಡ್ಡಿಗೆ ಕಾದಿದೆ ಮಾರಿಹಬ್ಬ ಎಂದು ಬಿಜೆಪಿ ನಾಯಕರು, ಕಾರ್ಯಕರ್ತರು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದಾರೆ.

ಅನಂತು ಪರದಾಟ!

ಟಿಕೆಟ್ ಹಂಚಿಕೆ ಕುರಿತು ಯಡ್ಡಿ ಮತ್ತು ಅನಂತು ನಡುವೆ ಭಿನ್ನಮತ ಭುಗಿಲೆದ್ದಿದ್ದಾಗ ಆರ್‌ಎಸ್‌ಎಸ್ ಮುಖಂಡರ ಸಮ್ಮುಖದಲ್ಲಿ ನಡೆದ ಸಂಧಾನ ಮಾತುಕತೆ ಸಂದರ್ಭದಲ್ಲಿ ಉಳಿದ ಎಂಟು ಕ್ಷೇತ್ರಗಳ ಅಭ್ಯರ್ಥಿಯ ಆಯ್ಕೆ ಜವಾಬ್ದಾರಿಯನ್ನು ಅನಂತುಗೆ ಬಿಟ್ಟು ಕೊಡುವ ತೀರ್ಮಾನವಾಗಿತ್ತು.



ಕಳೆದ ವಾರ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಇದರಲ್ಲಿ ನಾಲ್ಕು ಕ್ಷೇತ್ರಗಳ ಅಭ್ಯರ್ಥಿ ಹೆಸರನ್ನು ಅಂತಿಮಗೊಳಿಸಲಾಗಿದೆ. ಬೆಂಗಳೂರು ಸೆಂಟ್ರಲ್‌ಗೆ ತಮ್ಮ ಬೆಂಬಲಿಗ ಪಿ.ಸಿ. ಮೋಹನ್‌ಗೆ ಟಿಕೆಟ್ ದೊರೆಯುವಂತೆ ಮಾಡಿದ್ದು ಬಿಟ್ಟರೆ, ಅನಂತುಗೆ ಮತ್ತೇನು ಸಾಧಿಸಲಾಗಿಲ್ಲ. ಯಡ್ಡಿ ಈ ಕ್ಷೇತ್ರದಿಂದ ಮಾಜಿ ಲೋಕಾಯುಕ್ತ ವೆಂಕಟಾಚಲರನ್ನೋ, ಕೃಷ್ಣಾ ರೆಡ್ಡಿ ಎಂಬ 'ಅಪರಿಚಿತ' ಧನವಂತನಿಗೋ ಟಿಕೆಟ್ ನೀಡಲುದ್ದೇಶಿಸಿದ್ದರು. ಇನ್ನು ಹಾಸನ ಮತ್ತು ಕೋಲಾರದ ಟಿಕೆಟ್ ನೀಡಿಕೆಯಿಂದ ಅಸಮಾಧಾನಗೊಂಡಿರುವ ಬಿಜೆಪಿ ಮಂದಿ ಯಡ್ಡಿ ಬಳಿ ಹೋಗಿ ದೂರು ನೀಡಿದರೆ, ಅವರಿಗೆಲ್ಲಾ ಯಡ್ಡಿ ಅನಂತು ಮನೆ ದಾರಿ ತೋರಿಸಿ "ಅಲ್ಲಿ ಹೋಗಿ ವಿಚಾರಿಸಿಕೊಳ್ಳಿ'' ಎಂದು ನಗುತ್ತಿದ್ದರಂತೆ!

ಇನ್ನು ಬೆಂಗಳೂರು ಉತ್ತರ, ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಮಂಡ್ಯ ಕ್ಷೇತ್ರಗಳ ಅಭ್ಯರ್ಥಿಗಳನ್ನು ಅನಂತು ಬಣ ಆಯ್ಕೆ ಮಾಡಬೇಕಾಗಿದೆ. ವಲಸೆ ಬರುವವರಿಗಾಗಿಯೇ ಕಾದು ಕುಳಿತಿರುವ ಅನಂತು, ಕಾಂಗ್ರೆಸ್ ಬಗ್ಗೆ ಅಂಬರೀಷ್ ಅಸಮಾಧಾನಗೊಂಡಿದ್ದಾರೆ ಎಂದು ಗೊತ್ತಾಗುತ್ತಿದ್ದಂತೆ ತಮ್ಮ ಬಂಟ ಆರ್‌ಎಸ್‌ಎಸ್ ಕೇಡರ್ ಅರವಿಂದ ಲಿಂಬಾವಳಿಯನ್ನು ಅವರ ಮನೆಗೆ ಕಳಿಸಿ, ಆಹ್ವಾನ ನೀಡಿದರು. ಅಧಿಕಾರದಲ್ಲಿರುವ ಯಡ್ಡಿ ತಮ್ಮೊಂದಿಗೆ ಮಾತಿಗೆ ಕುಳಿತಿದ್ದರೆ ಅಂಬಿ ಗೌರವ ನೀಡುತ್ತಿದ್ದರೇನೋ. ಆದರೆ ಅನಂತು ಪ್ರತಿನಿಧಿಯಾಗಿ ಬಂದ ಲಿಂಬಾವಳಿಗೆ ಕೇವಲ ಪಾನಕ ಕೊಟ್ಟು ಕಳಿಸಿದ್ದಾರೆ.

ಅನಂತುಗೆ ಟಿಕೆಟ್ ಹಂಚಿಕೆಯ ಜವಾಬ್ದಾರಿ ಸಿಕ್ಕಿರುವುದರಿಂದ ಖುಷಿ ಪಟ್ಟ ಪ್ರಾಣಿ ಎಂದರೆ ಸಚಿವ ರಾಮಚಂದ್ರಗೌಡ. ಬೆಂಗಳೂರು ಉತ್ತರ ಕ್ಷೇತ್ರದಿಂದ ಇವರನ್ನು ಕಣಕ್ಕಿಳಿಸಲು ಯಡ್ಡಿ ಏಕಾಏಕಿ ತೀರ್ಮಾನ ತೆಗೆದುಕೊಂಡಿದ್ದರು. ಇದಕ್ಕೆ ಕಾರಣ ಅನಂತು ಹೇಳಿದವರಿಗೆ ಟಿಕೆಟ್ ನೀಡಬಾರದೆಂಬುದಾಗಿತ್ತು. ಇದರಿಂದ ಬೆಚ್ಚಿ ಬಿದ್ದಿದ್ದ ಗೌಡರು 'ನನ್ನನ್ನು ಪಣಕ್ಕಿಡಬೇಡಿ' ಎಂದು ಕಂಡ ಕಂಡವರನ್ನೆಲ್ಲಾ ಬೇಡುತ್ತಿದ್ದರು. ಆದರೆ ಅನಂತುಗೇ ಈಗ ಟಿಕೆಟ್ ಹಂಚಿಕೆಯ ಅಧಿಕಾರ ಸಿಕ್ಕಿರುವುದರಿಂದ 'ಬದುಕಿದೆಯೇ ಬಡ ಜೀವವೇ' ಎಂದು ರಾಮಚಂದ್ರಗೌಡ ಖುಷಿ ಪಟ್ಟು, ಬಾಯಿಗೆ ಬಂದಂತೆ ಮಾತನಾಡುವುದನ್ನು ಜಾಸ್ತಿ ಮಾಡಿದ್ದಾರಂತೆ.

ಉಳಿದಿರುವ ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅನಂತು ಅಂಡ್ ಟೀಮ್ ಪರದಾಡುತ್ತಿರುವುದನ್ನು ನೋಡಿ ಯಡ್ಡಿ ಬಣ ಬಿದ್ದು ಬಿದ್ದು ನಗುತ್ತಿದೆಯಂತೆ.

ಬಿಜೆಪಿ ಲೆಕ್ಕಾಚಾರವೇನು?

ಕಾಂಗ್ರೆಸ್‌ನಲ್ಲಿರುವ ಒಕ್ಕಲಿಗರ ನಾಯಕ ಅಂಬರೀಷ್‌ರನ್ನು ಬಿಜೆಪಿಗೆ ಸೇರಿಸಿಕೊಂಡರೂ ಒಕ್ಕಲಿಗರ ಸಮುದಾಯ ಪಕ್ಷವನ್ನು ಬೆಂಬಲಿಸುವ ಗ್ಯಾರಂಟಿ ಚೆಡ್ಡಿಗಳಿಗಿಲ್ಲ. ಏಕೆಂದರೆ ಈಗಾಗಲೇ ಬಹುಸಂಖ್ಯಾತ ಒಕ್ಕಲಿಗರು ಬಿಜೆಪಿ ವಿರುದ್ಧ ವಿದ್ದಾರೆ. ಬಿಜೆಪಿಗೆ ಅಂಬಿ ಸೇರಿದರೆ ಆ ಸಮುದಾಯದ ಮತಗಳು ಬಿಜೆಪಿಗೆ ಹೋಗುವುದಿಲ್ಲ, ಬದಲಾಗಿ ಸಾಲಿಡ್ ಆಗಿ ಜೆಡಿಎಸ್ ಕಡೆಗೆ ಹೋಗುತ್ತವೆ. ಆಗ ಮಂಡ್ಯ ವಿಷಯ ಪಕ್ಕಕ್ಕಿರಲಿ, ಮೈಸೂರು ಭಾಗದಲ್ಲೂ ಪಕ್ಷ ಖಾತೆ ತೆರೆಯುವುದೂ ಕಷ್ಟವಾಗಲಿದೆ ಎಂಬುದು ಬಿಜೆಪಿ ಲೆಕ್ಕಾಚಾರ.




ಒಕ್ಕಲಿಗರ ಮತಗಳನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಹಂಚಿಕೊಂಡರೆ ಮಾತ್ರ ಈ ಭಾಗದಲ್ಲಿ ಬಿಜೆಪಿ ತನ್ನ ಬೇಳೆ ಬೇಯಿಸಿಕೊಳ್ಳಲು ಸಾಧ್ಯ. ಹೀಗಾಗಿ ಅಂಬರೀಷ್‌ಗೇ ಷರತ್ತು ಹಾಕುವ ತೀರ್ಮಾನಕ್ಕೆ ಪಕ್ಷ ಬಂತೆಂದು ಉನ್ನತ ಮೂಲಗಳು ಹೇಳಿದವು.

ಕೇವಲ ಅಂಬರೀಷ್‌ಗೆ ಮಾತ್ರವಲ್ಲ, ಕೊನೆಯ ಕ್ಷಣದಲ್ಲಿ ಬಿಜೆಪಿ ಸೇರಲು ತೇಜಸ್ವಿನಿ ಗೌಡ ಮುಂದಾದರೂ ಪಕ್ಷ ಅವರಿಗೆ ಕೆಲ ಷರತ್ತು ಹಾಕುವ ಬಗ್ಗೆ ಈಗಾಗಲೇ ನಿರ್ಧರಿಸಲಾಗಿದೆ. ಒಟ್ಟಾರೆಯಾಗಿ ಕೇಸರಿ ಶಾಲು ಹೊದೆಯುವ ಅಂಬಿ ಮತ್ತು ತೇಜಸ್ವಿನಿಯ ಕನಸು ನನಸಾಗುವಂತೆ ಕಾಣುತ್ತಿಲ್ಲ.

ಅಂಬರೀಷ್ ಕೈಗೆ ಕಮಲವಿಲ್ಲ!

ಹೌದು, ಬಿಜೆಪಿ ಸೇರುವ ಅಂಬರೀಷ್ ಆಸೆ ಕೆಸರುಪಾಲಾಗಿದೆ.

ಅಂಬರೀಷ್‌ರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಕೈಬಿಡಬೇಕೆಂಬ ತೀರ್ಮಾನವನ್ನು ವೆಂಕಯ್ಯನಾಯ್ಡು ಸಮ್ಮುಖದಲ್ಲಿ ಬುಧವಾರ ನಡೆದ ಬಿಜೆಪಿಯ ಉನ್ನತಮಟ್ಟದ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆಯಂತೆ.



ಕಾಂಗ್ರೆಸ್‌ನಲ್ಲಿ ಅಸಮಾಧಾನಗೊಂಡಿರುವ ಅಂಬರೀಷ್‌ರನ್ನು ಸೇರಿಸಿಕೊಂಡು ಮಂಡ್ಯದಲ್ಲಿ ಪಕ್ಷಕ್ಕೆ ನೆಲೆ ಕಲ್ಪಿಸುವ ಪ್ಲಾನ್‌ಅನ್ನು ಇದುವರೆಗೂ ಬಿಜೆಪಿ ಹೊಂದಿತ್ತು. ವಿಧಾನಸಭಾ ಚುನಾವಣೆಗೂ ಮುನ್ನವೇ ಅಂಬರೀಷ್‌ಗೆ ಬಿಜೆಪಿ ನಾಯಕರು ಗಾಳ ಹಾಕಿದ್ದರು. ಆಗ 'ನನಗೆ ಆಗುವಂತಹ ದೊಡ್ಡ ಚೆಡ್ಡಿ ನಿಮ್ಮಲ್ಲಿದೆಯೇ?' ಎಂದು ಚೆಡ್ಡಿ ನಾಯಕರಿಗೆ ನೀರಿಳಿಸಿ ಕಳುಹಿಸಿದ್ದ ಅಂಬರೀಷ್ ಇತ್ತೀಚೆಗೆ ಬಿಜೆಪಿ ಬಗ್ಗೆ ಒಂದಿಷ್ಟು ಮೆದುವಾಗಿದ್ದರು. ಹೀಗಾಗಿ ಮಾತುಕತೆಗಳು ಕದ್ದು-ಮುಚ್ಚಿ ಕೊನೆಗೆ ಬಹಿರಂಗವಾಗಿ ನಡೆದಿದ್ದವು.

ಈ ಸಂದರ್ಭದಲ್ಲಿ ಅಂಬರೀಷ್ ಬಿಜೆಪಿಗೆ ಕೆಲ ಷರತ್ತುಗಳನ್ನು ಹಾಕಿದ್ದರು. "ನನ್ನನ್ನು ಎಂಎಲ್‌ಸಿ ಮಾಡಿ ಸಚಿವ ಸ್ಥಾನ ನೀಡಬೇಕು'' ಎಂದು ಹಠ ಹಿಡಿದಿದ್ದರು. ಜೊತೆಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ತಮ್ಮ ಮೇಲೆ ಒತ್ತಡ ಹೇರಬಾರದು ಎಂದಿದ್ದರು. ಈ ಬಗ್ಗೆ ಬುಧವಾರ ಚರ್ಚಿಸಿದ ಬಿಜೆಪಿ ನಾಯಕರು ಅಂಬಿ ಷರತ್ತನ್ನು ಒಪ್ಪಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದೇ ಹೆಚ್ಚು ಲಾಭ ಎಂಬ ಲೆಕ್ಕಾಚಾರಕ್ಕೆ ಬಂದಿದ್ದಾರಂತೆ.

ಜೊತೆಗೆ ಅಂಬಿ ಬಿಜೆಪಿ ಸೇರಿಕೊಳ್ಳಲು ತುದಿಗಾಲಲ್ಲಿ ನಿಂತರೆ ಅವರಿಗೇ ಷರತ್ತು ವಿಧಿಸಲು ತೀರ್ಮಾನಿಸಲಾಗಿದೆ. ಈ ಷರತ್ತೆಂದರೆ: ಮಂಡ್ಯ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿದರೆ ಮಾತ್ರ ಮಂತ್ರಿ ಮಾಡಲಾಗುವುದು. ಇಲ್ಲವೇ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯಬೇಕು.

ಆದರೆ ಅಂಬಿ ತಾನು ಸ್ಪರ್ಧಿಸಿದರೆ ಮಂಡ್ಯ ಕ್ಷೇತ್ರದಿಂದ ಮಾತ್ರ ಎಂದು ಸ್ಪಷ್ಟಪಡಿಸಿದ್ದಾರೆ. ಯಾಕೆಂದರೆ ಮಂಡ್ಯದಿಂದ ಇನ್ಯಾರನ್ನೋ ಗೆಲ್ಲಿಸುತ್ತೇನೆ ಎಂಬ ಧೈರ್ಯ ಅವರಿಗಿಲ್ಲ. ಇನ್ನು ಬೆಂಗಳೂರು ಉತ್ತರ ಕ್ಷೇತ್ರದಿಂದ ತಾನು ಸ್ಪರ್ಧಿಸಿ ಗೆಲ್ಲುವುದೂ ದೂರದ ಮಾತು ಎಂಬುದು ಅಂಬಿಗೆ ಗೊತ್ತು. ಹೀಗಾಗಿ ಬಿಜೆಪಿ ಹಾಕಿರುವ ಎರಡು ಷರತ್ತುಗಳನ್ನೂ ಒಪ್ಪಿಕೊಳ್ಳುವುದು ಅಂಬಿಗೆ ಕಷ್ಟ. ಒಟ್ಟಾರೆ ಬಿಜೆಪಿ ಬಾಗಿಲು ಅವರಿಗೆ ಮುಚ್ಚಿದಂತೆ ಎಂದು ಅಂಬಿ ಮಾತನಾಡಿಕೊಳ್ಳುತ್ತಿದ್ದಾರೆ.


ಈಗ ಅಂಬಿಗೆ ಉಳಿದಿರುವುದು ಎರಡೆ. ಒಂದು ಕಾಂಗ್ರೆಸ್‌ನಲ್ಲಿಯೇ ಉಳಿಯುವುದು, ಜೆಡಿಎಸ್‌ನತ್ತ ಹೆಜ್ಜೆ ಹಾಕುವುದು. ಈ ಕವಲುಗಳಲ್ಲಿ ಅಂಬಿ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಸೂಜಿಮಲ್ಲಿಗೆ ಸೋನಿಯಾ

ಪಾರ್ವತೀಶ

ಸೋನಿಯಾರ ಆಗಿನ ಮತ್ತು ಈಗಿನ ಬದುಕಿನ ಅನೇಕ ವಿವರಗಳು ಇಲ್ಲಿವೆ. 1991 ರಲ್ಲಿ ಪತಿ ರಾಜೀವ್ ಸಾವನ್ನು ಕಣ್ಣಾರೆ ಕಂಡು ಅಪಾರ ನೋವನುಭವಿಸಿ, ಕೊನೆಗೆ ತಾನೇ ನೇರವಾಗಿ ಕಾಂಗ್ರೆಸ್ ಪಕ್ಷದ ನಾಯಕಿಯಾಗಿ ಮುಂಚೂಣಿಗೆ ಬಂದ ಸೋನಿಯಾ ವ್ಯಕ್ತಿತ್ವ ವಿಶಿಷ್ಟವಾಗಿದೆ. ಆಕೆಯ ವೈಯಕ್ತಿಕ ಜೀವನದ ಅನೇಕ ವಿವರಗಳು ಭಾರತೀಯರಿಗೇ ಪೂರ್ತಿ ತಿಳಿದಿಲ್ಲ. ಆದರೂ ಜನ ಆಕೆಯ ಬಗ್ಗೆ ಅಭಿಮಾನ, ಪ್ರೀತಿ, ಗೌರವ ಬೆಳೆಸಿಕೊಂಡಿದ್ದಾರೆ. ಇದು ಕಾಂಗ್ರೆಸ್ ಪಕ್ಷದವರ "ಅಭಿಮಾನ"ಕ್ಕಿಂತ ತುಸು ಬೇರೆಯದ್ದೇ ಆದ ಕಾಳಜಿ. ಸೋನಿಯಾ ಗಾಂಧಿ ಭಾರತ ಕಂಡ ಅತೀ



"ಅಯ್ಯೋ ದೇವರೆ.... ಇಂಡಿಯಾ ಇಲ್ಲಿದೆಯಾ, ಇಷ್ಟೊಂದು ದೂರ... ಜಗತ್ತಿನ ಇನ್ನೊಂದು ತುದಿಯಲ್ಲಿ...!!"

ವಿಶ್ವ ಭೂಪಟದಲ್ಲಿ ಭಾರತವನ್ನು ಅದೇ ಮೊದಲ ಬಾರಿಗೆ ಗಮನವಿಟ್ಟು ನೋಡಿದ ಇಟಲಿಯ ಯುವತಿಯೊಬ್ಬಳು ಹೊರಡಿಸಿದ ಉದ್ಗಾರ ಇದು.

-ಆಕೆ ಸೋನಿಯಾ













ಎಡ್ವಿಗೆ ಅಂಟೋನಿಯಾ ಲೆಬಿನಾ ಸೋನಿಯಾ ಮೈನೋ ಆಕೆಯ ಪೂರ್ತಿ ಹೆಸರು. ಆಗ ಆಕೆಗಿನ್ನೂ ಬರೀ ಇಪ್ಪತ್ತೊಂದು ವರ್ಷ. ಇಟಲಿಯ ಟೂರಿನ್ ಪ್ರಾಂತ್ಯದ ಒರ್ಬಸ್ಸಾನೋ ಎಂಬ ಕಿರು ಪಟ್ಟಣದಲ್ಲಿ ಹುಟ್ಟಿ ಬೆಳೆದಿದ್ದ ಸೋನಿಯಾ ಇಂಗ್ಲಿಷ್ ಕಲಿಯಲೆಂದು ಇಂಗ್ಲೆಂಡಿನ ಕೇಂಬ್ರಿಡ್ಜ್ ಯೂನಿವರ್ಸಿಟಿಗೆ 1965 ರ ಸುಮಾರಿಗೆ ಬಂದಿದ್ದಳು. ಅಲ್ಲಿ ಅದೇ ಕಾಲದಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಕಲಿಯಲು ಬಂದಿದ್ದ ರಾಜೀವ್ ಗಾಂಧಿಯ ಗೆಳತಿಯಾಗಿ, ಆಮೇಲೆ ಪ್ರೀತಿ ಬೆಳೆದು ಮದುವೆಯೂ ಆದಳು. ಹೀಗೆ 1968 ಫೆಬ್ರವರಿ ತಿಂಗಳ 28 ರಂದು ಭಾರತೀಯ ರಾಜಕೀಯ ಕುಟುಂಬವೊಂದರ ಸೊಸೆಯಾಗಿ ಇಲ್ಲಿಗೆ ಬಂದ ಸೋನಿಯಾ ಈಗ ಅಪ್ಪಟ ಭಾರತೀಯ ಹೆಣ್ಣುಮಗಳೇ ಆಗಿಹೋಗಿದ್ದಾಳೆ. 1984 ರಲ್ಲಿ ಅತ್ತೆ ಇಂದಿರಾ ಗಾಂಧಿಯ ಹತ್ಯೆ, 1991 ರಲ್ಲಿ ಪತಿ ರಾಜೀವ್ ಸಾವನ್ನು ಕಣ್ಣಾರೆ ಕಂಡು ಅಪಾರ ನೋವನುಭವಿಸಿ, ಕೊನೆಗೆ ತಾನೇ ನೇರವಾಗಿ ಕಾಂಗ್ರೆಸ್ ಪಕ್ಷದ ನಾಯಕಿಯಾಗಿ ಮುಂಚೂಣಿಗೆ ಬಂದ ಸೋನಿಯಾ ವ್ಯಕ್ತಿತ್ವ ವಿಶಿಷ್ಟವಾಗಿದೆ. ಆಕೆಯ ವೈಯಕ್ತಿಕ ಜೀವನದ ಅನೇಕ ವಿವರಗಳು ಭಾರತೀಯರಿಗೇ ಪೂರ್ತಿ ತಿಳಿದಿಲ್ಲ. ಆದರೂ ಜನ ಆಕೆಯ ಬಗ್ಗೆ ಅಭಿಮಾನ, ಪ್ರೀತಿ, ಗೌರವ ಬೆಳೆಸಿಕೊಂಡಿದ್ದಾರೆ. ಇದು ಕಾಂಗ್ರೆಸ್ ಪಕ್ಷದವರ ಅಭಿಮಾನಕ್ಕಿಂತ ತುಸು ಬೇರೆಯದ್ದೇ ಆದ ಕಾಳಜಿ.

ಸೋನಿಯಾ ಹುಟ್ಟಿದ್ದು 1946 ರಲ್ಲಿ, 2 ನೇ ವಿಶ್ವ ಮಹಾಯುದ್ಧ ಅದೇ ತಾನೇ ಮುಗಿದಿದ್ದು, ಭಾರತವು ಬ್ರಿಟಿಷರಿಂದ ಅರೆಬರೆ ಸ್ವಾತಂತ್ರ್ಯ ಪಡೆಯುವ ಘಳಿಗೆ ಹತ್ತಿರವಾಗುತ್ತಿದ್ದ ಸಂದರ್ಭ ಅದು. ಈ ಸೋನಿಯಾ ತಂದೆ ಸ್ಟೆಫಾನೋ ಮೈನೋ ಕೂಡಾ ಸೈನಿಕನಾಗಿ ಯುದ್ಧದಲ್ಲಿದ್ದವನೆ. ಆಶ್ಚರ್ಯ ಅಂದರೆ ಆತ ಹೋರಾಡಿದ್ದು ಇಟಲಿಯ ಫ್ಯಾಸಿಸ್ಟ್ ನಾಯಕ ಮೂಸಲೋನಿ ಪರ. ಹಿಟ್ಲರ್ ನಾಯಕತ್ವದಡಿ ಜರ್ಮನರು ಸಮಾಜವಾದಿ ರಷ್ಯಾದ ಮೇಲೆ ದಾಳಿ ನಡೆಸಿದಾಗ ಸೋನಿಯಾ ಅಪ್ಪನೂ ಜರ್ಮನರ ಪರವಾಗಿ ಕಾದಾಡಲು ಹೋಗಿದ್ದ. ಆ ಯುದ್ಧದಲ್ಲಿ ರಷ್ಯಾದ ಕೆಂಪು ಸೇನೆ ಜರ್ಮನ್ನರ ಸೊಂಟ ಮುರಿದು ಹಾಕಿತ್ತು. ಅಲ್ಲಿ ತಬ್ಬಲಿಯಾಗಿ ತಪ್ಪಿಸಿಕೊಂಡು ಅಲೆಯುತ್ತಿದ್ದ ಸ್ಟೆಫಾನೋ ಬಗ್ಗೆ ಕನಿಕರಗೊಂಡ ರಷ್ಯನ್ ಕುಟುಂಬವೊಂದು ಅವನಿಗೆ ಅನ್ನಾಹಾರ ನೀಡಿ ಕೆಲ ದಿನ ಆಶ್ರಯ ಕೊಟ್ಟು ರಕ್ಷಿಸಿತ್ತು. ಆಮೇಲೆ ಹೇಗೋ ಕಷ್ಟಪಟ್ಟು ಸ್ಟೆಫಾನೋ ಇಟಲಿಯ ತನ್ನೂರು ಒರ್ಬಸ್ಸಾನೋ ತಲುಪಿಕೊಂಡ. ತನ್ನ ಪ್ರಾಣ ಉಳಿಸಿದ ಆ ರಷ್ಯನ್ ಕುಟುಂಬದ ಬಗ್ಗೆ ಅವನಿಗೆಷ್ಟು ಕೃತಜ್ಞತೆ ಇತ್ತೆಂದರೆ ತನ್ನ ಮೂವರು ಹೆಣ್ಣುಮಕ್ಕಳಿಗೆ ಅನೂಷ್ಕಾ, ನಾದಿಯಾ, ಸೋನಿಯಾ ಎಂದು ಹೆಸರಿಟ್ಟ.

ಇವೆಲ್ಲಾ ರಷ್ಯನ್ ಹೆಸರುಗಳು!

ಇಟಲಿಯ ಸಾಧಾರಣ ಮಿಡಲ್ ಕ್ಲಾಸ್ ಕುಟುಂಬದವರದ್ದು. ಈ ಸ್ಟೆಫಾನೋ ಆಮೇಲೆ ನಿಧಾನವಾಗಿ ಚೇತರಿಸಿಕೊಂಡು, ಯುದ್ಧದ ನೋವುಗಳನ್ನು ಹಿಂದಿಕ್ಕಿ ಕಂಟ್ರಾಕ್ಟರ್ ಕೆಲಸ ಮಾಡುತ್ತಾ ಕೊನೆಗೆ construction ಕಂಪನಿಯೊಂದನ್ನು ಸ್ಥಾಪಿಸಿ ಅನುಕೂಲವಂತನಾದ. ಸೋನಿಯಾಗೆ ತಾನು ಶಿಕ್ಷಕಿಯಾಗಬೇಕೆಂಬ ಆಸೆ ಇತ್ತು. ಆದರೆ ಅಪ್ಪ "ಬೇಡ, ನೀನು ಕೇಂಬ್ರಿಡ್ಜ್‌ಗೆ ಹೋಗಿ ಒಳ್ಳೆ ಇಂಗ್ಲಿಷ್ ಕಲಿತು ದುಭಾಷಿಯಾಗಿ (interpreter) ನಿನ್ನ ಭವಿಷ್ಯ ರೂಪಿಸಿಕೊ" ಎಂದು ಒತ್ತಾಯಿಸಿ ಓದಲು ಕಳಿಸಿಕೊಟ್ಟ. ಈ ಸೋನಿಯಾ ಚಿಕ್ಕ ಹುಡುಗಿಯಾಗಿದ್ದಾಗ ಫುಟ್‌ಬಾಲ್ ಆಡುತ್ತಿದ್ದಳಂತೆ. ತನ್ನ ಮನೆ ಸುತ್ತಲಿನ ಹುಡುಗರು, ಹುಡುಗಿಯರನ್ನು ಗುಂಪುಗೂಡಿಸಿ ಫುಟ್‌ಬಾಲ್ ಆಡಲು ಕಾತರದಿಂದ ಓಡುತ್ತಿದ್ದಳಂತೆ. ಆದರೂ ಟೂರಿನ್‌ನ ಜನ ಈಗಲೂ ಹೇಳುವುದೇನೆಂದರೆ "ಅವರು ಮೂವರು ಸೋದರಿಯರ ಪೈಕಿ ಸೋನಿಯಾಳೇ ನಾಚಿಕೆಯ ಸ್ವಭಾವದವಳು" ಎಂದು ಸದಾ ಯಾವುದಾದರೂ ಪುಸ್ತಕ ಓದುತ್ತಾ ಅಂತರ್ಮುಖಿಯಂತಿರುತ್ತಿದ್ದ ಸೋನಿಯಾ ಈಗ ಭಾರತದಂತಹ ಬೃಹತ್ ದೇಶದ ಪ್ರಮುಖ ಲೀಡರ್ ಆಗಿರುವುದನ್ನು ನೋಡಿ ಅವರೆಲ್ಲಾ ಬೆರಗಾಗಿ ಸಂಭ್ರಮಿಸುತ್ತಾರೆ.

ತನ್ನ 18 ನೇ ವಯಸ್ಸಿನಲ್ಲಿ ಮನೆಯಿಂದ ದೂರವಾದ ಇಂಗ್ಲೆಂಡಿಗೆ ಕಾಲಿಟ್ಟ ಸೋನಿಯಾಗೆ ರಾಜೀವ್ ಗೆಳೆತನ ಸಿಕ್ಕಿತು. ಯಾರದ್ದೋ ಮನೆಯಲ್ಲಿ ಪೇಯಿಂಗ್ ಗೆಸ್ಟ್ ಆಗಿದ್ದುಕೊಂಡು ಓದುತ್ತಿದ್ದ ಸೋನಿಯಾ ಇಟಲಿಯ ಮನೆ, ಪರಿಸರ, ತಿನಿಸುಗಳ ನೆನಪಿಗೆ ಹತ್ತಿರವಿದ್ದ ವಾರ್ಸಿಟಿ ಎಂಬ ರೆಸ್ಟೋರೆಂಟ್‌ಗೆ ಆಗಾಗ್ಗೆ ಹೋಗುತ್ತಿದ್ದಳು. ಅದು ಕೇಂಬ್ರಿಡ್ಜ್ ಕ್ಯಾಂಪಸ್‌ನೊಳಗೇ ಇದ್ದ ಮಧ್ಯಮ ದರ್ಜೆ ಹೋಟೆಲ್. ಅಲ್ಲೇ ಜರ್ಮನ್ ಸ್ನೇಹಿತನೊಬ್ಬನ ಮೂಲಕ ಸೋನಿಯಾಗೆ ರಾಜೀವ್ ಪರಿಚಯವಾಯಿತು. ಅಷ್ಟೇ ಬೇಗನೆ ಅವರಿಬ್ಬರಿಗೂ ಪರಸ್ಪರ ಮನೋಭಾವದಲ್ಲೂ ಹದವಾದ ಹೊಂದಾಣಿಕೆಯೂ ಏರ್ಪಟ್ಟಿತು. ಅಷ್ಟರಲ್ಲಿ ಇಂದಿರಾ ಗಾಂಧಿ ಭಾರತದ ಪ್ರಧಾನಿಯಾಗಿದ್ದರು. ರಾಜೀವ್ ದೊಡ್ಡ ದೇಶದ ಪ್ರಧಾನಿಯೊಬ್ಬರ ಮಗ. ದೊಡ್ಡ ಕುಟುಂಬದ ಹಿನ್ನೆಲೆಯವನು. ಆದರೆ ತಮ್ಮದು ಇಟಲಿಯ ಸಾಧಾರಣ ಮನೆತನವೆಂಬ ಅಳುಕು ಸೋನಿಯಾಗಿತ್ತಾದರೂ ರಾಜೀವ್ ಗಾಂಧಿ ತನ್ನ ಅತೀ ಸರಳ ವ್ಯಕ್ತಿತ್ವದಿಂದ ಆಕೆಯ ಹಿಂಜರಿಕೆ ದೂರ ಮಾಡಿದ್ದ. ಸೋನಿಯಾ-ರಾಜೀವ್ ಪ್ರೀತಿಸುವುದು ಖರೆ ಎಂದಾಯಿತು. ಅಂತ ಒಂದು ಲವಲವಿಕೆಯ ಖುಷಿಯ ದಿನಗಳಲ್ಲೇ ಸೋನಿಯಾ ತನ್ನ ಗೆಳತಿಯರ ಜೊತೆ ಕುಳಿತು ವಿಶ್ವಭೂಪಟದಲ್ಲಿ ಅವಿತಿದ್ದ ಭಾರತವನ್ನು ನೋಡಿದ್ದಳು. 'ಅಯ್ಯೋ ದೇವರೆ ಇಷ್ಟು ದೂರಾನಾ' ಎಂದು ಬೆರಗಾಗಿದ್ದಳು. ಅವತ್ತಿನ ಸೋನಿಯಾಗೆ ಇಂಡಿಯಾ ಅಂದರೆ ಯಾವ ಭೀತಿಯ ಕಲ್ಪನೆಯಿತ್ತಂತೆ ಗೊತ್ತಾ?

ಬರೀ ಹಾವುಗಳೇ ತುಂಬಿರುವ ದೇಶ ಎಂದು!

ಅದರಲ್ಲಿ ಸುಳ್ಳೇನಿದೆ ಹೇಳಿ, ಈಗ ಬರೀ ಹಾವುಗಳೇಕೆ ಕೋಮುವಾದಿ ವಿಷಸರ್ಪಗಳೇ ದೇಶದ ತುಂಬಾ ಅಡ್ಡಾಡುತ್ತಿವೆಯಲ್ಲ, ಆದರೂನು ಅದೇ ಸೋನಿಯಾ ಈ ವಿಷಸರ್ಪಗಳಿಗೆ ಹೆದರದೆ ಈಗ ಚುನಾವಣೆಯ ಹೋರಾಟಕ್ಕಿಳಿದಿದ್ದಾಳಲ್ಲ!

ಸೋನಿಯಾ-ಇಂದಿರಾ ಗಾಂಧಿಯ ಮೊಟ್ಟಮೊದಲ ಭೇಟಿ ನಡೆದದ್ದು ಲಂಡನ್‌ನಲ್ಲಿ. ಅವತ್ತು ರಾಜೀವ್ ಸೋನಿಯಾಗೆ ಬಗೆಬಗೆಯ ರೀತಿಯಲ್ಲಿ ಧೈರ್ಯ ತುಂಬಿ ಒಪ್ಪಿಸಿ ಕರೆತಂದರೆ ಅಂಜುಬುರುಕಿ ಸೋನಿಯಾ ಲಂಡನ್‌ತನಕ ಬಂದಿದ್ದವಳು ಇಂದಿರಾ ಎದುರು ಬರದೆ ಕೇಂಬ್ರಿಡ್ಜ್‌ಗೆ ಮತ್ತೆ ಓಡಿದ್ದಳು. ಆದರೆ ರಾಜೀವ್ ಹಠ ಮಾಡಿ ಮಾರನೇ ದಿನ ಮತ್ತೆ ಕರೆತಂದು ಪ್ರಧಾನಿಯಾಗಿದ್ದ ತನ್ನಮ್ಮನ ಎದುರು ನಿಲ್ಲಿಸಿಬಿಟ್ಟಿದ್ದ. ಆ ದಿನವನ್ನು ನೆನೆದುಕೊಳ್ಳುವ ಸೋನಿಯಾ "ಅವರು (ಇಂದಿರಾ ಗಾಂಧಿ) ನನ್ನ ಓದು, ಆಸಕ್ತಿ, ಅಭಿರುಚಿಗಳ ಬಗ್ಗೆ ವಿಚಾರಿಸಿದರು. ಮೃದುದನಿಯಲ್ಲಿ ನಕ್ಕು ಮಾತಾಡಿ ನನ್ನಲ್ಲಿದ್ದ ಉದ್ವಿಗ್ನತೆ ಹೋಗಲಾಡಿಸಿ ನಿರಾಳತೆ ಮೂಡಿಸಿದರು" ಎಂದಿದ್ದಾಳೆ. ಅದೇ ದಿನ ಸೋನಿಯಾ ಬೆರಗಾಗಿ ಕದಲಿಹೋಗುವಂಥ ಚಿಕ್ಕ ಘಟನೆಯೊಂದು ನಡೆಯಿತು. ಸೋನಿಯಾ ಹಾಕಿಕೊಂಡಿದ್ದ ಹೈಹೀಲ್ಡ್ ಚಪ್ಪಲಿಯ ಪಟ್ಟಿ ಅಕಸ್ಮಾತಾಗಿ ಕಿತ್ತುಹೋದಾಗ ಇಂದಿರಾ ತಾನೇ ಚಪ್ಪಲಿ ಕೈಗೆ ತೆಗೆದುಕೊಂಡು ಪಿನ್ ಹಾಕಿ ಸರಿ ಮಾಡಿಕೊಟ್ಟರಂತೆ.

"ನೀನಿನ್ನೂ ಎಳೆಯುವಳು ಜೊತೆಗೆ ಪ್ರೇಮಪಾಶದಲ್ಲಿ ಸಿಲುಕಿದ್ದೀಯ. ಹಾಗಾಗಿ ಗ್ಯಾಬರಿ, ಉದ್ವಿಗ್ನತೆ ಇರೋದು ಸಹಜ" ಅಂತಲೂ ಇಂದಿರಾಗಾಂಧಿ ಸಮಾಧಾನ ಮಾಡಿದ್ದರಂತೆ.

"ನನ್ನ ಅಮ್ಮ ಇದ್ದಿದ್ದರೆ ಹೇಗೋ ಇಂದಿರಾನೂ ಅವತ್ತು ಹಾಗೇ ವರ್ತಿಸಿದರು" ಅನ್ನಿಸಿಬಿಟ್ಟಿತು ಸೋನಿಯಾಗೆ. ಅತ್ತೆ-ಸೊಸೆ ನಡುವೆ ಸುಮಧುರ ಬಾಂಧವ್ಯವೊಂದು ಹೀಗೆ ಶುರುವಾಯಿತು. ಸೋನಿಯಾ ತನ್ನ ಓದು ಮುಗಿಸಿ ಇಟಲಿಗೆ ಮರಳಿದರೆ ರಾಜೀವ್ ಇಂಡಿಯಾಗೆ ಬಂದು ಪೈಲಟ್ ಆದ. ಇಬ್ಬರೂ ಮದುವೆಯಾಗುವ ನಿರ್ಧಾರಕ್ಕೆ ಬಂದಿದ್ದರು. ರಾಜೀವ್ ಒಮ್ಮೆ ಇಟಲಿಗೂ ಹೋಗಿ ಸೋನಿಯಾ ಅಪ್ಪನನ್ನು ಮಾತಾಡಿಸಿ ಬಂದ. ಆಗ ಸ್ಟೆಫಾನೋ ಮಗಳನ್ನು ಕರೆದು "ಚೆನ್ನಾಗಿ ಯೋಚಿಸು, ಜೀವನ ಸಂಕೀರ್ಣ ಮಾಡಿಕೋಬೇಡ, ಯಾವುದಕ್ಕೂ ಒಂದು ಸಾರಿ ಇಂಡಿಯಾಗೆ ಹೋಗಿ ಕೆಲದಿನ ಇದ್ದು ಬಾ ಆಮೇಲೆ ನಿನ್ನದೇ ತೀರ್ಮಾನ" ಅಂದಿದ್ದ. ಅದರಂತೆ 1968 ರಲ್ಲಿ ಸೋನಿಯಾ ಭಾರತಕ್ಕೆ ಮೊದಲ ಬಾರಿಗೆ ಬಂದಾಗ ಏರ್‌ಪೋರ್ಟ್‌ನಲ್ಲಿ ರಾಜೀವ್, ಸಂಜಯ್ ಗಾಂಧಿ ಮತ್ತು ಅಮಿತಾಭ್ ಬಚ್ಚನ್ ಕಾದಿದ್ದು ರಿಸೀವ್ ಮಾಡಿಕೊಂಡರು. ಇಲ್ಲಿದ್ದಷ್ಟು ದಿನ ಸೋನಿಯಾ ಅಮಿತಾಭ್‌ನ ಅಪ್ಪ ಹರಿವಂಶರಾಯ್ ಬಚ್ಚನ್ ಮನೇಲಿ ಅತಿಥಿಯಾಗಿ ವಾಸವಿದ್ದಳು. ಆ ನಂತರ ಅವರ ಮದುವೆಗೆ ತಡವಾಗಲಿಲ್ಲ. ರಾಜೀವ್ ಜೊತೆ ಮದುವೆಯಾಗಿ ಇಂಡಿಯಾದಲ್ಲೇ ಬದುಕುವ ತೀರ್ಮಾನ ಮಾಡಿ ಸೋನಿಯಾ ಇಟಲಿಯಿಂದ ಹೊರಟ ದಿನ ಅವಳಪ್ಪ ಸ್ಟೆಫಾನೊ ಒಂದು ಕವರ್ ಕೈಗಿತ್ತನಂತೆ.

ಅದರಲ್ಲಿ ಸೋನಿಯಾಳ ರಿಟರ್ನ್ ಏರ್ ಟಿಕೆಟ್ ಇತ್ತು!

ಅಂದರೆ "ನೀನು ಅಲ್ಲಿರಲಾರೆ, ಹೇಗೂ ತಕ್ಷಣ ವಾಪಸ್ ಬಂದೇಬರುತ್ತಿ. ಅದಕ್ಕೆ ಈ ವಿಮಾನದ ರಿಟರ್ನ್ ಟಿಕೆಟ್ ಇಟ್ಟುಕೊಂಡಿರು" ಎಂಬರ್ಥದ ಮಾತದು. ಸೋನಿಯಾ ಮದುವೆಗೆ ಅವರಪ್ಪ ಬರಲೂ ಇಲ್ಲ. ಆಕೆಯ ತಾಯಿ, ಸೋದರಿಯರು, ಕೆಲ ಹತ್ತಿರದ ಬಂಧುಗಳು ಬಂದರೆ ಇತ್ತ ಪ್ರಧಾನಿ ಇಂದಿರಾ ಗಾಂಧಿಯ ನಂ. 10 ಸಫ್ದರ್‌ಜಂಗ್ ರೋಡಿನ ಮನೆಗೆ ಮದುವೆಗೆಂದು ಹಾಜರಿದ್ದವರು ಬೆರಳೆಣಿಕೆಯಷ್ಟು ಅತಿಥಿಗಳು ಮಾತ್ರ.

▶▶▶


ಕಾಂಗ್ರೆಸ್ ಎಷ್ಟು ಜನಪರ?

[illegible]

ಸೋನಿಯಾ ವಿವೇಕಗಳು

ಸೋನಿಯಾಗ ಒಂದಿ, ಇಟಾಲಿಯನ್ ಇಂಗ್ಲಿಷ್ [illegible] ಸ್ಪ್ಯಾನಿಶ್ ಮತ್ತು ಫ್ರೆಂಚ್ - ಹೀಗೆ ಆರು ಭಾಷೆ ಗೊತ್ತು. [illegible] 'Rajiv, Rajivs world' ಎಂಬ ಎರಡು ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಅಲ್ಲದೆ 1922ರಿಂದ 1964ರ ತನಕ ನೆಹರು ಹಾಗೂ ಇಂದಿರಾ ಬರೆದುಕೊಂಡ ಪತ್ರಗಳನ್ನು ಸಂಕಲಿಸಿ 'Freedom and Daughter Two Alone, Two Together' [illegible]





ಸೋನಿಯಾ ಗಾಂಧಿ - ವಿಶಿಷ್ಟ ರಾಜಕಾರಣಿ!

...ನಿಯಾ ಗಾಂಧಿ ರಾಜಕೀಯ ...ಶಿಸಿರದಿದ್ದರೆ, ಸೂಕ್ತ ...ಯಕತ್ವವಿರದಿದ್ದ, ...ವಿಶ್ವಾಸವಿರದೆ ಕುಸಿದು ...ಳುವಂತಿದ್ದ ಬೃಹತ್ ಕಾಂಗ್ರೆಸ್ ...ರ್ಟಿಗೆ ಮತ್ತೆ ಜೀವ ...ಬಿರದಿದ್ದರೆ ಬಿಜೆಪಿಗಳು ಈ ...ಗಾಗಲೇ ಇಡೀ ಭಾರತವನ್ನು ... ಕಪಿಮುಷ್ಠಿಯಲ್ಲಿ ...ಕೊಂಡಿರುತ್ತಿದ್ದರು. ಬಹುಶಃ ...ಣಿ ಈ ಬಾರಿ ...ನಿಯಾಗಲು ಯಾವ ...ತಡೆಗಳೂ ಇರುತ್ತಿರಲಿಲ್ಲ.

...ೋನಿಯಾ ಗಾಂಧಿ ಭಾರತದ ಪ್ರಧಾನಿ ...ವುದಿಲ್ಲ, ಅದೇ ರೀತಿ ಅವರ ಕಡುವೈರಿ ಲಾಲ್‌ಕೃಷ್ಣ ...ಣಿಯೂ ಪ್ರಧಾನಿಯಾಗಲಾರ!!

...ಇವೆರಡು ವಾಸ್ತವ ಸಂಗತಿಗಳೇ ಆದರೂ ಒಂದು ...ವಂತೂ ಇದ್ದೇ ಇದೆ.

...ದು ಸೋನಿಯಾಗೆ ...ಯಾಗುವಷ್ಟು ಅರ್ಹತೆ ...ರ್ಯವಿದ್ದಾಗಲೂ ಆಕೆ ... ಕುರ್ಚಿ ಕಡೆಗೆ ಸಾಗಿ ...ಲು ಕಳೆದ ಬಾರಿ ...ಸಿದ್ದರು. ಈಗಲೂ ...ಸಿದ್ದಾರೆ. ಆದರೆ ಆ ...ಯಿರದ ಅಧ್ವಾಣಿಯ ... ಸಾಗಿ ಬರಲು ಪ್ರಧಾನಿ ...ಯೇ ನಿರಾಕರಿಸುತ್ತಿದೆ.



...ದು ಕೇವಲ ಇಬ್ಬರು ವ್ಯಕ್ತಿಗಳ ...ನ ಕದನ, ವೈರತ್ವಗಳಿಗೆ ...ಸಿದ್ದಲ್ಲ, ಇವರಿಬ್ಬರೂ ಪ್ರತಿನಿಧಿಸುತ್ತಿರುವ ಭಾರತದ ರಾಜಕೀಯ ತತ್ವಗಳ ಸಂಘರ್ಷ ಅದು.


...ೋನಿಯಾ ಗಾಂಧಿ ರಾಜಕೀಯ ಪ್ರವೇಶಿಸಿರದಿದ್ದರೆ, ...ನಾಯಕತ್ವವಿರದಿದ್ದ, ಆತ್ಮವಿಶ್ವಾಸವಿರದೆ ಕುಸಿದು ಬೀಳುವಂತಿದ್ದ ಬೃಹತ್ ಕಾಂಗ್ರೆಸ್ ಪಾರ್ಟಿಗೆ ಮತ್ತೆ ಜೀವ ತುಂಬಿರದಿದ್ದರೆ ಬಿಜೆಪಿಗಳು ಈ ವೇಳೆಗಾಗಲೇ ಇಡೀ ಭಾರತವನ್ನು ತಮ್ಮ ಕಪಿಮುಷ್ಠಿಯಲ್ಲಿ ಇರಿಸಿಕೊಂಡಿರುತ್ತಿದ್ದರು. ಬಹುಶಃ ಅಧ್ವಾಣಿ ಈ ಬಾರಿ ಪ್ರಧಾನಿಯಾಗಲು ಯಾವ ಅಡೆತಡೆಗಳೂ ಇರುತ್ತಿರಲಿಲ್ಲ.

ಇಟಲಿಯ ಸಾಧಾರಣ ಮಿಡಲ್ ಕ್ಲಾಸ್ ಕುಟುಂಬದಲ್ಲಿ ಹುಟ್ಟಿ ಬೆಳೆದ, ಇಂದಿರಾ ಗಾಂಧಿ ಕುಟುಂಬದ ಸೊಸೆಯಾಗಿ ಬಂದ ಸೋನಿಯಾ ಅನಿವಾರ್ಯವಾಗಿ ರಾಜಕೀಯಕ್ಕೆ ಬಂದವರು. ಕಳೆದ 10 ವರ್ಷಗಳಿಂದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಾರ್ಟಿಗೆ ಅಧ್ಯಕ್ಷೆಯಾಗಿರುವ ಸೋನಿಯಾಗಾಂಧಿಯಿಂದಾಗಿ ಕಾಂಗ್ರೆಸ್ ಪಕ್ಷವು ಆಂತರಿಕವಾಗಿಯೂ ಬದಲಾಗಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಗಿದೆ. ಅಷ್ಟೇ ಅಲ್ಲ, ಕೋಮುವಾದಿ ಬಿಜೆಪಿಯ ವಿರುದ್ಧ ತೊಡೆ ತಟ್ಟಿ ಹೋರಾಟಕ್ಕಿಳಿಯಲು ಬೇಕಾದ ಅಂತಸತ್ವ, ಅನಿವಾರ್ಯತೆಗಳನ್ನು ಗ್ರಹಿಸಿ ಮಿತ್ರಪಕ್ಷಗಳನ್ನು ಜೊತೆಗಿರಿಸಿಕೊಳ್ಳುತ್ತಾ ಮುಂದುವರೆಯುತ್ತಿದೆ.

ಇಂದಿರಾ ಗಾಂಧಿಗಿಂತಾ ಬೆಟರ್

ಯಾವ ಆಯಾಮದಿಂದ ನೋಡಿದರೂ ಇಂದಿರಾಗಾಂಧಿಗಿಂತಲೂ ಈಗ ಸೋನಿಯಾ ಗಾಂಧಿ ನಾಯಕತ್ವವೇ ಕಾಂಗ್ರೆಸ್‌ಗೆ ಹೆಚ್ಚು ಘನತೆ-ಗಾಂಭೀರ್ಯ ತಂದುಕೊಟ್ಟಿದೆ ಎನ್ನಬಹುದು. ಇಂದಿರಾಗಾಂಧಿಗೆ ದೇಶದ ಮೇಲೆ ಎಮರ್ಜೆನ್ಸಿ ಹೇರಿದ ಕಳಂಕವಿದೆ. ಭಟ್ಟಂಗಿಗಳ, ವಂಚಕ, ಭ್ರಷ್ಟರ ಗುಂಪು ಕಟ್ಟಿಕೊಂಡಿದ್ದಕ್ಕೆ ಸಾಕ್ಷಿಗಳಿವೆ. ಸ್ವಜನಪಕ್ಷಪಾತ (nepotism) ಇಂದಿರಾಗಿದ್ದ ದೊಡ್ಡ ದೌರ್ಬಲ್ಯ.

ಆದರೆ ಸೋನಿಯಾ ಭಿನ್ನ ವ್ಯಕ್ತಿ. ಪ್ರಧಾನಿಯಾಗುವ ಅವಕಾಶ ತಾನಾಗೇ ಒದಗಿ ಬಂದಾಗ 'ನನ್ನ ಅಂತರಾತ್ಮ ಬೇಡ ಎನ್ನುತ್ತಿದೆ' ಎಂದು ಹೇಳಿ ನಯವಾಗಿ ನಿರಾಕರಿಸಿದ್ದರು. ಮಗ ರಾಹುಲ್ ಗಾಂಧಿಯನ್ನು ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ತಂದು ಕೂರಿಸುವುದು ಸುಲಭವಿತ್ತಾದರೂ ಹಾಗೆ ಮಾಡದೆ 'ಮೊದಲು ದೇಶ ಸುತ್ತಿ ಬಾ, ಜನರನ್ನು ಅರ್ಥ ಮಾಡಿಕೊ' ಎಂದು ಸೂಚಿಸಿ ಪಕ್ಷದ ಕೆಳಹಂತದ ಕೆಲಸ ನೀಡಿದ್ದಾರೆ. ಕಳೆದ ಐದು ವರ್ಷಗಳ ಯುಪಿಎ ಸರ್ಕಾರ ಯಾವುದೇ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಕ್ಕಿಬಿದ್ದಿಲ್ಲ. ಮಿತ್ರ ಪಕ್ಷಗಳೊಂದಿಗಿನ ಸೋನಿಯಾ ವರ್ತನೆಯಂತೂ ಬಹಳ ಕುತೂಹಲಕಾರಿಯಾಗಿದೆ. 1998 ರಲ್ಲಿ ಸೋನಿಯಾ ಕಾಂಗ್ರೆಸ್ ನಾಯಕಿಯಾಗಿ ಮುಂಚೂಣಿಗೆ ಬಂದಾಗ ಗಲಾಟೆ ಮಾಡಿದವರಲ್ಲಿ ಶರದ್ ಪವಾರ್, ಪಿ.ಎ. ಸಂಗ್ಮಾ ಪ್ರಮುಖರು. ಮಮತಾ ಬ್ಯಾನರ್ಜಿ, ಲಾಲೂ, ಮುಲಾಯಂ, ಜಯಲಲಿತಾ, ದೇವೇಗೌಡ, ಕಮ್ಯೂನಿಸ್ಟರು, ಚಂದ್ರಬಾಬು ನಾಯ್ಡು...ಹೀಗೆ ಸೋನಿಯಾರನ್ನು ಟೀಕಿಸದಿದ್ದ ನಾಯಕರೇ ಇಲ್ಲ. ಆದಾಗ್ಯೂ ಈಗಲೂ ಇವರೊಂದಿಗೆಲ್ಲಾ ಸೋನಿಯಾ ಸ್ನೇಹ ಹಾಗೂ ವಿಶ್ವಾಸದಿಂದಲೇ ಇದ್ದಾರೆ. ಒಬ್ಬ ರಾಜಕಾರಣಿಯಾಗಿ ಸೋನಿಯಾ ಸಹನೆ ಕಳೆದುಕೊಂಡಿದ್ದನ್ನು ಯಾರೂ ಕಂಡಿಲ್ಲ. ಹಾಗಾಗಿಯೇ ಯುಪಿಎ ಮೈತ್ರಿಕೂಟದ ಸರ್ಕಾರ ನಿರಾತಂಕವಾಗಿ ಐದು ವರ್ಷ ಆಡಳಿತ ನಡೆಸಿತ್ತು. ಪಕ್ಷದೊಳಗೂ ಸಹ ಕೆಲ ಮಾನದಂಡಗಳನ್ನು ಜಾರಿಗೆ ತಂದಿರುವ ಸೋನಿಯಾ ಕಾಂಗ್ರೆಸ್ಸಿಗರಿಗೂ ಪ್ರಜಾ ಪ್ರಭುತ್ವದ ಪಾಠಗಳನ್ನು ಕಲಿಸುತ್ತಿದ್ದಾರೆ. ಉದಾಹರಣೆಗೆ ಸಿದ್ದರಾಮಯ್ಯ ತನಗೆ ಸೂಕ್ತ ಸ್ಥಾನಮಾನ ಸಿಗಲಿಲ್ಲವೆಂದು ಎಷ್ಟೇ ಮುನಿಸಿಕೊಂಡರೂ ಪಾರ್ಟಿ ಬಿಟ್ಟು ಹೋಗುತ್ತೇನೆಂದರೂ ಸೋನಿಯಾ ತಮ್ಮದೇ ಟೈಂ ತೆಗೆದುಕೊಳ್ಳುತ್ತಿದ್ದಾರೆ. 'ಮೊದಲು ಕೆಲಸ ಮಾಡಿ, ನಿಮ್ಮ ಸಾಮರ್ಥ್ಯ ತೋರಿಸಿ, ನಂತರ ಅಧಿಕಾರ ಎಂದು ತಣ್ಣಗೆ ಮೆಸೇಜ್ ನೀಡಿದ್ದಾರೆ. ತೇಜಸ್ವಿನಿಗೆ ಎಂಪಿ ಟಿಕೆಟ್ ತಪ್ಪಿಸಲು ಡಿ.ಕೆ. ಶಿವಕುಮಾರ್ ಏನೆಲ್ಲಾ ಪ್ರಯತ್ನಪಟ್ಟರೂ ಅವರಾಸೆ ಈಡೇರುತ್ತಿಲ್ಲ. 'ನಿಮ್ಮ ವೈಯಕ್ತಿಕ ಜಗಳ ನಮ್ಮ ತನಕ ತರಬೇಡಿ' ಎಂಬುದೇ ಹೈಕಮಾಂಡಿನ ನಿಲುವು. ಸೋನಿಯಾ ಕೊಟ್ಟ ಮಾತಿಗೆ ತಪ್ಪುವುದಿಲ್ಲ ಎಂಬುದು ಸಾಂಗ್ಲಿಯಾನ, ಮಂಜುನಾಥ ಕುನ್ನೂರು ಹಾಗು ಚಾಮರಾಜನಗರದ ಶಿವಣ್ಣರಿಗೆ ಟಿಕೆಟ್ ಕೊಡುತ್ತಿರುವುದೇ ಸಾಕ್ಷಿ.



ಈಗಿನ ಎಲೆಕ್ಷನ್‌ನಲ್ಲಿ ಮೈತ್ರಿಪಕ್ಷಗಳ ನಡುವೆ ಸ್ಥಾನ ಹೊಂದಾಣಿಕೆ ಬಗ್ಗೆ ಅನೇಕ ಜಗಳಗಳಿವೆ ನಿಜ. ಅವೆಲ್ಲವೂ ಬಲಾಬಲಕ್ಕೆ ಸಂಬಂಧಿಸಿದ ಜಗಳ. ಆದರೆ ಸೋನಿಯಾ ಅವಕಾಶವಾದಿ ಎಂದು ಯಾವ ಮಿತ್ರಪಕ್ಷಗಳು ಆರೋಪಿಸುತ್ತಿಲ್ಲ ಎಂಬುದು ಗಮನಾರ್ಹ.

ಈ ಹತ್ತು ವರ್ಷದಲ್ಲಿ ಪ್ರಬುದ್ಧ ರಾಜಕಾರಣಿಯಾಗಿ ಬೆಳೆದಿರುವ ಸೋನಿಯಾ ಗಾಂಧಿ ಕೋಮುವಾದಿ ಬಿಜೆಪಿಯ ವಿರುದ್ಧದ ರಾಜಕೀಯ ಶಕ್ತಿಯ ಮುಂಚೂಣಿ ನಾಯಕಿಯಾಗಿ ನಿಂತಿದ್ದಾರೆ.

ಭಾರತದ ಇವತ್ತಿನ ಕಷ್ಟಕರ, ಗೊಂದಲಮಯ ಹಾಗೂ ಅಪಾಯಕಾರಿ ರಾಜಕೀಯ ಪರಿಸ್ಥಿತಿಯ ಬಗ್ಗೆ ಸೋನಿಯಾ ಹೇಳುವುದೇನು ಗೊತ್ತೆ?

"ನಮ್ಮ ರಾಜಕೀಯ ಸಂಸ್ಕೃತಿ ಪುನರುಜ್ಜೀವನಗೊಳ್ಳಬೇಕಾದ ಸಮಯ ಪಕ್ವವಾಗಿದೆ ಎಂಬುದು ನನಗೆ ಮನದಟ್ಟಾಗಿದೆ. ನಾವು ಕಟ್ಟಬೇಕಿರುವ ಹೊಸ ಸಮಾಜವು ಅಂತಃಕರಣ ಹಾಗೂ ಸ್ಪರ್ಧಾತ್ಮಕತೆ, ಸಮಾನತೆ ಹಾಗೂ ಕೌಶಲವನ್ನು ಹೊಂದಿರಬೇಕು."

-ಇದು ಇಂಡಿಯಾ ಬಗೆಗಿನ ಸೋನಿಯಾ ಕಾಳಜಿ.

ಕೋಮುವಾದ, ದ್ವೇಷ, ಅತ್ಯಾಚಾರ, ಅನಾಚಾರಗಳನ್ನೇ ನಂಬುವ, ಅದನ್ನೇ ಆಚರಿಸುತ್ತಾ ಭಾರತೀಯರ ತಲೆಯ ಮೇಲೆ ಈ ನೀಚ ತತ್ವಗಳನ್ನೇ ಹೇರುತ್ತಿರುವ ವಿರೋಧ ಪಕ್ಷಗಳ ನಾಯಕರನ್ನು ಈ ಸೋನಿಯಾ ಜೊತೆ ಒಮ್ಮೆ ಹೋಲಿಸಿ ನೋಡಿ. ■

...ಮದುವೆ ದಿನ ಸೋನಿಯಾ ಉಟ್ಟಿದ್ದು ತಿಳಿ ಗುಲಾಬಿ ... ಕಾಟನ್ ಸೀರೆ. ಇಂದಿರಾ ಗಾಂಧಿ ತನ್ನ ಮದುವೆಯ... ಅದೇ ಸೀರೆ ಉಟ್ಟಿದ್ದರಂತೆ. ಆ ಸೀರೆಯ ವೈಶಿಷ್ಟ್ಯ ... ಗೊತ್ತೆ?

...ಹರ್‌ಲಾಲ್ ನೆಹರು ಬ್ರಿಟಿಷರ ಸೆರೆಮನೆಯಲ್ಲಿದ್ದಾಗ ... ತೆಗೆದಿದ್ದ ಹತ್ತಿಯ ನೂಲಿನಿಂದ ರೆಡಿ ಮಾಡಿದ್ದ ...ಗಿತ್ತು! ಇದರಲ್ಲಿನ ಸಾಂಕೇತಿಕ ವಿಷಯವೆಂದರೆ ... ಸೋನಿಯಾ ತಂದೆ ಮಗಳಿಗೆ ರಿಟರ್ನ್ ಟಿಕೆಟ್ ...ಯಾಗೆ ಬೇಳೊಟ್ಟಿದ್ದರೆ ಇತ್ತ ಇಂದಿರಾ ಕಾಟನ್ ...ಟ್ಟು ಭಾರತಕ್ಕೆ ಬರಮಾಡಿಕೊಂಡಿದ್ದರು.

...ದೆ ಸೋನಿಯಾ ಎಂದೂ ಆ ರಿಟರ್ನ್ ಟಿಕೆಟ್ ... ತನಗೆ ಮೊದಲ ಪ್ರೆಸೆಂಟೇಶನ್ ಆಗಿ ಸಿಕ್ಕ ಕಾಟನ್ ಸೀರೆಗಳನ್ನು ಬಳಸುವುದನ್ನು ಬಿಡಲೂ ಇಲ್ಲ.

ಆಕೆಯೀಗ ಅಚ್ಚ ಭಾರತೀಯ ನಾರಿ. ಈ ನೆಲದ ಹೆಣ್ಣುಮಗಳಾಗಿ ಹೋಗಿದ್ದಾಳೆ.

ಸೋನಿಯಾರ ಈಗಿನ ಬದುಕಿನ ಅನೇಕ ವಿವರಗಳು ಹೊರಜಗತ್ತಿಗೆ ಗೊತ್ತಿಲ್ಲ. ಅನಗತ್ಯವಾಗಿ ಪತ್ರಿಕಾ ಸಂದರ್ಶನ ನೀಡುವುದು, ಫೋಟೋ ತೆಗೆಸಿಕೊಳ್ಳುವುದು ಸೋನಿಯಾಗೆ ಅಲರ್ಜಿ. ಓದು... ನಿರಂತರ ಓದು ಆಕೆಯ ನೆಚ್ಚಿನ ಹವ್ಯಾಸ. ಜಗತ್ತಿನ ಖ್ಯಾತ ಜನರ ಬದುಕಿನ ಕತೆ ಓದುವುದು ಸೋನಿಯಾಗೆ ಇಷ್ಟವಂತೆ. ಸುಪ್ರಸಿದ್ಧ ಸಮಾಜಸೇವಕಿ ಹೆಲನ್ ಕೆಲರ್‌ಳ The story of my life' ಸೋನಿಯಾರ ಮೆಚ್ಚಿನ ಪುಸ್ತಕ. ಸೋನಿಯಾಗೆ ಈಗ 63 ರ ವಯಸ್ಸು. ಪ್ರತಿದಿನ ಬೆಳಗ್ಗೆ ವ್ಯಾಯಾಮ, ಮಿತಾಹಾರ ಸೇವನೆಯಿಂದಾಗಿ ಆಕೆ ಸದಾ ಲವಲವಿಕೆಯಿಂದ ಚುರುಕುಟನೆ ಓಡಾಡುತ್ತಿರುತ್ತಾರೆ. ದಾಲ್-ಅನ್ನ ಅಥವಾ ದಾಲ್-ರೋಟಿ ಅವರ ಮೆಚ್ಚಿನ ಆಹಾರ. ಪ್ರವಾಸದಲ್ಲಿರುವಾಗ ಸ್ಯಾಂಡ್‌ವಿಚ್ ಸಾಕೆನ್ನುತ್ತಾರಂತೆ. ಜೊತೆಗೆ ಯಾವುದೇ ಭಾರತೀಯ ಸಿಹಿ ತಿನಿಸಾದರೂ ಬೇಡ ಎನ್ನುವುದಿಲ್ಲ. ಉಡುಗೆ ತೊಡುಗೆಯಲ್ಲಿ ಸದಾ ಸರಳತೆ ಹಾಗೂ ಅಷ್ಟೇ ಅಚ್ಚುಕಟ್ಟುತನ ತೋರುವ ಸೋನಿಯಾ ತನ್ನ ಸೀರೆಗಳನ್ನು ಆರಿಸಿಕೊಳ್ಳುವುದು ದೆಹಲಿಯ ರಾಕೇಶ್ ಠಾಕೂರ್ ಹಾಗೂ ಮಾರ್ತಾಂಡ್ ಸಿಂಗ್ ಎಂಬುವರಿಂದ. ಆಕೆ ಭಾರತೀಯ ಶಾಸ್ತ್ರೀಯ ಸಂಗೀತ ಪ್ರೇಮಿ. [illegible] Art Restorationನಲ್ಲಿ [illegible] ಕೋರ್ಸ್ ಓದಿದ್ದಾರೆ. ಸಾರ್ವಜನಿಕವಾಗಿ ಎಂದೂ [illegible] ಆಗಿ [illegible] ಭಾಷೆಯಲ್ಲಿ ಮಾತನಾಡಿಲ್ಲ.

ಸೋನಿಯಾ ಗಾಂಧಿ ಭಾರತ [illegible] ■



ಬಿಜಾಪುರ: ಭಿನ್ನಮತವೇ ಬಿಜೆಪಿಗೆ ಮುಳ್ಳು


ಇಲ್ಲಿ ಈಗ ಕಳೆದ ಸಲದ ಸಾಧನೆ ಗೌಣ. ಈ ಸಲ ಇದು ಮೀಸಲು ಕ್ಷೇತ್ರವಾದ್ದರಿಂದ ಕ್ಷೇತ್ರ ಹೊಸ ಅಭ್ಯರ್ಥಿಗಳನ್ನು ಎದುರಿಸಬೇಕಿದೆ. ಚಿಕ್ಕೋಡಿ ಸಾಮಾನ್ಯ ಕ್ಷೇತ್ರವಾಗಿದ್ದರಿಂದ ಬಿಜೆಪಿ ಸಂಸದ ಬಿಜಾಪುರಕ್ಕೆ ಬಂದು ನಿಂತಿದ್ದಾರೆ.

ಮೀಸಲು ಕ್ಷೇತ್ರವಾದ ಕೂಡಲೇ ಇಲ್ಲಿ ನಿಲ್ಲುವ ಪ್ಲಾನು ಹಾಕಿದ್ದ ಜಿಗಜಿಣಗಿ ಅದಕ್ಕೆಂದೇ ಇಲ್ಲಿ ತನ್ನ ಸಂಬಂಧಿ ಗೋವಿಂದ ಕಾರಜೋಳ ಎಂಬ ನುಂಗಣ್ಣನನ್ನು ಜಿಲ್ಲಾ ಉಸ್ತುವಾರಿ ಸಚಿವನನ್ನಾಗಿ ಮಾಡಿ ತಾಲೀಮು ನಡೆಸಿದ್ದರು.

ಜಿಗಜಿಣಗಿ ಈ ಕ್ಷೇತ್ರಕ್ಕೆ ಹೊಸಬರೇನೂ ಅಲ್ಲ. ಹಿಂದೆ ಬೆಳ್ಳಳ್ಳಿ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿ ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್ ಸಂಪುಟಗಳಲ್ಲಿ ಮಂತ್ರಿಯಾಗಿದ್ದು ಕೆಲಸಕ್ಕಿಂತ ಮಾತನ್ನೇ ಬಂಡವಾಳ ಮಾಡಿಕೊಂಡಿದ್ದ. ಈತ ಜಾತಿಯಿಂದ ಎಡಗೈ ಗುಂಪಿಗೆ ಸೇರಿದಾತ. ಮಾದಿಗರ ಒಳಮೀಸಲಾತಿ ಹೋರಾಟಕ್ಕೆ ಬೆಂಬಲ ನೀಡದೇ ಹೋದಾತ. ಒಳ ಮೀಸಲಾತಿ ಆಯೋಗಕ್ಕೆ ಸಂಪೂರ್ಣ ಹಣಕಾಸಿನ ಬೆಂಬಲ ಒದಗಿಸಲಿಲ್ಲ, ಆದರೂ ಮಾದಿಗ ನಾಯಕನೆಂದೇ ಬಿಂಬಿಸಲ್ಪಟ್ಟಾತ. ಮಾದಿಗ ಹೋರಾಟಗಾರರು, ಜಿಗಜಿಣಗಿ ಬೆಂಬಲಕ್ಕೆ ನಿಂತಿದ್ದು ಆದರೆ ಒಂದೂವರೆ ಲಕ್ಷ ಮಾದಿಗರ ಬೆಂಬಲ ಯಾತಕ್ಕೂ ಸಾಲದು. ಇಲ್ಲಿ ಸಾಕಷ್ಟು ಸಂಖ್ಯೆ ಹೊಂದಿರುವ ಲಂಬಾಣಿಗರದೇ ಸಿಂಹಪಾಲು. ಇವರೂ ಬೆಂಬಲಕ್ಕೆ ನಿಂತರೆ ಜಿಗಜಿಣಗಿಗೆ ವರವೇನೋ?

ಲಂಬಾಣಿ ಮತಗಳಿಂದಲೇ ಗೆದ್ದು ವಿಧಾನ ಪರಿಷತ್ ಸದಸ್ಯನಾದ ಕಾಂಗ್ರೆಸ್ಸಿನ ಪ್ರಕಾಶ್ ರಾಥೋಡ್ ಲಂಬಾಣಿಗಳ ಒಲವು ಕಳೆದುಕೊಳ್ಳುತ್ತಿರುವುದು ಇನ್ನೊಬ್ಬ ಮಾಜಿ ಶಾಸಕ ಮನೋಹರ್ ಐನಾಪುರನೂ ಲಂಬಾಣಿಗಳ ವಿಶ್ವಾಸ ಗಳಿಸದಿರುವುದು ಕಾಂಗ್ರೆಸ್‌ಗೆ ತೊಡಕಾಗಬಹುದೇನೋ?

ಜಿಗಜಿಣಗಿಯ ಪ್ರಬಲ ವೈರಿ ಕಾಂಗ್ರೆಸ್‌ನ ಶಿವಾನಂದ ಪಾಟೀಲ್ ತಾನು ಬಾಗಲಕೋಟೆಗೆ ನಿಂತು ಇಲ್ಲಿ ತನ್ನ ಕ್ಯಾಂಡಿಡೇಟ್ ವಿಲಾಸ ರಾವ್ ಅಲಮೇಲಕರ್‌ಗೆ ಟಿಕೆಟ್ ಕೊಡಿಸುತ್ತಿದ್ದಾರೆ. ಅಲಮೇಲಕರ್ ಬಲಗೈ ಗುಂಪಿಗೆ ಸೇರಿದ ಚಲವಾದಿ. ಒಂದಿಷ್ಟು ಹೆಸರಿದೆ, ಆದರೆ ಜಿಗಜಿಣಗಿ ಎದುರು ಕಷ್ಟ.



ಜಿಗಜಿಣಗಿ

ಆದರೆ ಜಿಗಜಿಣಗಿಗೆ ಬಿಜಾಪುರ ಜಿಲ್ಲೆಯ ಬಿಜೆಪಿಯಲ್ಲೇ ಸಾಕಷ್ಟು ವಿರೋಧ ವಿದೆ. ಈ ಭಿನ್ನಮತ ಉಲ್ಬಣಗೊಂಡರೆ ಕಾಂಗ್ರೆಸ್ ಹಾದಿ ಸುಲಭ. ಒಂದು ಕಡೆ ಮಾಜಿ ಸಂಸದ ಬಸನಗೌಡ ಪಾಟೀಲ್‌ನ ಬಂಡಾಯ, ಇನ್ನೊಂದು ಕಡೆ ಜಿಲ್ಲಾಧ್ಯಕ್ಷ ವಿಠ್ಠಲ ಕಟಕದೊಂಡ, ಬಿಜಾಪುರ ಶಾಸಕರಾದ ಅಪ್ಪು ಪಟ್ಟಣಶೆಟ್ಟಿ, ಎಸ್.ಕೆ. ಬೆಳ್ಳುಬ್ಬಿಗಳೂ ಜಿಗಜಿಣಗಿಯನ್ನು ಒಳಗೊಳಗೆ ಮಟ್ಟಹಾಕಬೇಕೆನ್ನುವವರೇ. ಇಲ್ಲಿಯ ಬಿಜೆಪಿಗೆ ಶಾಸಕರ ವಿರೋಧದ ನಡುವೆಯೂ ಜಿಗಜಿಣಗಿ ತನ್ನ ಸಂಬಂಧಿ ಗೋವಿಂದ ಕಾರಜೋಳರನ್ನು ಜಿಲ್ಲಾ ಉಸ್ತುವಾರಿ ಮಂತ್ರಿ ಮಾಡಿದ್ದು ಸಹ ಜಿಗಜಿಣಗಿಗೆ ತೊಡಕಾಗಬಹುದು. ಭಟ್ಟಿ ಸಾರಾಯಿ ವ್ಯಾಪಾರಕ್ಕೆ ಒಂದಿಷ್ಟು ಅನುಕೂಲ ಮಾಡಿದ್ದು ಜಿಗಜಿಣಗಿಗೆ ಒಂದಿಷ್ಟು ಲಂಬಾಣಿಗರ ಮತ ತರಬಹುದು.

ಹೀಗೆ ಹಲವು ಪ್ಲಸ್ ಪಾಯಿಂಟ್‌ಗಳಿದ್ದರೂ ಜಿಗಜಿಣಗಿಗೆ ಪ್ರಬಲ ಸವಾಲು ಇರುವುದು ಗಾಣಿಗ ಕೋಮಿನ ಎಸ್.ಕೆ. ಬೆಳ್ಳುಬ್ಬಿ 'ಆಪರೇಷನ್ ಕಮಲ'ದ ನೆಪದಲ್ಲಿ ಸಂಭಾವಿತ ಎಸ್.ಕೆ. ಬೆಳ್ಳುಬ್ಬಿಯವರನ್ನು ಸಚಿವ ಸ್ಥಾನದಿಂದ ತೆಗೆದಾಗ ಬಿಜಾಪುರದಲ್ಲಿ ಭಾರೀ ಪ್ರತಿಭಟನೆಯೇ ನಡೆದಿತ್ತು. ಪ್ರಬಲವಾಗಿರುವ ಗಾಣಿಗ ಜನಾಂಗಕ್ಕೆ ಈ ಕುರಿತು ಆಕ್ರೋಶವಿದೆ. ಇದು ಖಂಡಿತ ಬಿಜೆಪಿಗೆ ಮುಳುವಾಗಲಿದೆ.

ಶಿವಾನಂದ್ ಪಾಟೀಲ್ ಪ್ರಭಾವದಿಂದ ಪಂಚಮಸಾಲಿಗಳು ಕಾಂಗ್ರೆಸ್ ಪರ ನಿಂತರೆ ಜಿಗಜಿಣಗಿಗೆ ಶಾಕ್ ಕೊಡಬಹುದು.

ಇಷ್ಟೆಲ್ಲ ಅವಕಾಶಗಳಿರುವಾಗ ಕಾಂಗ್ರೆಸ್ ಇನ್ನೂ ಕ್ಯಾಂಡಿಡೇಟ್ ಹುಡುಕಿಲ್ಲ. ಇಲ್ಲಿ ಜೆಡಿಎಸ್‌ಗೆ ಚಾನ್ಸ್ ಕಡಿಮೆ. ಕಾಂಗ್ರೆಸ್ಸಿಗರು ಸ್ಪೀಡ್ ಆಗಿ ತಂತ್ರ ಹೆಣೆದರೆ, ಬಿಜೆಪಿ ಭಿನ್ನಮತ ಉಲ್ಬಣಗೊಂಡರೆ ಬಿಜೆಪಿ ಇಲ್ಲಿ ಗೋವಿಂದಾ ಗೋವಿಂದಾ!

ಮೇಘರಾಜ್


ಬಾಗಲಕೋಟೆ: ಗದ್ದಿಗೌಡರ್‌ನ ಗದ್ದುಗೆ ಕುಸಿಯಲಿದೆಯಾ?

[illegible]



[illegible] ಇನ್ನೇನು ಬೇಕು? ಆದರಲ್ಲೂ ಇಲ್ಲಿ ಬಹುಸಂಖ್ಯಾತರಾಗಿರುವಾಗ ಪಂಚಮಸಾಲಿಗಳು [illegible]

ಸಂವಿಧಾನಕ್ಕೆ ಅಪಚಾರವೆಸಗಿದವರು



"ಎಲ್ಲಾ ಹಿಂದೂಗಳು ಒಂದೆಡೆ ನಿಂತು ಉಳಿದವರನ್ನು ಪಾಕಿಸ್ತಾನಕ್ಕೆ ಕಳುಹಿಸಿ... ಇದು ಕಮಲದ ಹಸ್ತ, ಚುನಾವಣೆಗಳ ಬಳಿಕ ಅವರ ಕೊರಳುಗಳನ್ನು ಕತ್ತರಿಸುತ್ತದೆ... ಹಿಂದೂಗಳ ವಿರುದ್ಧ ಯಾರಾದರೂ ಕೈ ಎತ್ತಿದರೆ ಕತ್ತರಿಸಿ ಹಾಕುತ್ತೇನೆಂದು ಭಗವದ್ಗೀತೆಯ ಮೇಲೆ ಆಣೆ ಮಾಡಿ ಹೇಳುತ್ತೇನೆ..." ಎಂದೆಲ್ಲಾ ತನ್ನ ಉರಿನಾಲಿಗೆಯಿಂದ ಕೆಂಡಕಾರಿದ್ದ ಬಿಜೆಪಿಯ ಫಿಲಿಬಿಟ್ ಲೋಕಸಭಾ ಅಭ್ಯರ್ಥಿ ವರುಣ್ ಗಾಂಧಿ ಬಗ್ಗೆ ಚುನಾವಣಾ ಆಯೋಗ ಕೊನೆಗೂ ಚೆನ್ನಾಗಿ ಉಗಿದಿದೆ. ಮೊದಮೊದಲು ವರುಣ್ "ನಾನು ಹಾಗೆ ಮಾತನಾಡಿಯೇ ಇಲ್ಲ, ಮಾಧ್ಯಮಗಳು ತನ್ನ ಇಮೇಜಿಗೆ ಧಕ್ಕೆ ತರುವುದಕ್ಕಾಗಿ ವಿಡಿಯೋ ಸಿಡಿಯನ್ನು ಕೃತಕವಾಗಿ ತಿರುಚಿವೆ" ಎಂದು ಹಾರಿಕೊಳ್ಳಲು ಪ್ರಯತ್ನಿಸಿದ. ಎಲ್ಲಿ ನ್ಯಾಯಾಲಯ ತನ್ನನ್ನು ಬಂಧಿಸಿ ಜೈಲಿಗಟ್ಟುತ್ತದೋ ಎಂಬ ಭಯದಿಂದ ನಿರೀಕ್ಷಣಾ ಜಾಮೀನು ಕೂಡ ಪಡೆದುಕೊಂಡಿದ್ದ. ಈಗ ಮುಖ್ಯ ಚುನಾವಣಾ ಆಯುಕ್ತ ಮತ್ತು ಇನ್ನಿಬ್ಬರು ಆಯುಕ್ತರಾದ ನವೀನ್ ಚಾವ್ಲಾ ಮತ್ತು ಎಸ್.ವೈ.ಖುರೇಷಿ ಮೂವರೂ ಸೇರಿ ಭಾಷಣದ ವಿಡಿಯೋ ಸಿ.ಡಿಯನ್ನು ಕೂಲಂಕಷವಾಗಿ ಪರೀಕ್ಷಿಸಿ ಆತನ ಹಾರಿಕೆಯ ವಾದಗಳನ್ನೆಲ್ಲಾ ತಿರಸ್ಕರಿಸಿ ಬಿಜೆಪಿಗೆ ಕಿವಿಮಾತು ಹೇಳಿದ್ದಾರೆ. ಅದು ಬಿಜೆಪಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾಗುವುದರಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದ್ದೇವೆ.

"ಚುನಾವಣಾ ಆಯೋಗ ವರುಣ್ ಭಾಷಣದ ಸಿಡಿಯನ್ನು ನೋಡಿದೆ. ಒಮ್ಮೆಯಲ್ಲ ಹಲವಾರು ಬಾರಿ ಮತ್ತೆ ಮತ್ತೆ ನೋಡಿದೆ. ಪ್ರತಿವಾದಿ (ವರುಣ್) ಹೇಳಿರುವಂತೆ ಸಿಡಿ ಫೋರ್ಜರಿ ಆಗಿಲ್ಲ, ಆ ಸಿಡಿಯ ಪ್ರತಿ ಮತ್ತು ಆಯೋಗದ ನೋಟೀಸನ್ನು ಅವರಿಗೀಗಾಗಲೇ ಕಳಿಸಿಕೊಟ್ಟಿದ್ದೇವೆ. ಈಗ ಆ ಸಿಡಿ ಕೃತಕವಾಗಿ ತಿರುಚಲ್ಪಟ್ಟಿದೆ ಎಂಬುದನ್ನು ಅಥವಾ ಅದು ಅಧಿಕೃತವಲ್ಲ ಎಂಬುದನ್ನು ಸಾಬೀತುಪಡಿಸುವ ಹೊಣೆಗಾರಿಕೆ ಅವರ ಮೇಲಿದೆ." "ಇಂಥ ಮಹಾಪಾತಕ ಕೃತ್ಯಗಳಲ್ಲಿ ತೊಡಗಿರುವವರಿಗೆ ಕಾನೂನಿನಡಿಯಲ್ಲಿ ಸಾಧ್ಯವಿರುವಷ್ಟು ಗರಿಷ್ಠ ಶಿಕ್ಷೆಯಾಗಬೇಕು. ಅವರ ಬಗ್ಗೆ ಮೃದುತ್ವ ಧೋರಣೆ ತಳೆದರೆ ಚುನಾವಣೆಗಳ ಪಾವಿತ್ರ್ಯವನ್ನು ಮಲಿನಗೊಳಿಸುವ ಅಂಥ ಭ್ರಷ್ಟ ಕೃತ್ಯಗಳೊಂದಿಗೆ ರಾಜಿಮಾಡಿಕೊಂಡದ್ದಕ್ಕೆ ಸರಿಸಮನಾಗುತ್ತದೆ." "ಪ್ರತಿವಾದಿ ಚುನಾವಣಾ ಅಭ್ಯರ್ಥಿಯಾಗುವುದಕ್ಕೆ ಅರ್ಹನಾಗಿಲ್ಲ ಏಕೆಂದರೆ ಪ್ರತಿಯೊಬ್ಬ ಅಭ್ಯರ್ಥಿಯೂ ಸಂವಿಧಾನದಡಿಯಲ್ಲಿ ನಾನು ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಳ್ಳುತ್ತೇನೆಂದು, ಭಾರತದ ಐಕ್ಯತೆ ಮತ್ತು ಸಾರ್ವಭೌಮತೆಯನ್ನು ಎತ್ತಿಹಿಡಿಯುತ್ತೇನೆಂದು ಪ್ರಮಾಣವಚನ ಸ್ವೀಕರಿಸಲೇಬೇಕು." "ಹೀಗಿದ್ದಾಗ್ಯೂ ಆಯೋಗಕ್ಕೂ ಕೆಲವು ಇತಿಮಿತಿಗಳಿವೆ. ಪ್ರತಿವಾದಿ ನ್ಯಾಯಾಲಯದಲ್ಲಿ ಕಾನೂನಿನ ಪ್ರಕಾರ ತಪ್ಪಿತಸ್ಥ ಎಂಬುದು ಸಾಬೀತಾಗದೇ ಅವರು ಚುನಾವಣೆಗೆ ನಿಲ್ಲದಂತೆ ತಡೆಯುವುದಕ್ಕೆ ಆಯೋಗಕ್ಕೆ ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ ವರುಣ್ ಗಾಂಧಿಯವರನ್ನು ಆಯೋಗವು ಬಲವಾಗಿ ಖಂಡಿಸುತ್ತದೆ."

"ಭಾರತೀಯ ಜನತಾ ಪಾರ್ಟಿ ವರುಣ್ ಅವರ ಭಾಷಣವನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿರುವುದರಿಂದ ಅವರನ್ನು ತಮ್ಮ ಪಕ್ಷದ ವತಿಯಿಂದ ಲೋಕಸಭಾ ಚುನಾವಣೆಗೆ ನಿಲ್ಲಿಸದಿರುವ ಕನಿಷ್ಠ ಕೆಲಸವನ್ನಾದರೂ ಅದು ಮಾಡಬೇಕು. ಈ ಚುನಾವಣೆಯಲ್ಲಿ ಬಿಜೆಪಿಯಾಗಲೀ ಅಥವಾ ಇನ್ಯಾವುದೇ ಪಕ್ಷವಾಗಲೀ ವರುಣ್ ಅವರನ್ನು ಬೆಂಬಲಿಸಿದರೆ ಅದು ಹಿಂಸೆಯನ್ನು ಪ್ರಚೋದಿಸುವ, ಭಾರತದ ವಿಭಿನ್ನ ಜನವರ್ಗಗಳ ನಾಗರಿಕರ ನಡುವೆ ವೈರತ್ವ, ದ್ವೇಷಗಳನ್ನು ಸೃಷ್ಟಿಸುವ, ಸಂವಿಧಾನದಲ್ಲಿ ಆಶಿಸಿರುವ ದೇಶದ ಸಾಮಾಜಿಕ, ಪ್ರಜಾತಾಂತ್ರಿಕ ಮತ್ತು ಬಹುಮುಖೀ ಸಂರಚನೆಯನ್ನು ಹಾಳುಮಾಡುವ ವರುಣ್ ಅವರ ಕ್ಷಮಿಸಲಾಗದ ಕೃತ್ಯಗಳನ್ನು ಬೆಂಬಲಿಸಿದಂತೇ ಆಗುತ್ತದೆ"

ಬಿಜೆಪಿ ನಾಯಕರಿಗೆ ಒಂದಿಷ್ಟಾದರೂ ಸೂಕ್ಷ್ಮತೆಯಿದ್ದಿದ್ದರೆ, ಈ ದೇಶದ ಸಂವಿಧಾನದ ಬಗ್ಗೆ ಕಿಂಚಿತ್ತಾದರೂ ಗೌರವ ಇದ್ದಿದ್ದರೆ ಚುನಾವಣಾ ಆಯೋಗದ ಸೂಚನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದರು. ಆಯೋಗ ಸೂಚಿಸಿದಂತೆ ವರುಣ್ ಗಾಂಧಿಗೆ ನೀಡಿರುವ ಪಕ್ಷದ ಟಿಕೆಟ್ ಅನ್ನು ವಾಪಾಸ್ಸು ಪಡೆದುಕೊಳ್ಳುತ್ತಿದ್ದರು. ಅಷ್ಟೇ ಏಕೆ ಸಂವಿಧಾನಕ್ಕೆ ಅಪಚಾರವೆಸಗಿದ ಆತನನ್ನು ಪಕ್ಷದಿಂದ ಉಚ್ಚಾಟಿಸುತ್ತಿದ್ದರು. ಆದರೆ, ಆಯೋಗ ಸೂಚನೆ ಕೊಟ್ಟ ಮೇಲೂ "ವರುಣ್ ಗಾಂಧಿಯೇ ಫಿಲಿಬಿಟ್ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ" ಎಂದು ಯಾವುದೇ ನಾಚಿಕೆ, ಮಾನ, ಮರ್ಯಾದೆಯಿಲ್ಲದೆ ಘೋಷಿಸಿದ್ದಾರೆ. ಇಂಥವರೇನಾದರೂ ಅಧಿಕಾರಕ್ಕೆ ಬಂದರೆ ಈ ದೇಶಕ್ಕೆ ಎಂಥ ಗತಿ ಬರಬಹುದು?

ಚುನಾವಣಾ ಭ್ರಷ್ಟಾಚಾರ ಬಿಜೆಪಿಯ ಕರ್ನಾಟಕವೇ ನಂ. 1

ಮತ್ತೊಂದು ಲೋಕಸಭಾ ಚುನಾವಣೆ ಬಂದಿ[...] ಅಭ್ಯರ್ಥಿಗಳು ಹಣದ ಚೀಲಗಳನ್ನು ಜೋಡಿಸಿಕೊಳ್ಳತೊ[...] ಗಿದ್ದರೆ, ಪಕ್ಷಗಳ ಕಾರ್ಯಕರ್ತರು ಜೊಲ್ಲು ಸುರಿಸು[...] ನಿಂತಿದ್ದಾರೆ. ಮತದಾರರೂ ತಮ್ಮ ಓಟಿನ ರೇಟು [...] ಸಲ ಎಷ್ಟಿರಬಹುದೆಂದು ಲೆಕ್ಕಾಚಾರದಲ್ಲಿದ್ದಾರೆ. ದೆಹ[...] ಮೂಲದ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ ಎಂ[...] ಸಂಸ್ಥೆಯು ಈ ಕುರಿತು ದೇಶದಲ್ಲಿಯೇ ಮೊಟ್ಟಮೊದ[...] ಬಾರಿಗೆ ಅಧ್ಯಯನವೊಂದನ್ನು ನಡೆಸಿದೆ. ದೇಶದ 1[...] ರಾಜ್ಯಗಳ ಸುಮಾರು 41 ಸಾವಿರ ಮತದಾರರನ್ನು [...] ಸಮೀಕ್ಷೆಗೊಳಪಡಿಸಿದೆ. ಅದರಲ್ಲಿ ನಗರಗಳ, ಹಳ್ಳಿಗ[...] ಬಡತನ ರೇಖೆಗಿಂತ ಕೆಳಗಿನವರ, ಮಧ್ಯಮ ವರ್ಗದವ[...] ಉತ್ತಮ ಶಿಕ್ಷಣ ಪಡೆದವರ, ಅನಕ್ಷರಸ್ಥರ ಹೀಗೆ ಹಲ[...] ಸ್ತರಗಳ ಮತದಾರರಿದ್ದಾರೆ. ಅಂತಿಮವಾಗಿ ಅದರ ಅಧ್ಯಯ[...] ವರದಿಯ ಪ್ರಕಾರ ದೇಶದಲ್ಲಿ ಅತಿಹೆಚ್ಚು ಚುನಾವಣಾ ಭ್ರಷ್ಟಾಚಾರ ನಡೆಯುತ್ತಿರೋದು ನಮ್ಮ ಕರ್ನಾಟಕದಲ್ಲೇ (47%) ನಂತರದ ಸ್ಥಾನಗಳನ್ನು ಕ್ರಮವಾಗಿ ತಮಿಳುನಾಡು (34%), ಮಧ್ಯಪ್ರದೇಶ (33%), ಆಂಧ್ರಪ್ರದೇಶ ಹಾಗೂ ಬಿಹಾರ (ತಲಾ 31%) ಗಳು ಪಡೆದಿವೆ. ಬಡತ[...] ರೇಖೆಗಿಂತ ಕೆಳಗಿರುವ ಮತದಾರರು (BPL) ಆಂಧ್ರ[...] ಶೇ. 94%, ತಮಿಳುನಾಡಿನ 78%, ಕರ್ನಾಟಕ[...] ಛತ್ತೀಸ್‌ಗಢ್‌ಗಳ 73% ಮತದಾರರು ಹಣ[...] ಪಡೆದಿರುವುದು ಸಮೀಕ್ಷೆಯಲ್ಲಿ ವರದಿಯಾಗಿದೆ.

CMS ಅಧ್ಯಯನದ ಮತ್ತೊಂದು ಅಂಶವೆಂದ[...] ಈ ಚುನಾವಣಾ ಭ್ರಷ್ಟಾಚಾರವೂ ಇತರರಿಗಿಂತಲೂ ಬಿಜೆ[...] ಮತ್ತದರ ಮಿತ್ರ ಪಕ್ಷಗಳ ಪ್ರಭಾವವಿರುವ ರಾಜ್ಯಗಳಲ್ಲಿಯೇ ಅಧಿಕವಾಗಿದೆ. ಜೈ ಶ್ರೀ ರಾಮ್!

ಕಳೆದ ಚುನಾವಣೆಯ ಹೊತ್ತಿಗೆ ಆಯೋಗದ ಅಧಿ[...] ಕಾರಿಗಳ ಕೈಗೆ ಬೈಛಾನ್ಸ್ ಸಿಕ್ಕಿಬಿದ್ದ ಹಣ 45 ಕೋಟಿ ರೂ.ಗಳು. CMS ನ ಎನ್. ಭಾಸ್ಕರ್‌ರಾವ್ ಹೇಳುವಂತೆ ಕಳೆದ ಸಲ ಕರ್ನಾಟಕದಲ್ಲಿ ಅಭ್ಯರ್ಥಿಗಳು ಚೆಲ್ಲಿದ ಒಟ್ಟು ಹಣ ಸರಿಸುಮಾರು 2500 ಕೋಟಿ ರೂಗಳು. ಅದರಲ್ಲಿ ಹೆಚ್ಚಿನ ಭಾಗ ಕಪ್ಪು ಹಣವೇ ಆಗಿತ್ತು!

ಪ್ರಜಾಪ್ರಭುತ್ವದ ಅವಮಾನವೇ ಆಗುತ್ತಿರುವುದೇನೋ ಎಂಬ ರೀತಿಯಲ್ಲಿ ನಡೆಯುತ್ತಿರುವ ಈ ಚುನಾವಣಾ ಭ್ರಷ್ಟಾಚಾರ ಎಲ್ಲಿಗೆ ಮುಟ್ಟಿದೆಯೆಂದರೆ, ಈ ಬಗೆಯ ಪ್ರಲೋಭನೆಗೆ ಜನರನ್ನು ನೂಕಿದ್ದು ರಾಜಕಾರಣಿಗಳೇ ಆದರೂ, ಇಂದು ಮತದಾರರೂ ಚುನಾವಣೆ ಬಂತೆಂದು ಯಾರಿಂದ ಎಷ್ಟು ಪಡೆಯಬೇಕೆಂಬ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಪ್ರತಿ ಐದು, ಮೂರು ವರ್ಷಗಳಿಗೊಮ್ಮೆ ಗೆದ್ದುಹೋದ ಖದೀಮರಿಂದ ಕೊನೆಗೆ ಏನೂ ಸಿಗದಿದ್ದರೂ ಚುನಾವಣೆ ಹೊತ್ತಿಗಾದರೂ ಸಿಕ್ಕಷ್ಟು ಸಿಗಲಿ ಎಂದು ಯೋಚಿಸುವಲ್ಲಿಗೆ ಮತದಾರ ನೈತಿಕವಾಗಿ ಕುಸಿದಿದ್ದಾನೆ.

ದೇಶದ ಎಲ್ಲಾ ಭ್ರಷ್ಟಾಚಾರಗಳಿಗೂ ಮೂಲವಿರು[...] ವುದು ಚುನಾವಣಾ ಭ್ರಷ್ಟಾಚಾರದಲ್ಲಿ ಎಂದು ಹಿಂದಿ[...] ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಹೇಳಿದ್ದರು. ಆಯೋಗದ ಹಾಲಿ ಆಯುಕ್ತ ಎನ್. ಗೋಪಾಲಸ್ವಾಮಿ[...] ಯವರ ಮಾತುಗಳೂ ಇಲ್ಲಿ ಉಲ್ಲೇಖನೀಯ. "ಒ[...] ಅಭ್ಯರ್ಥಿಯು ನಾವು ನಿಗದಿಪಡಿಸುವುದಕ್ಕಿಂತಲೂ ಹತ್ತು ಪಟ್ಟು ಹಣ ಚೆಲ್ಲುತ್ತಾನೆಂದರೆ, ಅದೇನೂ ಲೋಕ ಕಲ್ಯಾ[...] ರ್ಥವಾಗಿ ಅಲ್ಲ, ಬದಲಿಗೆ ಅವನಿಗೆ ಖಾತ್ರಿಯಿರುತ್ತದೆ ಅಧಿಕಾರ ಗಳಿಸಿದ ಮೇಲೆ ತಾನು ಹೂಡಿದ ಹಣದ ಹತ್ತು ಪಟ್ಟು ಗಳಿಸುತ್ತೇನೆ ಎಂದು. ಹಾಗಾಗಿಯೇ ಹಣ, ಹೆಂಡ, ಬಟ್ಟೆ ಹಂಚುವುದನ್ನೊಳಗೊಂಡಂತೆ, ಎಲ್ಲಾ ಬಗೆಯ ಮಿತಿಮೀರಿದ ಚುನಾವಣಾ ಖರ್ಚುಗಳನ್ನೂ ಸಂಪೂರ್ಣವಾಗಿ ತಡೆಹಿಡಿಯಬೇಕು."

ಅದರೊಂದಿಗೆ ತಾವು ಚುನಾವಣೆಯಲ್ಲಿ ತಮ[...] ಒಂದೊಂದು ಓಟಿಗೂ ಲಂಚದ ರೂಪದಲ್ಲಿ ಪಡೆಯು[...] ಹಣವು ತಮ್ಮ ಜೇಬಿನಿಂದಲೇ ಹೊಡೆದು ಕೊಂಡದ್ದ[...] ಒಂದಂಶ ಮಾತ್ರ ಎಂದು ಮತದಾರ ತಿಳಿಯಬೇಕು[...] ಮಾತ್ರವಲ್ಲ, ಅದರ ನೂರು ಪಾಲನ್ನು ಮತ್ತೆ ಅಧಿಕಾ[...] ಗಳಿಸಿಕೊಂಡ ಮೇಲೆ ತನ್ನ ಮನೆಗೇ ಕನ್ನ ಹಾಕಿ [...] ರಾಜಕೀಯ ಹೆಗ್ಗಣಗಳು ಮುಕ್ಕುತ್ತವೆ ಎಂಬುದು ಮತದಾರನಿಗೆ ಅರಿವಾಗಬೇಕಿದೆ.

■ ಹರ್ಷಕುಮಾರ್ ಕು[...]

ಂದೂ ಸಮಾಜೋತ್ಸವ ಮತ್ತು ಕಾಪು ಘಟನೆಗಳು

ನಾವು ಹೇಳಿದ್ದೇ ಸತ್ಯ: ತ್ಯಮೇವ ಜಯತೆ"



ೆತ್ತೀಚೆಗೆ ಮಂಗಳೂರಿನಲ್ಲಿ ಸಂಘಪರಿವಾರ ನಡೆಸಿದ ೂ ಸಮಾಜೋತ್ಸವದ ಒಂದು ಉದ್ದೇಶ, ಹಿಂದೂ ಟ್‌ಬ್ಯಾಂಕನ್ನು ಹುಟ್ಟುಹಾಕುವುದಾಗಿತ್ತು. ಈ ಉದ್ದೇಶ ರಿದೆಯೋ ಇಲ್ಲವೋ ಎಂಬುದು ಬಹುಶಃ ಚುನಾ ಮ ನಂತರವೂ ಅಸ್ಪಷ್ಟವಾಗಿಯೇ ಇರುತ್ತದೆ. ಆದರೆ ಕೋಮುಗಳ ನಡುವೆ ಈಗಾಗಲೇ ಹದಗೆಟ್ಟಿರುವ ಧವನ್ನು ಇನ್ನಷ್ಟು ಕೆಡಿಸುವ ಸಂಘ ಪರಿವಾರದ ಜೆಂಡಾವನ್ನು ಕಾರ್ಯಗತಗೊಳಿಸುವಲ್ಲಿ ಸಮಾಜೋತ್ಸವ ರಿ ಯಶಸ್ಸನ್ನು ಪಡೆದಿದೆ. ತಾ. 15.3.09 ಭಾನು ವಂದು ಮಂಗಳೂರಿನಲ್ಲಿ ನಡೆದ ಹಿಂದೂ ಸಮಾಜೋ ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಳ ಎಲ್ಲೆಡೆಗಳಿಂದ ಜನರನ್ನು ಬಸ್ಸುಗಳಲ್ಲಿ ಸಾಗಿಸಲಾ ಇದರ ವೆಚ್ಚವನ್ನು ಯಾರು ಭರಿಸಿದರು? ಜೋತ್ಸವದ ವೇದಿಕೆಯಲ್ಲಿ ಉಪಸ್ಥಿತರಿದ್ದ ಪೇಜಾವರ ನ್ನು, ಮೊದಲಾದ ಮಠಾಧೀಶರುಗಳನ್ನು ಯಃಕಶ್ಚಿತ್ ರಾದ ನಮ್ಮಂತಹವರು ಹೀಗೆ ಪ್ರಶ್ನಿಸಲು ಸಾಧ್ಯವಿಲ್ಲ. ಮಾಧ್ಯಮಗಳಂತೂ ಈ ರೀತಿಯ 'ತಲೆ ತಿರುಕ' ಹೇಳುವುದನ್ನು ಯಾವತ್ತೋ ಕೈಬಿಟ್ಟಿವೆ. ಚುನಾವಣಾ ಗವಾದರೂ ಈ ಹಿಂದೂ ಸಮಾಜೋತ್ಸವದ ವ್ಯಯದ ಲೆಕ್ಕ ಕೇಳೀತು ಎಂದು ಆಶಿಸೋಣ.

ಮಂಗಳೂರಿನ ಹಿಂದೂ ಸಮಾಜೋತ್ಸವಕ್ಕೆ ಬಸ್ಸು ಸಾಗಿಸಲ್ಪಟ್ಟ ಹಿಂದೂವೀರರು ಬಸ್ಸುಗಳಲ್ಲಿ ತಮ್ಮ ಊರು ವಾಪಸು ಹೋಗುತ್ತಿದ್ದಾಗ ೂಯೇತರ ಸಮುದಾಯಗಳ ಅಸಹ್ಯ ಘೋಷಣೆಗಳನ್ನು ದ್ದಾರೆ. ಕರಾವಳಿಯ ಅನೇಕ ಮಸೀದಿ, ಮದ್ರಸಗಳ ಮೇಲೆ ನಡೆದಿದೆ. ಬೈಂದೂರಿನ ಪದ ಮಡಿಕಲ್‌ನ ಸುಮಾರು ವರ್ಷ ಹಳೆಯ ಮಸೀ ಮೇಲೆ ಆ ದಿನ ನಡುರಾತ್ರಿಯ ವೇಳೆಗೆ ನಡೆದ ಯಲ್ಲಿ ಬಾಗಿಲು ಮುರಿದು ಒಳನುಗ್ಗಿ ಕುರ್ಚಿ, ಪು, ಸೌಂಡ್ ಸಿಸ್ಟಮ್‌ಗಳನ್ನು ನಾಶಪಡಿಸಲಾಗಿದೆ. ಗ್ ಫ್ಯಾನಿನ ರೆಕ್ಕೆಗಳನ್ನು ಕೆಳಮುಖ ಬಗ್ಗಿಸಲಾಗಿದೆ. ದಿಯ ಕುರಾನ್ ಅನ್ನು ಕಡಲತೀರದಲ್ಲಿ ಎಸೆದಿದ್ದಾರೆ. ೋಟದ ಸಮೀಪದ ಪಾರಂಪಳ್ಳಿಯ ನೂರುಲ್ ಮದ್ರಸದ ಮರದ ಬಾಗಿಲಿಗೆ ಪೆಟ್ರೋಲ್ ಸುರಿದು ಕೊಡಲು ಯತ್ನಿಸಲಾಯಿತು. ಮದ್ರಸದ ಒಳಗೆ ತ್ತಿದ್ದವರು ಬೆಂಕಿಯ ಜಳಕ್ಕೆ ಎಚ್ಚರಗೊಂಡು, ಹೊರಗೆ ಬಂದು ಬೆಂಕಿ ನಂದಿಸದೆ ಹೋಗಿದ್ದರೆ ಸುಟ್ಟು ಯಾಗುತ್ತಿದ್ದರು. "ಇದು ಗೊತ್ತಿದ್ದೇ ಮಾಡಿದ ಕೆಲಸ" ಅವರು ಹೇಳುತ್ತಾರೆ. ಪಾರಂಪಳ್ಳಿಗೆ ಸಮೀಪದ ಕರೆಯಲ್ಲಿ, ಎರಡು ವರ್ಷಗಳ ಕೆಳಗೆ, ವಿನಾಕಾರಣ ತೆಗೆದು, ಆ ಪರಿಸರದ ಕೆಲವು ಸ್ವಯಂಘೋಷಿತ ದೂ"ಗಳು ಮುಸ್ಲಿಮರ ಮನೆಗಳಿಗೆ ನುಗ್ಗಿ ದಾಂಧಲೆ ದ್ದರು.

ಪಾರಂಪಳ್ಳಿ, ಪಡುಕರೆ, ಕೋಟ ಕಡಲತೀರದ ಈ ಳು ಶಿವರಾಮ ಕಾರಂತರ "ಮರಳಿಮಣ್ಣಿಗೆ"ಯ ತ. ಈಗ ಈ ಹಳ್ಳಿಗಳು ಕಾರಂತರ ಮಾನವತಾವಾದಿ ದರ್ಶನಕ್ಕೆ ತದ್ವಿರುದ್ಧವಾದ ಫ್ಯಾಸಿಸಂನ ಪ್ರಯೋಗಶಾಲೆ ಸುತ್ತಿವೆ! ಕೋಟವಷ್ಟೇ ಯಾಕೆ, ಈಗ ಇಡೀ ಳಿಯ ಪರಿಸರವೇ ಫ್ಯಾಸಿಸಂ ಪ್ರಯೋಗ ಶಾಲೆಯಾಗಿ ರ್ಪಟ್ಟಿದೆ. ಈ ಪ್ರಯೋಗಶಾಲೆಯ ಇತ್ತೀಚೆಗಿನ ೋಗವೆಂದರೆ ಮಂಗಳೂರಿನ ಹಿಂದೂ ಜೋತ್ಸವದ ರಾತ್ರಿ ಉಡುಪಿ ಸಮೀಪದ ಕಾಪುವಿನಲ್ಲಿ ನಡೆಸಿದ ವಿದ್ಯಮಾನ.

ಕಾಪು ಮಂಗಳೂರು- ಉಡುಪಿ ಹೆದ್ದಾರಿಯಲ್ಲಿ ಪಿಯೂರಿನಿಂದ ಉತ್ತರಕ್ಕೆ ಸುಮಾರು 40 ಕಿ.ಮೀ. ದಲ್ಲಿರುವ ಕಡಲತೀರದ ಊರು. ಅದು ಒಂದು ಸಭಾ ಕ್ಷೇತ್ರವಾಗಿದ್ದು, ಅದರ ಒತ್ತಿಗಿರುವ ಕ್ಷೇತ್ರ ಪಿ. ಎರಡೂ ಕಡೆ ಬಿಜೆಪಿ ಅಭ್ಯರ್ಥಿಗಳು ಕಳೆದ ವಣೆಯಲ್ಲಿ ತಮ್ಮ ಕಾಂಗ್ರೆಸ್ ಅಭ್ಯರ್ಥಿಗಳಿಗಿಂತ ಅಲ್ಪಬಹುಮತದಿಂದ ಆಯ್ಕೆಗೊಂಡಿದ್ದಾರೆ. ಆದರು, ಕೇವಲ ಆದರು, ಸಮಸ್ತ ಹಿಂದೂಗಳ ಗಳು ಮತ್ತು ಅವರನ್ನು ವಿರೋಧಿಸುವ ಎಲ್ಲರೂ [illegible] ಅವರ ಪಕ್ಷದ್ದೇ ಸರ್ಕಾರವಿರುವುದರಿಂದ ಅಸ್ವರನ್ನು ದ ಈ ಕೋಮು ಸರ್ಕಾರದ ಅಧಿಕೃತ ಧೋರಣೆಯೂ ಆಗಿದೆ. ಕಾಪುವಿನಲ್ಲಿ ಮೊನ್ನೆ ನಡೆದ ಘಟನೆಗಳಲ್ಲಿ ಇದು ಎದ್ದು ಕಾಣುತ್ತದೆ.

ತಾ. 15.3.09 ಭಾನುವಾರ ಮಂಗಳೂರಿನಲ್ಲಿ ಹಿಂದೂ ಸಮಾಜೋತ್ಸವ ಮುಗಿದ ಮೇಲೆ ಉಡುಪಿ, ಕುಂದಾಪುರ ಮತ್ತು ಬೈಂದೂರುಗಳ ಕಡೆ ಹೊರಟ "ಹಿಂದೂ ಕಾರ್ಯಕರ್ತರು" ತಮ್ಮ ಬಸ್ಸುಗಳನ್ನು ಕಾಪುವಿನ ಜಮಾ ಮಸೀದಿಯ ಎದುರು ನಿಲ್ಲಿಸಿದರು. ಈ ಮಸೀದಿ ಹೆದ್ದಾರಿಯ ಪಕ್ಕದಲ್ಲೇ ಇದೆ. ಆಗ ಇಳಿಸಂಜೆಯ 7.30 ರ ಸಮಯ. ಮೂಲ್ಕಿಯ ಹತ್ತಿರ, ಹಿಂದೂ ಸಮಾಜೋತ್ಸವದ ಒಂದು ಬಸ್ಸಿಗೆ ಕಲ್ಲು ಎಸೆಯಲಾಗಿದೆ ಎಂಬ ಸುದ್ದಿ ಬಸ್ಸಿನಿಂದ ಬಸ್ಸಿಗೆ ಎಸ್‌ಎಂಎಸ್ ಮುಖಾಂತರ ರವಾನೆಯಾಗಿ ಕಾಪು ಜಮಾ ಮಸೀದಿಯ ಎದುರು, "ಹಿಂದೂ ಕಾರ್ಯಕರ್ತರು" ರಸ್ತೆತಡೆ ಚಳವಳಿ ಪ್ರಾರಂಭಿಸಿದರು. ಹಿಂದೂ ಸಮಾಜೋತ್ಸವದ ಸುಮಾರು 20 ಬಸ್‌ಗಳಲ್ಲಿದ್ದ 700 ರಿಂದ 800 ರಷ್ಟು ಜನ ರಸ್ತೆಗಿಳಿದರು. ಬಸ್ಸುಗಳು ರಸ್ತೆಗೆ ಅಡ್ಡವಾಗಿ ನಿಂತವು. ಉಡುಪಿ ಮಂಗಳೂರು ಹೆದ್ದಾರಿ ರಾಜ್ಯದ ಅತ್ಯಂತ ವಾಹನ ನಿಬಿಡ ಹೆದ್ದಾರಿಗಳಲ್ಲಿ ಒಂದು. ಈ ರಸ್ತೆತಡೆಯಿಂದಾಗಿ ಕಾಪು ಮಸೀದಿ ಎದುರು ಹೆದ್ದಾರಿಯಲ್ಲಿ ಎರಡೂ ಕಡೆ ಅಸಂಖ್ಯ ವಾಹನಗಳು ಸಾಲುಗಟ್ಟಿ ನಿಂತವು. ಈ ಸನ್ನಿವೇಶವನ್ನು ನಿಭಾಯಿಸಲು ಸ್ಥಳದಲ್ಲಿ ಇದ್ದದ್ದು ಕಾಪು ಪೊಲೀಸು ಠಾಣೆಯ ಇಬ್ಬರು ಪಿ.ಸಿ.ಗಳು. ಠಾಣೆಯ ಅಧಿಕಾರಿಗಳ ಸಮೇತ ಎಲ್ಲರೂ ಡ್ಯೂಟಿ ಮೇಲೆ ಮಂಗಳೂರಿಗೆ ಹೋಗಿದ್ದರು.



ಮಾರನೆಯ ದಿನ ನಮ್ಮ ಕರಾವಳಿಯ ಹೆಮ್ಮೆಯ ದಿನಪತ್ರಿಕೆಗಳ ವರದಿಗಳನ್ನು (ವಾರ್ತಾಭಾರತಿ ಹೊರತುಪಡಿಸಿ) ನಂಬುವುದಾದರೆ ಈ ರಸ್ತೆ ತಡೆಯ ವೇಳೆಯಲ್ಲಿ "ಹಿಂದೂ ಕಾರ್ಯಕರ್ತರು" ಬಾಯಲ್ಲಿ ಬೆಟ್ಟು ಹಾಕಿಕೊಂಡು ಕೂತಿದ್ದರು ಅಥವಾ ದೇವರಧ್ಯಾನ ಮಾಡುತ್ತಿದ್ದರು. ಯಾಕೆಂದರೆ ಎಲ್ಲ ಪತ್ರಿಕೆಗಳೂ "ಹಿಂದೂ ಸಮಾಜೋತ್ಸವದಿಂದ ಊರಿಗೆ ಮರಳುತ್ತಿದ್ದವರ ಮೇಲೆ ಮಸೀದಿಯಿಂದ ಕಲ್ಲು ಸೋಡಾ ಬಾಟಲಿಗಳನ್ನು ಎಸೆಯಲಾಯಿತು" ಎಂದು ವರದಿ ಮಾಡಿವೆ. ಹಾಗೆ ಎಸೆಯುವುದಕ್ಕೋಸ್ಕರವೇ ಮಸೀದಿಯಲ್ಲಿ ಕಲ್ಲು ಮತ್ತು ಬಾಟಲಿಗಳನ್ನು ಸಂಗ್ರಹಿಸಿ ಇಡಲಾಗಿತ್ತು ಎಂದೂ ಪತ್ರಿಕೆಗಳು ಬರೆದಿವೆ. ಯಾವ ಪತ್ರಿಕೆಯೂ ಮಸೀದಿಯಲ್ಲಿ ಹೀಗೆ "ಸಂಗ್ರಹಿಸಿ ಇಡಲಾದ" ಕಲ್ಲಿನ ಸೈಜು ನಮೂದಿಸಿಲ್ಲವಾಗಿ, ಕೈಯಿಂದ ಎಸೆಯಬಹುದಾದಷ್ಟು ಗಾತ್ರದ ಕಲ್ಲು ಎಂದು ವಾಚಕ ಮಹಾಶಯರು ಊಹಿಸಿಕೊಳ್ಳಬಹುದಾಗಿದೆ. ಇನ್ನು ಬಾಟಲಿ ಎಂದರೆ ಸೋಡಾ ಬಾಟಲಿ. ಪತ್ರಿಕೆಗಳು ಅದನ್ನು ಸ್ಪಷ್ಟವಾಗಿ ಹೇಳಿದ್ದಾವೆ. ಆದರೆ ಮಾರನೆಯ ದಿನ ನಾನು ಆ ಮಸೀದಿಗೆ ಹೋಗಿದ್ದಾಗ ಅಲ್ಲಿದ್ದವರು, ಮಸೀದಿಯ ಕಡೆ "ಹಿಂದೂ ಕಾರ್ಯಕರ್ತರು" ಎಸೆದ ಬೀರುಬಾಟಲಿಗಳ ಕುರಿತು ಹೇಳಿದರು.

ಕಲ್ಲು ! ಸೋಡಾಬಾಟಲಿ!

ಕನ್ನಡ ಪತ್ರಿಕೆಗಳ ಕಲ್ಪನಾವಿಲಾಸ ಇದಕ್ಕಿಂತ ಮುಂದೆ ಸಾಗುವುದಿಲ್ಲ, ಇನ್ನು ಮಸೀದಿಗಳಲ್ಲಿ ಪೆಟ್ರೋಲ್, ಗ್ರೆನೇಡು, ಎ.ಕೆ. 407 ಮತ್ತು ಬಾಂಬುಗಳ ಕುರಿತು ಈ ಪತ್ರಿಕೆಗಳು ವರದಿ ಮಾಡುವುದು ಯಾವಾಗ?

ಕನ್ನಡ ಪತ್ರಿಕೆಗಳು ಒಂದು ಸಾಲೂ ಸತ್ಯ ಹೇಳುವುದಿಲ್ಲ ಎಂದು ನನ್ನ ಅಭಿಪ್ರಾಯವಲ್ಲ. ಕಾಪು ಮಸೀದಿಯ ಕಡೆಯಿಂದ ಹೆದ್ದಾರಿಯ ಕಡೆಗೆ ಆ ರಾತ್ರಿ ನಿಜವಾಗಿ ಕಲ್ಲು ಮತ್ತು ಬಾಟಲಿಗಳು ಎಸೆಯಲ್ಪಟ್ಟವೆ ಮತ್ತು ಅದರಿಂದ, ಉಡುಪಿಯ ಬಿಜೆಪಿ ಶಾಸಕರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುವ ಪ್ರಕಾರವೇ ಭರ್ತಿ ಆರು ಜನ ಹಿಂದೂ ಕಾರ್ಯಕರ್ತರಿಗೆ ಗಾಯವಾಗಿದೆ! (ಉದಯವಾಣಿ, ಮಣಿಪಾಲ ಆವೃತ್ತಿ 22.3.09, ಪುಟ 9) ಹಾಗಾಗಿ ಹಿಂದೂ ಸಮಾಜೋತ್ಸವದಿಂದ ಮರಳುತ್ತಿದ್ದ ಹಿಂದೂ ಕಾರ್ಯಕರ್ತರ ಮೇಲೆ ಕಾಪು ಮಸೀದಿಯ ಒಳಗಿನಿಂದ ಕಲ್ಲು ತೂರಾಟವಾದ ಸುದ್ದಿ ಎಲ್ಲ ಪತ್ರಿಕೆಗಳಲ್ಲಿಯೂ ಮುಖಪುಟದ ಚೀರಾಡುವ ತಲೆಬರಹವಾದದ್ದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಆದರೆ ಆ ರಾತ್ರಿ ಕಾಪು ಜಮಾ ಮಸೀದಿಯ ಆಸುಪಾಸಿನಲ್ಲಿ ನಡೆದ ಈ ಘಟನೆಗಳು ಯಾಕೆ ಸುದ್ದಿಯಾಗಲಿಲ್ಲ?

1. ಜಮಾ ಮಸೀದಿಯ ಕಿಟಕಿ ಗಾಜುಗಳೇ [illegible]ಗಿದೆ. ಮಸೀದಿ ಒಳನುಗ್ಗಿದ ಜನ, ಮೌಲ್ವಿಯ ಮೊಬೈಲು ಮತ್ತು ಹಣವನ್ನು ಎಗರಿಸಿದ್ದಾರೆ. ಪ್ರಾರ್ಥನೆಯ ಜಮಖಾನವನ್ನು ಮಲಿನಗೊಳಿಸಿದ್ದಾರೆ. ಮಸೀದಿಯ ಅಂಗಳದಲ್ಲಿ ಬೀರ್ ಬಾಟಲಿಗಳನ್ನು ಎಸೆಯಲಾಗಿದೆ. ಮಸೀದಿಯ ಒಳಗಿದ್ದವರೇ ಇದನ್ನು ಮಾಡಿರಲು ಸಾಧ್ಯವಿಲ್ಲ. ಈ ಘಟನೆ ನಡೆದ ಮರುದಿನ, ಮಸೀದಿಯಲ್ಲಿದ್ದವರು ನನಗೆ ತಿಳಿಸಿದಂತೆ ಹಿಂದೂ ಕಾರ್ಯಕರ್ತರಲ್ಲಿ ಕೆಲವರು ಮಸೀದಿಯ ಒಳಗೂ ನುಗ್ಗಿದ್ದರು ಮತ್ತು ಗಲಭೆ ಪ್ರಾರಂಭವಾದ ಸ್ವಲ್ಪ ಹೊತ್ತಿನ ನಂತರ ಸ್ಥಳಕ್ಕೆ ಬಂದ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಯ ತಲೆಗೆ ಕಲ್ಲು ಗುರಿ ಇಟ್ಟು ಹೊಡೆದವರೂ ಇವರೇ.

2. ಆ ರಾತ್ರಿ 7.30 ಸುಮಾರಿಗೆ ಬೆಳ್ತಂಗಡಿಯಲ್ಲಿ ತಮ್ಮ ಪೈಕಿಯವರ ಮದುವೆ ಸಮಾರಂಭ ಮುಗಿಸಿಕೊಂಡು, ಹಾವೇರಿಗೆ ಪ್ರಯಾಣಿಸುತ್ತಿದ್ದ ಮುಸ್ಲಿಮ್ ಕುಟುಂಬವೊಂದರ ವಾಹನವನ್ನು ಕಾಪುವಿನ ಪೆಟ್ರೋಲ್ ಬಂಕ್ ಸಮೀಪ ನಿಲ್ಲಿಸಲಾಯಿತು. ವ್ಯಾನಿನ ಡ್ರೈವರ್ ಹಿಂದೂ. ಆದರೆ ವ್ಯಾನಿನ ಒಳಗೆ ಬುರ್ಖಾ ಧರಿಸಿದ ಮುಸ್ಲಿಮ್ ಮಹಿಳೆಯರನ್ನು ಕಂಡು, ಅಲ್ಲಿ ಜಮಾಯಿಸಿದ್ದ ಹಿಂದೂ ಕಾರ್ಯಕರ್ತರು, ತಮ್ಮ ಬಳಿ ಇದ್ದ ಕೇಸರಿ ಧ್ವಜದ ಕೋಲುಗಳಿಂದ ಅವರನ್ನು ಚುಚ್ಚಿದರು; ಅಶ್ಲೀಲವಾಗಿ ಮಾತಾಡಿದರು. ಒಬ್ಬ ಮಹಿಳೆಯನ್ನು ಗಂಭೀರವಾಗಿ ಗಾಯಗೊಳಿಸಿದ್ದರು. ಈ ಮಧ್ಯೆ ವ್ಯಾನಿನ ಡ್ರೈವರ್ "ನಾನು ಹಿಂದೂ ನನ್ನನ್ನು ಬಿಡಿ" ಎಂದು ಅಲ್ಲಿದ್ದವರ ಬಳಿ ಅಂಗಲಾಚಿದರು. ಅಷ್ಟರಲ್ಲಿ ಅಲ್ಲಿದ್ದ ಯಾರೋ ಒಬ್ಬ ಪುಣ್ಯಾತ್ಮ "ಇಲ್ಲೇ ಹತ್ತಿರ ಮಸೀದಿ ಇದೆ. ಅಲ್ಲಿ ಹೋಗಿ ರಕ್ಷಣೆ ಪಡೆಯಿರಿ" ಎಂದು ಸೂಚಿಸಿದರು. ಡ್ರೈವರ್ ವೇಗವಾಗಿ ತನ್ನ ವಾಹನ ಓಡಿಸಿ ಮಸೀದಿಯ ಬಳಿ ಹೋದರು. ವ್ಯಾನಿನ ಒಳಗೆ ಬುರ್ಖಾಧಾರಿಗಳು ಇರುವುದನ್ನು ಕಂಡು ಮಸೀದಿಯ ಒಳಗಿದ್ದವರು ಗೇಟು ತೆಗೆದರು. ಆಗ ವ್ಯಾನಿನ ಜೊತೆಗೆ ಹೊರಗಿನವರೂ ಒಂದಷ್ಟು ಜನ ಒಳನುಗ್ಗಿ ದಾಂಧಲೆ ನಡೆಸಿದರು.

3. ಮಸೀದಿಯ ಎದುರು ರಸ್ತೆ ತಡೆ ಮಾಡುತ್ತಿದ್ದ ಹಿಂದೂ ಕಾರ್ಯಕರ್ತರು ರಸ್ತೆಯಲ್ಲಿ ನಿಂತ ವಾಹನಗಳಲ್ಲಿ "ಯಾರಾದರೂ ಮುಸ್ಲಿಮರಿದ್ದೀರಾ?" ಎಂದು ವಿಚಾರಿಸುತ್ತಿದ್ದರು. ಈ ತಪಾಸಣೆ ನಡೆಯುತ್ತಿರುವಾಗಲೇ ಅಲ್ಲಿಗೆ "ಮಾಶಾ ಅಲ್ಲಾ" ಎಂಬ ಸ್ಟಿಕ್ಕರ್ ಅಂಟಿಸಿದ್ದ ಮಾರುತಿ ಕಾರೊಂದು ಬಂದಿತು. ಬ್ರಹ್ಮಾವರದಲ್ಲಿ ಒಂಟು ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯ ಮುಗಿಸಿ, ಮೂಲ್ಕಿಗೆ ವಾಪಸಾಗುತ್ತಿದ್ದ ಅಬ್ದುಲ್ ಹಮೀದ್, ಆರೀಫ್, ತೌಫಿಕ್, ಶಿರಾಜುದ್ದೀನ್, ಅಶ್ರಫ್ ಮತ್ತು ರಾಜೇಶ್ ಎಂಬ ಯುವಕರು ಆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಹಿಂದೂ ಕಾರ್ಯಕರ್ತರು ಅವರನ್ನು ಹೊರಗೆಳೆದು ಥಳಿಸಿದರು. ಆ ಕಾರಿನಲ್ಲಿ ಏಕಮಾತ್ರ ಹಿಂದೂ ರಾಜೇಶ್‌ಗೆ ಕೂಡ ಹೊಡೆತ ಬಿತ್ತು. ಆತ ತನ್ನ ಜನಿವಾರ ಹೊರಗೆಳೆದು ತೋರಿಸಿ ತಾನು ಹಿಂದೂ ಎಂದು ಬೊಬ್ಬೆಹಾಕಿದರೂ ಪ್ರಯೋಜನವಾಗಲಿಲ್ಲ. ಹಿಂದೂ ವೀರರ ಹೊಡೆತ ತಾಳದೆ, ಮೂಲ್ಕಿಯ ಈ ಕ್ರಿಕೆಟ್ ಆಟಗಾರರು ದಿಕ್ಪಾಪಾಲಾಗಿ ಓಡಿದರು. ಈ ವೀರರು ಅವರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದರು. ಅವರ ಪೈಕಿ ಒಬ್ಬ ಓಡಿಓಡಿ ಸುಸ್ತಾಗಿ ಒಂದು ಮನೆಯ ಎದುರು ಕುಸಿದು ಬಿದ್ದ. ಅದು ಹಿಂದೂಗಳ ಮನೆ. ಆ ಮನೆಯ ಮಹಿಳೆ ಯುವಕನಿಗೆ ರಕ್ಷಣೆ ನೀಡಿದ್ದೇ ಅಲ್ಲದೆ, ಡಾಕ್ಟರರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೂಡ ಕೊಡಿಸಿದರು! ಕಾಪುವಿನ ಸೂರ್ಯಕಾಂತ ಶೆಟ್ಟಿ ಎಂಬ ಬಸ್ ಟೈಮ್ ಕೀಪರ್ ಒಬ್ಬರು ಸಹ ಮೂಲ್ಕಿಯ ಈ ಯುವಕರಿಗೆ ರಕ್ಷಣೆ ಕೊಟ್ಟು, ಹಿಂದೂ ಕಾರ್ಯಕರ್ತರು ಶೇಪ್ ತೆಗೆದಿದ್ದ ಅವರ ಮಾರುತಿ ಕಾರನ್ನು ರಿಪೇರಿ ಕೂಡ ಮಾಡಿಕೊಟ್ಟರು! ಆ ತರುಣರ ಪೈಕಿ ಒಬ್ಬರಾದ ಹಮೀದ್ ಆನಂತರ, "ಹಿಂದೂತ್ವವಾದಿಗಳು ನಮ್ಮ ಮೇಲೆ ಹಲ್ಲೆ ಮಾಡಿದರು. ಆದರೆ ಹಿಂದೂಗಳು ನಮ್ಮನ್ನು ರಕ್ಷಿಸಿದರು" ಎಂದು ಉದ್ಗರಿಸಿದರು. (ದಿ ಹಿಂದು 19.3.09 ಪುಟ 3. ಸಂವರ್ತ ವರದಿ)



4. ಕಾಪು ಜಮಾ ಮಸೀದಿಯ ಕಟ್ಟಡದ ಒಂದು ಕೋಣೆಯಲ್ಲಿರುವ ಏರ್‌ಟೆಲ್ ಅಂಗಡಿಯೊಂದು [illegible] ಮಾಲೀಕ ಫಾರುಕ್‌ಗೆ ಅವರ ಗೆಳೆಯನೊಬ್ಬ ಫೋನ್ ಮಾಡಿ "ನಿನ್ನ ಅಂಗಡಿ ಬಾಗಿಲು ತೆಗೆದಿದೆ; ಒಳಗೆ ಎಲ್ಲ ಲೂಟಿಯಾಗಿದೆ" ಎಂದು ತಿಳಿಸಿದ. ಫಾರುಕ್ ಕೂಡಲೆ ಕಾಪು ಪೊಲೀಸ್ ಠಾಣೆಗೆ ಫೋನ್ ಮಾಡಿದರು. ಠಾಣೆಯಲ್ಲಿಲ್ಲ. ಎಸ್‌ಐ ಇರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಫಾರುಕ್ ಮತ್ತೆ ಫೋನ್ ಮಾಡಿದಾಗ ಠಾಣೆಯಲ್ಲಿ ಫೋನ್ ಕೈಗೆತ್ತಿಕೊಂಡವರು (ಎಸ್‌ಐ ಅಲ್ಲ) "ಈಗ ಅಲ್ಲಿ ತುಂಬಾ ಜನ ಸೇರಿದ್ದಾರೆ. ಟೆನ್ಶನ್ ಇದೆ. ನೀನು ಅಲ್ಲಿಗೆ ಹೋಗಬೇಡ. ನಾಳೆ ನೋಡುವ" ಎಂದು ಹೇಳಿದರು. ಏರ್‌ಟೆಲ್ ಅಂಗಡಿಯಲ್ಲಿದ್ದ 25 ಹೊಸ ಮೊಬೈಲುಗಳು, ರಿಪೇರಿಗೆ ಬಂದ 20 ಸೆಟ್‌ಗಳು ಮತ್ತು 90,000 ರೂ.ಗಳಷ್ಟು ಕರೆನ್ಸಿ (ಆತ ಅದರ ಡೀಲರ್ ಕೂಡ), ಟೋಷಿಬಾ ಲ್ಯಾಪ್‌ಟಾಪ್ ಮತ್ತು 8000 ರೂಪಾಯಿಯಷ್ಟು ನಗದನ್ನು ಹಿಂದೂ ವೀರರು ದೋಚಿಕೊಂಡು ಹೋಗಿದ್ದಾರೆ. ಹೋಗುವಾಗ ಅಂಗಡಿಯ ಫರ್ನಿಚರುಗಳನ್ನು ಜಖಂ ಮಾಡಿ, ನಾಮಫಲಕವನ್ನು ಧ್ವಂಸ ಮಾಡಿಹೋಗಿದ್ದಾರೆ.

5. ಈ ಎಲ್ಲ ಘಟನೆಗಳು ತಾ. 15.3.09 ಭಾನುವಾರ 7 ಗಂಟೆಯಿಂದ 9 ಗಂಟೆಯ ಒಳಗೆ, ಕಾಪು ಮಸೀದಿಯ ಎದುರು, ಉಡುಪಿ ಮಂಗಳೂರು ಹೆದ್ದಾರಿಯಲ್ಲಿ ಸಂಭವಿಸಿವೆ. ಮಸೀದಿಯ ಎದುರು ಹೆದ್ದಾರಿಯಲ್ಲಿ ಹಿಂದೂ ಸಮಾಜೋತ್ಸವದ 20 ಬಸ್ಸುಗಳು ನಿಂತಿದ್ದವು. ಕಾಪುವಿನ ಪೊಲೀಸರು ಈ ವಾಹನಗಳ ನೋಂದಣಿ ಸಂಖ್ಯೆಯನ್ನು ದಾಖಲಿಸಿಕೊಂಡಿಲ್ಲ. ಮಸೀದಿಗೆ ಕಲ್ಲೆಸೆದವರು ಮತ್ತು ಮೇಲೆ ಹೇಳಿದ ಇತರ ಚಟುವಟಿಕೆಗಳಲ್ಲಿ ತೊಡಗಿಕೊಂಡವರಲ್ಲಿ ಎಲ್ಲೋ ಒಂದಿಬ್ಬರನ್ನು ಬಂಧಿಸುವ ಶಾಸ್ತ್ರ ಮಾಡಿದ್ದಾರೆ. ಆ ಕೇಸುಗಳು ಖಂಡಿತ ಕೋರ್ಟಿನಲ್ಲಿ ನಿಲ್ಲುವಂತಹವಲ್ಲ.


ಅದೇ ವೇಳೆಗೆ ಕಾಪು ಪೊಲೀಸರು ಮಸೀದಿಯ ಒಳಗೆ ಇದ್ದ 27 ಮುಸ್ಲಿಮರನ್ನು ಬಂಧಿಸಿ ಅವರ ಮೇಲೆ ಸೆಕ್ಷನ್ 363 (ಶಾಂತಿಭಂಗ) 143 (ದೊಂಬಿ), 324 (ಹಲ್ಲೆ) ಮತ್ತು 307 (ಮಾರಣಾಂತಿಕ ಹಲ್ಲೆ)ರ ಅಡಿಯಲ್ಲಿ ಕೇಸು ದಾಖಲಿಸಿಕೊಂಡಿದ್ದಾರೆ. ಈ 27 ಬಂಧಿತರಲ್ಲಿ ಕನಿಷ್ಠ 10 ಜನ ಅಪ್ರಾಪ್ತರು. ನ್ಯಾಯಾಲಯ ಈಗ ಅವರಿಗೆ ಜಾಮೀನನ್ನು ಕೂಡ ನಿರಾಕರಿಸಿದೆ. ಆ ರಾತ್ರಿ ತಲೆಗೆ ಏಟು ಬಿದ್ದ ಪೊಲೀಸು ವರಿಷ್ಠಾಧಿಕಾರಿ ಈಗ ಚೇತರಿಸಿಕೊಂಡಿದ್ದಾರೆ. ಅವರ ತಲೆಗೆ ಬಿದ್ದ ಕಲ್ಲು ಮಸೀದಿಯ ಒಳಗಿನಿಂದಲೇ ತೂರಿಬಂದದ್ದು ಮತ್ತು ಮುಸ್ಲಿಮನಿಂದಲೇ ಎಸೆಯಲ್ಪಟ್ಟದ್ದು ಎಂದೇ ಭಾವಿಸಿದರೂ, ಅವರೂ ಸೇರಿದಂತೆ 7 ಜನ ಗಾಯಗೊಂಡಿರುವ ಈ ಪ್ರಕರಣದಲ್ಲಿ 27 ಜನ ಮುಸ್ಲಿಮರಿಗೆ ಜಾಮೀನು ರಹಿತ ಬಂಧನದ ಶಿಕ್ಷೆಯಾಗಿದೆ. ಆದರೆ ಹಿಂದೂ ಸಮಾಜೋತ್ಸವದಿಂದ ವಾಪಸಾಗುತ್ತಿದ್ದ ಹಿಂದೂ ಕಾಯಕರ್ತರ ಪೈಕಿ ಯಾರೊಬ್ಬನ ಮೇಲೂ ಒಂದು ದೂರು ಸಹ ದಾಖಲಾಗಿಲ್ಲ!

ರಾಜ್ಯ ಬಜೆಪಿ ಅಧ್ಯಕ್ಷ ಸದಾನಂದ ಗೌಡ ಕಾಪು ಮಸೀದಿಯ ಕಲ್ಲು ತೂರಾಟವನ್ನು ಇಸ್ಲಾಮಿಕ್ ಭಯೋತ್ಪಾದನೆ ಎಂದು ವರ್ಣಿಸಿದ್ದಾರೆ. ಹಿಂದೂ ಸಮಾಜೋತ್ಸವದಿಂದ ವಾಪಸಾಗುತ್ತಿದ್ದ ಕಾಯಕರ್ತರ ಕ್ರಿಮಿನಲ್ ಕೃತ್ಯಗಳ ಬಗ್ಗೆ ಅವರು ಏನೂ ಹೇಳಿಲ್ಲ. ಅವರಿಂದ ಅದನ್ನು ನಿರೀಕ್ಷಿಸುವಂತೆಯೂ ಇಲ್ಲ. ರಾಜ್ಯ ಗೃಹಮಂತ್ರಿಗಳು, ತಾವು ಬಜೆಪಿ ರಾಜಕಾರಣಿಯಷ್ಟೇ ಆಗಿರದೆ ಸಂವಿಧಾನ ಬದ್ಧವಾದ ಒಂದು ಹುದ್ದೆಯನ್ನು ನಿರ್ವಹಿಸುತ್ತಿರುವವರು ಎಂಬುದನ್ನು ಮರೆತು ಕಾಪುವಿನಲ್ಲಿ ನಡೆದ ನ್ಯಾಯದ ಕಗ್ಗೊಲೆಯನ್ನು ಸಮರ್ಥಿಸಿದ್ದಾರೆ. ರಾಜ್ಯದ ಮಾಧ್ಯಮಗಳು (ಒಂದೆರಡು ಗೌರವಾನ್ವಿತ ಅಪವಾದಗಳನ್ನು ಹೊರತುಪಡಿಸಿ) ಈ ಇಡೀ ಪ್ರಕರಣದಲ್ಲಿ ಕಾಪುವಿನ ಮುಸ್ಲಿಮರಿಗೂ ಹೇಳುವುದು ಇರಬಹುದು ಎಂಬುದನ್ನು ಗಣನೆಗೇ ತೆಗೆದುಕೊಂಡಿಲ್ಲ.

ಇನ್ನು ನಮ್ಮ ಮಠಾಧೀಶರುಗಳು?

ಅವರೇ ಇದೆಲ್ಲದರ ಹಿಂದಿನ ಸ್ಫೂರ್ತಿ. ಇದು ಚುನಾವಣೆಯ ಸೀಸನ್; "ಪ್ರಜಾಪ್ರಭುತ್ವದ ಬ್ಯಾಂಡ್ ಜೋರಾಗಿಯೇ ಬಜಾಯಿಸುತ್ತಿದೆ." ಆದರೆ ಇದೇ ವೇಳೆಗೆ ರಾಜ್ಯದ ಅತಿದೊಡ್ಡ ಅಲ್ಪಸಂಖ್ಯಾತ ಸಮುದಾಯದ ದನಿಯನ್ನೇ ಹತ್ತಿಕ್ಕಲಾಗುತ್ತಿದೆ. ಕಾಪು ಮಸೀದಿ, ಮನುಷ್ಯಮಾತ್ರರು ಒಳಪ್ರವೇಶಿಸಲಾಗದ ಕೋಟೆ ಅಲ್ಲ. ಅದರ ಎದುರುಗಡೆ ಮಾತ್ರ ಕಾಂಪೌಂಡ್ ಗೋಡೆಯಿದೆ. ಹಿಂಭಾಗದಲ್ಲಿ ಆ ಆವರಣ ತೆರವಾದ ಪ್ರವೇಶ. ಅಲ್ಲಿಂದ ಮುಸ್ಲಿಮರೇ ಹಿಂದೂ ಕಾರ್ಯಕರ್ತರ ಮೇಲೆ ಕಲ್ಲು ಎಸೆದಿರಬಹುದು. ಆದರೆ ಅವರ ಮೇಲೆ 10 ಕಲ್ಲು ಬಿದ್ದಾಗ, ಪ್ರತಿಯಾಗಿ ಅವರು ಎಸೆದ ಒಂದು ಕಲ್ಲು ನಿಮಗೆ ಭಯೋತ್ಪಾದನೆಯ ಹಾಗೆ ಕಂಡರೆ ಇವತ್ತು ನಾಳೆ ನಿಜವಾದ ಭಯೋತ್ಪಾದಕರೇ ನಿಮ್ಮ ಮನೆ ಬಾಗಿಲಿಗೆ [illegible]

● ಜಿ. ರಾಜಶೇಖರ




ಧರ್ಮ ಕೇಂದ್ರೀಕೃತ ಸಾಂಪ್ರದಾಯಿಕತೆಗಳ ನೆಲೆಗಳಲ್ಲಿ ಎಸಗಲ್ಪಡುವ ದೌರ್ಜನ್ಯಗಳ ವಿರುದ್ಧ ನಾಗರಿಕ ಸಮಾಜ ವೈಚಾರಿಕವಾಗಿ ಒಗ್ಗಟ್ಟಿನಿಂದ ಪ್ರತಿಭಟಿಸಬೇಕು. ಮೇಲ್ಕಾಣಿಸಿದ ಕಾರ್ಯಾಗಾರಗಳು ರಾಜ್ಯದಾದ್ಯಂತ ನಡೆಯಬೇಕು. ವಿಕೃತ ಮತ್ತು ಸಂಕುಚಿತ ಮನಸ್ಸುಗಳು ನಿರ್ನಾಮವಾಗಬೇಕು. ಸಮರಸದಿಂದ ಬಾಳುವ ಬಹುಮುಖಿ ಸಮಾಜ ಮುಂದುವರಿಯಬೇಕೆಂಬುದೇ ನಮ್ಮೆಲ್ಲರ ಸದಾಶಯ.

ಆತಂಕದ ದಿನಗಳಲ್ಲಿ ಒಂದು ಅರ್ಥಪೂರ್ಣ ಕಾರ್ಯಾಗಾರ

21ನೇ ಶತಮಾನ ಮಹಿಳೆಯರ ಶತಮಾನವೆಂದು ಬಿಂಬಿತವಾಗುತ್ತಿದೆ. ಮಹಿಳೆ ಇಂದು ಎಲ್ಲಾ ರಂಗಗಳಲ್ಲೂ ಮೇಲುಗೈ ಪಡೆಯುತ್ತಿರುವುದು ವಾಸ್ತವಿಕ. ಇದು ಆರೋಗ್ಯಪೂರ್ಣ ಸಮಾಜಕ್ಕೆ ಅತೀ ಅವಶ್ಯಕವೂ ಹೌದು. ಶತಶತಮಾನಗಳಿಂದ ದಾಸ್ಯದ ಶೃಂಖಲೆಗಳಲ್ಲಿ ಬಂಧಿಸಲ್ಪಟ್ಟ ಮಹಿಳೆ ಸ್ವತಂತ್ರ ವ್ಯಕ್ತಿತ್ವವನ್ನು ಗಳಿಸಿಕೊಳ್ಳುತ್ತಿರುವುದನ್ನ ಇಡೀ ಸಮಾಜ ಸ್ವಾಗತಿಸಬೇಕಿದೆ. ಆದರೆ ಪರಿವರ್ತನೆ ನಿಸರ್ಗ ಸಹಜ ನಿಯಮ ಎಂಬುವುದನ್ನು ಅರಿಯದ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಧಾರ್ಮಿಕ ಮೂಲಭೂತ ವಾದಿಗಳು ಸ್ತ್ರೀ ಸಬಲೀಕರಣವನ್ನು ಸಂಸ್ಕೃತಿಯ ಮತ್ತು ಧರ್ಮದ ಹೆಸರಿನಲ್ಲಿ ವಿರೋಧಿಸುತ್ತಿರುವುದು ನಾಗರಿಕ ಸಮಾಜಕ್ಕೆ ಅವಮಾನ.

ಕರ್ನಾಟಕದ ಕರಾವಳಿ ಮತ್ತು ಇತರ ಕೆಲವು ಭಾಗಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವಲೋಕಿಸಿದರೆ ಸ್ತ್ರೀಯರ ಸ್ಥಾನ ಮಾನ ಮತ್ತು ತನ್ನತನ ಅಪಾಯಕಾರಿ ಹಂತಕ್ಕೆ ತಲುಪಿದೆ. ಮಂಗಳೂರಿನ ಪಬ್ ದಾಳಿ, ಶ್ರುತಿ ಪ್ರಕರಣ ಮತ್ತು ಇತ್ತೀಚಿನ ಪುತ್ತೂರಿನ ಪ್ರಕರಣವನ್ನು ಗಮನಿಸಿದರೆ, ಧಾರ್ಮಿಕ ಮೂಲಭೂತವಾದಿಗಳ ಕರಾಳ ಮುಖಗಳು ವಿಶೇಷವಾಗಿ ಮಹಿಳೆಯ ಸ್ವಾತಂತ್ರವನ್ನು ಹರಣಗೊಳಿಸುತ್ತಿದೆ. ಸ್ವಘೋಷಿತ ಸಂಸ್ಕೃತಿ ರಕ್ಷಕರಿಂದ ನಾಗರಿಕ ಸಂಸ್ಕೃತಿ ನಶಿಸುತ್ತಿದೆ. ಈ ಹಿನ್ನಲೆಯಲ್ಲಿ ಕೊಡಗಿನ ಕೇಂದ್ರ ಸ್ಥಾನ ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಸಮಾಜಶಾಸ್ತ್ರ ವಿಭಾಗವು "ಮಹಿಳೆಯರ ವಿರುದ್ಧ ಸಾಂಸ್ಕೃತಿಕ ದೌರ್ಜನ್ಯಗಳು" ಉಪನ್ಯಾಸ ಮತ್ತು ಸಂವಾದ ಕಾರ್ಯಾಗಾರವನ್ನು ಮಾರ್ಚ್ 21ರಂದು ಸದ್ರಿ ಕಾಲೇಜಿನಲ್ಲಿ ಆಯೋಜಿಸಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಅಭಿಪ್ರಾಯವನ್ನು ಹಂಚಿಕೊಂಡ ಕೊಡಗಿನ ವೈಚಾರಿಕ ಪ್ರಜ್ಞೆಯ ಸಂಕೇತವಾದ ಹಿರಿಯ ವಕೀಲರು, ರಾಜಕಾರಣಿ ಮತ್ತು ಹೋರಾಟಗಾರರಾದ ಎ.ಕೆ.ಸುಬ್ಬಯ್ಯನವರು ಎಳೆಎಳೆಯಾಗಿ ಸ್ವಘೋಷಿತ ಸಂಸ್ಕೃತಿ ರಕ್ಷಕರಿಂದ ಹೆಣ್ಣಿನ ಮೇಲೆ ಎಸಗಲ್ಪಡುತ್ತಿರುವ ದೌರ್ಜನ್ಯಗಳ ಹುನ್ನಾರವನ್ನು ನೇರ ನುಡಿಗಳಿಂದ ಮನ ಮುಟ್ಟುವಂತೆ ವಿವರಿಸಿದರು. ಧಾರ್ಮಿಕ ಮೂಲಭೂತವಾದವೇ ಹೆಣ್ಣಿನ ಶೋಷಣೆಗೆ ಪ್ರಮುಖ ಕಾರಣ ಎಂದು ಬಲವಾಗಿ ಪ್ರತಿಪಾದಿಸಿದರು. ಹಿಂದೂ ಧರ್ಮ ಎಂಬುದಿಲ್ಲ, ಬ್ರಾಹ್ಮಣ ಧರ್ಮ/ವೈದಿಕ ಧರ್ಮ ಎಂಬುವುದು ನಮ್ಮ ಸಮಾಜದಲ್ಲಿರುವುದು. ಈ ಪುರೋಹಿತಶಾಹಿ ಧರ್ಮವು ಧರ್ಮದ ಹೆಸರಿನಲ್ಲಿ ಅಧರ್ಮದ ಕೆಲಸವನ್ನು ಮಾಡುತ್ತಿದೆ. ಧರ್ಮವನ್ನು ಹೆಸರಿಸುತ್ತ ಅಸಹನೆಯನ್ನು ಮತ್ತು ಶೋಷಣೆಯನ್ನು ಸ್ಥಿರೀಕರಿಸುವ ಐಡಿಯಾಲಜಿಯನ್ನು ವ್ಯವಸ್ಥಿತವಾಗಿ ಪ್ರಚಾರಪಡಿಸುತ್ತಿದೆ ಎಂಬುದನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದರು.



ಬ್ರಾಹ್ಮಣಿಕೆಯ ಸಂಕೇತವಾದ 'ಮನು ಧರ್ಮಶಾಸ್ತ್ರ' ಮಹಿಳೆಯನ್ನು ಶೂದ್ರ ಸಮಾನಳೆಂದು ಬಗೆದಿದೆ. ಅವಳಿಗೆ ಸ್ವಾತಂತ್ರ್ಯ ಸಲ್ಲ, ಪತಿಯೇ ಪರದೈವ ಎಂಬಿತ್ಯಾದಿ ಅವಿವೇಕದ ಮತ್ತು ಅತಾರ್ಕಿಕವಾದ ಸುಳ್ಳುಗಳನ್ನೇ ಪದೇಪದೇ ಹೇಳಿ ಸ್ತ್ರೀಯರು ಅಂತಹ ವಿಚಾರಗಳನ್ನೇ ಮಾನಸಿಕವಾಗಿ ಸ್ವೀಕರಿಸುವಂತೆ ಒತ್ತಾಯಿಸಲಾಗಿದೆ. ಭಾರತೀಯ ಸಮಾಜದಲ್ಲಿ ಶೋಷಣೆಯ ಹಿಂದೆ ಧರ್ಮವೇ ಮೂಲ ಕಾರಣವಾಗಿದೆ ಎಂಬುವುದನ್ನು ಒರೆಗಲ್ಲಿಗೆ ಹಚ್ಚಿದರು.

ಮುಸ್ಲಿಂ ಸ್ತ್ರೀಯರ ಬುರ್ಖಾ ಪದ್ಧತಿಯನ್ನು ಉದಾಹರಿಸುತ್ತ ಹಿಂದೂ ಸ್ತ್ರೀಯರು ಅವರಿಗಿಂತ ಹೆಚ್ಚು ಸ್ವತಂತ್ರರು ಎಂಬ ದಾರಿ ತಪ್ಪಿಸುವ ಮನುವಾದಿಗಳ ವಾದವನ್ನು ತಿರಸ್ಕರಿಸುತ್ತ, ಕಾನೂನಿನ ಮತ್ತು ಧರ್ಮದ ಚೌಕಟ್ಟಿನಲ್ಲಿ ಮುಸ್ಲಿಂ ಸ್ತ್ರೀಯರು ಹಿಂದೂ ಸ್ತ್ರೀಯರಿಗಿಂತ ಹೆಚ್ಚಿನ ಹಕ್ಕುಗಳನ್ನು ಹೊಂದಿದ್ದಾರೆ ಎಂದು ಹೇಳಿದರು. ಬಾಂಗ್ಲಾ, ಪಾಕಿಸ್ತಾನ ಮೊದಲಾದ ಮುಸ್ಲಿಂ ಬಾಹುಳ್ಯ ರಾಷ್ಟ್ರಗಳಲ್ಲಿ ಮುಸ್ಲಿಂ ಮಹಿಳೆಯರು ಅಧಿಕಾರದ ಚುಕ್ಕಾಣಿ ಹಿಡಿದದ್ದನ್ನು ಸ್ಮರಿಸಿದರು. ಮುಸ್ಲಿಂ ಸಮಾಜ ಸಾಂಪ್ರದಾಯಿಕ ಸಮಾಜ ಎಂದಾಗಿದ್ದರೂ ಭಾರತೀಯ ಸಿನಿಮಾ ರಂಗದಲ್ಲಿ ಮುಸ್ಲಿಂ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಪಾದಾರ್ಪಣೆ ಮಾಡಿರುವ ನಿದರ್ಶನಗಳನ್ನು ಕಾಣಬಹುದು. ವಿಶ್ವದ ಸೂಪರ್ ಪವರ್ ಎಂದು ಕರೆಸಿಕೊಳ್ಳುವ ಅಮೆರಿಕದಲ್ಲಿ ಈವರೆಗೆ ಮಹಿಳೆ ಅಧ್ಯಕ್ಷಗಾದಿಯನ್ನು ಅಲಂಕರಿಸಲಿಲ್ಲ ಎಂಬ ಸತ್ಯವನ್ನು ಮತ್ತು ಅಮೆರಿಕದ ಸಂಕುಚಿತ ಮನಸ್ಥಿತಿಯನ್ನು ಬಯಲಿಗೆಳೆದರು.

ಪಬ್ ಸಂಸ್ಕೃತಿಯು ವಿದೇಶಿ ಕಲ್ಚರ್‌ನ ಷಡ್ಯಂತ್ರವಾಗಿರುವುದರಿಂದ ನಮ್ಮ ಸಂಸ್ಕೃತಿಯ ರಕ್ಷಣೆಗಾಗಿ ಪಬ್ ದಾಳಿ ನಡೆಸಲಾಯಿತು ಎಂದು ಸ್ತ್ರೀಯರ ಮೇಲಿನ ದೌರ್ಜನ್ಯವನ್ನು ಮಾನಗೆಟ್ಟು ಸಮರ್ಥಿಸಿಕೊಳ್ಳುವ ಸಂಸ್ಕೃತಿ ರಕ್ಷಕರನ್ನು ಲೇವಡಿ ಮಾಡಿದರು. ನಮ್ಮಲ್ಲಿ ಕಂಡುಬರುತ್ತಿರುವ ಅನಿಷ್ಟ ಪದ್ಧತಿಗಳಾದ ದೇವದಾಸಿ ಪದ್ಧತಿ (ಎಲ್ಲಮ್ಮನ ಗುಡಿ), ಬಸವಿ ಬಿಡುವುದು, ಉಚ್ಚಂಗಿ, ಚಂದ್ರಗುತ್ತಿಗಳಲ್ಲಿನ ಬೆತ್ತಲೆ ಸೇವೆ ಇವೆಲ್ಲ ಯಾವ ಸಂಸ್ಕೃತಿ? ಇಂತಹ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಅನಿಷ್ಟ ಶೋಷಕ ಸಂಸ್ಕೃತಿಗಳ ವಿರುದ್ಧ ಏಕೆ ಈ ಸಂಸ್ಕೃತಿ ರಕ್ಷಕರ ಪಡೆಗಳು ಪ್ರತಿಭಟನೆ ನಡೆಸುವುದಿಲ್ಲ ಎಂದು ಕೇಳುತ್ತ ಸಂಘ ಪರಿವಾರದ ವಿಕೃತ ಮನಸ್ಸು ಮತ್ತು ದ್ವಿಮುಖ ಧೋರಣೆಗಳನ್ನು ಖಂಡಿಸಿದರು.

ಪ್ರಸ್ತುತ ಹಿಂದೂಧರ್ಮ ಎಂದು ಕರೆಸಿಕೊಳ್ಳುತ್ತಿರುವ ಬ್ರಾಹ್ಮಣ ಧರ್ಮದಲ್ಲಿ ಕಂಡುಬರುವ ಅನೇಕ ಕಂದಾಚಾರಗಳು, ಮೂಢ ನಂಬಿಕೆಗಳು ಮತ್ತು ಅಧೀನಗೊಳಿಸಿಕೊಳ್ಳುವ ಮನಸ್ಸು ಸ್ತ್ರೀಯರ ಶೋಷಣೆಗೆ ಮೂಲ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟರು.

ದೇವರು ಧರ್ಮದ ಹೆಸರಿನಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ಸ್ತ್ರೀಯರ ಅಂತಸ್ತನ್ನು, ವ್ಯಕ್ತಿತ್ವವನ್ನು ಹಿಂದೂ ಧರ್ಮ ಹರಣಗೊಳಿಸಿದೆ. ಸ್ತ್ರೀಯರು ಪ್ರಸ್ತುತ ದಿನಗಳಲ್ಲಿ ಸಶಕ್ತೀಕರಣಗೊಳ್ಳುತ್ತಿರುವುದನ್ನು ಸಹಿಸದ ಈ ಮೂಲಭೂತವಾದಿಗಳು ಸ್ತ್ರೀ ಸಮುದಾಯ ತಮ್ಮ ಅಧೀನತೆಯಿಂದ ವಿಮುಕ್ತಗೊಳ್ಳುತ್ತಾರೆ ಎಂಬ ಭಯದಿಂದ ಹೆಚ್ಚುಹೆಚ್ಚಾಗಿ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ವಿಶ್ಲೇಷಿಸಿದರು.

ಮಾನವ ಪ್ರೇಮವನ್ನು ಮೈಗೂಡಿಸಿಕೊಂಡಿರುವ ಬಾಲಮಂದಿರ ಮಡಿಕೇರಿಯ ಅಧೀಕ್ಷರಾದ ಶ್ರೀಮತಿ ಮುಮ್ತಾಜ್ ಮಕ್ಕಳ ಹಕ್ಕುಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಮಾಹಿತಿಗಳನ್ನು ನೀಡಿದರು. ಸಾಮಾಜಿಕ ಸಾಮರಸ್ಯದ ಆಶಯವನ್ನು ಒತ್ತಿ ಹೇಳಿದರು. ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಪ್ರೊಫೆಸರ್

▶▶▶

ಪುಸ್ತಕ ವಿಮರ್ಶೆ

ರಾಷ್ಟ್ರೀಯತೆಯ ಮಗ್ಗುಲುಗಳು

ರಾಷ್ಟ್ರೀಯತೆ ಮತ್ತು ರಾಷ್ಟ್ರೀಯವಾದ ಬಲಪಂಥೀಯ ಇತಿಹಾಸ ಬರಹಗಾರರ ಕೈಯಲ್ಲಿ ಅಪವ್ಯಾಖ್ಯಾನಗೊಳ್ಳುತ್ತಿರುವಂತಹ ಪ್ರಸ್ತುತ ದಿನಮಾನಗಳಲ್ಲಿ "ರಾಷ್ಟ್ರೀಯತೆ: ಇತಿಹಾಸ ಕಥನ" ಕೃತಿಯು ಬಹಳ ಮಹತ್ವದ್ದಾಗಿದೆ ಎಂಬ ಬಗ್ಗೆ ಎರಡು ಮಾತಿಲ್ಲ. ಉದಯರು ಬಲ ಅಥವಾ ಎಡ ಎಂಬ ಯಾವುದೇ ಪಂಥದ ಕಡೆಗೂ ವಾಲದೇ ಬರೆದಿರುವ ಸದರಿ ಕೃತಿಯು ರಾಷ್ಟ್ರೀಯತೆ ಮತ್ತು ರಾಷ್ಟ್ರೀಯವಾದದ ಕುರಿತ ಐತಿಹಾಸಿಕ ಸತ್ಯಗಳನ್ನು ತಮ್ಮ ಮೂಗಿನ ನೇರಕ್ಕೆ ನಿರೂಪಿಸುವವರನ್ನು ನೇರವಾಗಿ ಸ್ಪರ್ಶಿಸದೆ ಪರೋಕ್ಷವಾಗಿ ಅವರಿಗೆ ಬಹಳಷ್ಟು ಕಿರಿಕಿರಿ ಉಂಟು ಮಾಡುವಂತಿದೆ. ಇದರಲ್ಲಿ ರಾಷ್ಟ್ರೀಯವಾದವನ್ನು ಭಾವನಾತ್ಮಕವಾಗಿ ಅಮಾಯಕ ಜನರ ಮಸ್ತಿಷ್ಕಕ್ಕೆ ತುರುಕಿ ಅವರನ್ನು ಕೆರಳಿಸುವವರಿಗೆ ಬಹಳ ಚೆನ್ನಾಗಿಯೇ ರಾಷ್ಟ್ರೀಯತೆಯ ನಿಖರ ವ್ಯಾಖ್ಯೆಯನ್ನು ಹಲವು ಉದಾಹರಣೆಗಳ ಸಮೇತ ಡಾ. ಉ[illegible] ನೀಡುತ್ತಾರೆ.




ರಾಷ್ಟ್ರೀಯತೆ : ಇತಿಹಾಸಕಥನ

ಬಾರ್ಕೂರು ಉದಯ

ಪುಟಗಳು : 140 ಬೆಲೆ: ರೂ. 95/-

ಶಾಲ್ಮ ಪ್ರಕಾಶನ

ಬಾರ್ಕೂರು



ಬೆನೆಡಿಕ್ಟ್ ಎಂಡರ್ಸನ್ ಎಂಬ ಅಂತರ ರಾಷ್ಟ್ರೀಯ ಮಟ್ಟದ ಸಮಾಜಶಾಸ್ತ್ರಜ್ಞ ಮತ್ತು ಪ್ರಾಚ್ಯಶಾಸ್ತ್ರಜ್ಞ ರಾಷ್ಟ್ರೀಯತೆಗೆ ನೀಡಿದ ವ್ಯಾಖ್ಯೆಯು ವಿರುದ್ಧ ಪ್ರಶ್ನೆಗಳನ್ನೆತ್ತುತ್ತ ಉದಯರು ನಮ್ಮ ನಡುವಿನ ಇತರ ಇತಿಹಾಸಕಾರರಿಗಿಂತ ಸ್ವಲ್ಪ ಭಿನ್ನವಾಗಿ ಕಾಣುತ್ತಾರೆ. ಪಾಶ್ಚಾತ್ಯನೊಬ್ಬ ನೀಡಿದ ವ್ಯಾಖ್ಯೆಯನ್ನು ನೇರವಾಗಿ ಪ್ರಶ್ನಿಸುವ ಉದಯರ ಬರಹವು ರಾಷ್ಟ್ರೀಯತೆಯ ವಿವಿಧ ಮುಖಗಳನ್ನು ತೆರೆದಿಡುತ್ತವೆ.

ಭಾರತದ ಸ್ವಾತಂತ್ರ್ಯ ಹೋರಾಟದ ತದ್ವಿರುದ್ಧ ದಿಕ್ಕಿನಲ್ಲಿ ಚಲಿಸಿದ ಇಂಡೋನೇಷಿಯಾ ಸ್ವಾತಂತ್ರ್ಯ ಆಂದೋಲನವನ್ನು ಲೇಖಕರು ವಿಶ್ಲೇಷಿಸುವ ರೀತಿ ಗಮನ ಸೆಳೆಯುತ್ತದೆ. ಭಾರತವನ್ನು ತಮ್ಮ ಗುಲಾಮಗಿರಿಗೆ ತಳ್ಳಿದ್ದ ಬ್ರಿಟಿಷರು ಇಲ್ಲಿ ಒಡೆದು ಆಳುವ ನೀತಿ (Divide and rule)ಯನ್ನು ಬಳಸಿ ಜನರನ್ನು ಜಾತಿ ಧರ್ಮದ ಆಧಾರದಲ್ಲಿ ವಿಭಜಿಸುವ ಪ್ರಯತ್ನ ಮಾಡಿ ಅದರ ಮೂಲಕ ತಮ್ಮ ಆಳ್ವಿಕೆಯನ್ನು ಸುಸೂತ್ರಗೊಳಿಸಿದರು ಎನ್ನುವುದು ನಮಗೆಲ್ಲಾ ತಿಳಿದ ವಿಚಾರ. ಆದರೆ ಇಂಡೋನೇಷಿಯಾವನ್ನು ತಮ್ಮ ವಸಾಹತಾಗಿಸಿದ್ದ ಡಚ್ಚರು ಅಲ್ಲಿನ ಜನರಲ್ಲಿ ಇರದಿದ್ದ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿದ್ದು, ಅವರಲ್ಲಿ ನಮಗಿಂತ ಹೆಚ್ಚಿನ ಭಾಷಾ ವೈವಿಧ್ಯತೆಗಳು, ಸಾಂಸ್ಕೃತಿಕ ವೈವಿಧ್ಯತೆಗಳಿದ್ದಾಗ್ಯೂ ಒಟ್ಟಾರೆಯಾಗಿ ಅವರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಡಚ್ಚರು ಬಿತ್ತಿದ್ದನ್ನು ಲೇಖಕರು ವಿವರಿಸುತ್ತಾರೆ. ಅದನ್ನು ನೋಡಿದಾಗ ಬ್ರಿಟಿಷರು ಭಾರತೀಯರ ಶತ್ರುಗಳಾಗಿದ್ದರೆ, ಇತಿಹಾಸದಲ್ಲಿ ಯಾವತ್ತೂ ಒಂದು ಏಕೀಕೃತ ರಾಜಕೀಯ ವ್ಯವಸ್ಥೆಗೆ ಒಳಪಟ್ಟಿರದ, ನೂರಾರು ದ್ವೀಪ ಸಮೂಹಗಳ ಒಕ್ಕೂಟವಾದ, ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯ ಮತ್ತು ಸುಮಾರು 468 ವಿವಿಧ ಭಾಷೆಗಳನ್ನಾಡುವ ಇಂಡೋನೇಷಿಯಾದ ಜನರನ್ನು ಏಕರಾಷ್ಟ್ರೀಯತೆಯೆಡೆಗೆ ಒಯ್ಯಲು ಡಚ್ಚರ ವಸಾಹತುಶಾಹಿಯೇ ದಾರಿ ಮಾಡಿಕೊಟ್ಟಿತು ಎಂಬುದು ಮನದಟ್ಟಾಗುತ್ತದೆ.

ಡಚ್ಚರು ತಮ್ಮ ಅನುಕೂಲತೆಗಾಗಿ ತಮ್ಮ ವಸಾಹತಾದ ಇಂಡೋನೇಷಿಯಾದಲ್ಲಿ ಜಾರಿಗೆ ತಂದ ಏಕರೂಪೀ ಶಿಕ್ಷಣ ಪದ್ಧತಿ ಮತ್ತು ಡಚ್ ಪ್ರಭುತ್ವದ ರಾಜಕೀಯ ಏಕೀಕರಣ ಇಂಡೋನೇಷಿಯಾದಲ್ಲಿ ಸ್ವಾತಂತ್ರ್ಯ ಆಂದೋಲನವನ್ನು ಮತ್ತು ರಾಷ್ಟ್ರೀಯವಾದಿ ನಾಯಕರನ್ನು ರೂಪಿಸುವಲ್ಲಿ ನೆರವಾಯಿತು. ಇದನ್ನು ಡಚ್ಚರ ಪೆದ್ದುತನವೆಂದೂ ವಿಶ್ಲೇಷಿಸಬಹುದು. ಅಥವಾ ಪರಿಸ್ಥಿತಿಯ ಲಾಭ ಪಡೆಯಲು ಇಂಡೋನೇಷಿಯಾದ ರಾಷ್ಟ್ರೀಯವಾದಿ ನಾಯಕರು ತೋರಿಸಿದ ಸಮಯಪ್ರಜ್ಞೆ, ಮತ್ತು ಬುದ್ಧಿವಂತಿಕೆಯೆಂದೂ ವಿಶ್ಲೇಷಿಸಬಹುದು. ಇಲ್ಲಿ ಲೇಖಕರು ಸ್ಪಷ್ಟವಾಗಿ ಇಂತಹದ್ದೇ ತೀರ್ಪು ನೀಡುವುದಿಲ್ಲ. ಓದುಗರಿಗೆ ಅರ್ಥಮಾಡಿ ಕೊಡುತ್ತಾರಷ್ಟೆ.

"ಇರಾನ್‌ನಲ್ಲಿರಾಷ್ಟ್ರೀಯ ಆಂದೋಲನ: ಪ್ರಭುತ್ವ ಮತ್ತು ಧರ್ಮ" ಎಂಬ ಅಧ್ಯಾಯದಲ್ಲಿ ಲೇಖಕರು ಒಬ್ಬ ಇತಿಹಾಸಕಾರನಿಗಿಂತಲೂ ಹೆಚ್ಚಾಗಿ ಒಬ್ಬ ಪರಿಣತ ರಾಜನೀತಿ ಶಾಸ್ತ್ರಜ್ಞನಂತೆ ಇರಾನ್‌ನ ರಾಜಕೀಯದಲ್ಲಿ ಧರ್ಮದ ಪ್ರಭಾವದ ಕುರಿತಂತೆ ಬಹಳ ವಸ್ತುನಿಷ್ಠವಾಗಿ ಬೆಳಕು ಚೆಲ್ಲಿದ್ದಾರೆ.

ಇನ್ನು 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿವಿಧ ಮಗ್ಗುಲುಗಳ ಕುರಿತಂತೆ ವಿಭಿನ್ನ ದೃಷ್ಟಿಕೋನದಲ್ಲಿ ಲೇಖಕರು ಚರ್ಚಿಸುತ್ತಾರೆ. ಒಟ್ಟಾರೆಯಾಗಿ ಲೇಖಕರು ಒಪ್ಪಿತ ಸತ್ಯ (accepted truth)ವನ್ನು ಪ್ರಶ್ನೆ ಮಾಡುತ್ತಾ ಓದುಗರು ಆ ಕುರಿತಂತೆ ಹೊಸ ದೃಷ್ಟಿಕೋನದಲ್ಲಿ ಚಿಂತಿಸುವಂತೆ ಮಾಡುತ್ತಾರೆ.

ಕೊನೆಯ ಅಧ್ಯಾಯದಲ್ಲಿ ರಾಜಾರಾವ್ ಅವರ 'ಕಾಂತಾಪುರ' ಎಂಬ ಐತಿಹಾಸಿಕ ಕಾದಂಬರಿಯಲ್ಲಿ ಬರುವ ಗಾಂಧಿವಾದಿ ಕಥಾನಾಯಕನ ಕುರಿತು ಕಾಂತಾಪುರ ಎಂಬ ಹಳ್ಳಿಯ ಜನರಿಗೆ ಇರುವ ಭಕ್ತಿಯುತ ಭಾವನೆಗಳು ಯಾವ ರೀತಿಯಲ್ಲಿ ಗಾಂಧಿವಾದದ ಅತಿರೇಕತೆಯನ್ನು ಬಿಂಬಿಸುತ್ತದೆ ಎಂದು ಎಳೆಎಳೆಯಾಗಿ ಲೇಖಕರು ಬಿಡಿಸುತ್ತಾರೆ. ಕಾಂತಾಪುರದ ಕಥಾನಾಯಕ ಮೂರ್ತಿಯಲ್ಲಿ ಸುಪ್ತವಾಗಿ ಅಡಗಿರುವ ಬ್ರಾಹ್ಮಣಶಾಹಿ ಜಾತಿಪ್ರಜ್ಞೆಯನ್ನು ಡಾ. ಬಾರ್ಕೂರು ಉದಯ ವಿಮರ್ಶಾತ್ಮಕವಾಗಿ ಅನಾವರಣಗೊಳಿಸುತ್ತಾರೆ. ಗಾಂಧಿವಾದವು ರಾಷ್ಟ್ರೀಯವಾದದ ಇನ್ನೊಂದು ಹೆಸರೆಂಬಂತೆ ಆ ಕಾದಂಬರಿಯಲ್ಲಿ ಅದರ ಲೇಖಕ ರಾಜಾರಾವ್ ಬಿಂಬಿಸುವುದನ್ನು ಉದಯರು ಒಂದು ವಿಧದ ಭ್ರಾಂತಿಯೆಂದು ಆ ಕುರಿತ ಚರ್ಚೆಯ ಕೊನೆಯಲ್ಲಿ ಸಾಬೀತುಪಡಿಸುತ್ತಾರೆ.

'ರಾಷ್ಟ್ರೀಯತೆ: ಇತಿಹಾಸ ಕಥನ'ವು ಒಂದು ಉತ್ತಮ ವಿಶ್ಲೇಷಣಾ ಕೃತಿ ಆದರೆ ಇದರಲ್ಲಿ ಲೇಖಕರು ಬಳಸುವ ಭಾಷೆಯು ಸಾಮಾನ್ಯ ಓದುಗನಿಗೆ ಒಂದೇ ಓದಿನಲ್ಲಿ ಅರ್ಥೈಸಿಕೊಳ್ಳುವಷ್ಟು ಸುಲಭವಾಗಿಲ್ಲ. ಅಥವಾ ಓದಿಸುವ ಗುಣವಿಲ್ಲದ, ಲಾಲಿತ್ಯವಿಲ್ಲದ, ನೀರಸಭಾಷಾ ಬಳಕೆಯೇ ಇಂತಹ ಉತ್ತಮ ಗುಣಮಟ್ಟದ ಕೃತಿಯಲ್ಲಿ ಕಾಣಸಿಗುವ ಪುಟ್ಟ ದೌರ್ಬಲ್ಯ.

● ಇಸ್ಮತ್ ಪಜೀರ್

...ಶ್ ಶಂಕರ್ ಸ್ಲೈಡ್ ಶೋನ ಮೂಲಕ ನಮ್ಮ ...ಜದಲ್ಲಿರುವ ಅನಿಷ್ಟ ಪದ್ಧತಿಗಳಲ್ಲಿ ಒಂದಾದ ...ಾಸಿ ಪದ್ಧತಿಯ ಬಗ್ಗೆ ಬೆಳಕು ಚೆಲ್ಲಿದರು. ಶಿಕ್ಷಣದ ...ತ್ವವನ್ನು ವಿದ್ಯಾರ್ಥಿಗಳಿಗೆ ಮನದಟ್ಟುಗೊಳಿಸಿದರು. ...ಾಜೀಕರಣ (Socialization) ಪ್ರಕ್ರಿಯೆ ಸ್ತ್ರೀ ...ದಾಯವನ್ನು ಹೇಗೆ ಕೆಳದರ್ಜೆಯ ವ್ಯಕ್ತಿತ್ವ ...ವಿದವರಾಗಿ ಪರಿವರ್ತಿಸುತ್ತದೆ ಎಂಬ ಅಂಶವನ್ನು ...ಎಸಿದರು.


...ಂವಾದ ಕಾರ್ಯಾಗಾರದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿ ...ಯು ಕ್ರಿಯಾಶೀಲವಾಗಿ ಭಾಗವಹಿಸಿ ತಮ್ಮ ಅಭಿ ...ಪ್ರಾಯಗಳನ್ನು ಹಂಚಿಕೊಂಡರು. ಅನುಮಾನಗಳನ್ನು ...ಪರಿಸಿಕೊಂಡರು. ಭಾಗವಹಿಸಿದ ವಿದ್ಯಾರ್ಥಿ ...ದಾಯದಲ್ಲಿ ಹೊಸ ಅರಿವಿನ ಕಳೆ ಗೋಚರಿಸಿತು. ...ಸಂವಿಧಾನ ಆಶಯದಂತೆ ನಡೆದುಕೊಂಡು, ವೈಚಾರಿಕ ...ಧರ್ಮವನ್ನು ಅಳವಡಿಸಿಕೊಂಡರೆ ಮಾತ್ರ ಈ ... ದೌರ್ಜನ್ಯಗಳಿಂದ ಮುಕ್ತಗೊಳ್ಳಬಹುದು ಎಂಬ ...ತಕ್ಕೆ ಕಾರ್ಯಾಗಾರ ಸಾಕ್ಷಿಯಾಯಿತು.

...ಶಭಕ್ತಿ ಜಾಗೃತಿ, ಭಯೋತ್ಪಾದನೆ ನಿರ್ಮೂಲನ ...ಾನ ಮುಂತಾದ ಭಯ ಹುಟ್ಟಿಸುವ ಮತ್ತು ...ನೆ ಸೃಷ್ಟಿಸುವ ಕಾರ್ಯಕ್ರಮಗಳು ಕರ್ನಾಟಕದ ... ಶೈಕ್ಷಣಿಕ ಸಂಸ್ಥೆಗಳಲ್ಲಿ ಎಡೆಬಿಡದೆ ನಡೆಯುತ್ತಿದೆ. ...ಂದರ್ಭದಲ್ಲಿ ಸಕಾಲಿಕವಾದ ಕಾರ್ಯಾಗಾರವನ್ನು ...ೀಜಿಸಿ ವಿದ್ಯಾರ್ಥಿಗಳ ಮುಗ್ಧ ಮನಸ್ಸಿನಲ್ಲಿ ಬೆಳಕು ...ವ ಮೂಲಕ ವಿವೇಕವನ್ನು ಜಾಗೃತಗೊಳಿಸಿದ ...ಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಟಿ. ...ನವರು ಅಭಿನಂದನಾರ್ಹರು.

...ಹಿಳೆಯರ ಸಮಸ್ಯೆ ಕೇವಲ ಮಹಿಳೆಯರ ...ಯಾಗದೆ ಇಡೀ ಸಮಾಜದ ಸಮಸ್ಯೆ ಎಂದು ... ಮಹಿಳೆಯರ ಸ್ಥಾನಮಾನ, ಗೌರವ ಮತ್ತು ...ವನ್ನು ಉಳಿಸಲು ಹಾಗೂ ಮುಂದುವರಿಸಲು ...ವ ಮುಂದಾಗಬೇಕು. ಧರ್ಮ ಕೇಂದ್ರೀಕೃತ ...ದಾಯಿಕತೆಗಳ ನೆಲೆಗಳಲ್ಲಿ ಎಸಗಲ್ಪಡುವ ದೌರ್ಜನ್ಯಗಳ ... ನಾಗರಿಕ ಸಮಾಜ ವೈಚಾರಿಕವಾಗಿ ಒಗ್ಗಟ್ಟಿನಿಂದ ...ಟಿಸಬೇಕು. ಮೇಲ್ಕಾಣಿಸಿದ ಕಾರ್ಯಾಗಾರಗಳು ...ಾದ್ಯಂತ ನಡೆಯಬೇಕು. ವಿಕೃತ ಮತ್ತು ಸಂಕುಚಿತ ...ನ್ಸಗಳು ನಿರ್ನಾಮವಾಗಬೇಕು. ಸಮರಸದಿಂದ ...ವ ಬಹುಮುಖಿ ಸಮಾಜ ಮುಂದುವರಿಯಬೇ...ದೇ ನಮ್ಮೆಲ್ಲರ ಸದಾಶಯ.

...ಂ.ಆರ್.ವಿದ್ಯಾಧರ ರೈ, ಮಡಿಕೇರಿ


...ಹಾಗೇ ಸುಮ್ಮನೆ...



ಆಕಸ್ಮಿಕವಾಗಿ ಸಿಕ್ಕ ಕನ್ನಡಿಗರ ನೆಚ್ಚಿನ ವರಕವಿ ಬೇಂದ್ರೆಯವರ ವಿವಿಧ ಕಾಲಘಟ್ಟದ ಫೋಟೋಗಳು

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 15



ಅಕ್ಷರ ರೂಪ: ಅಕ್ಷತಾ ಕೆ.

ರೈತ ಕೈದಿಯಾಗಿ ಬಳ್ಳಾರಿ ಜೈಲಿನಲ್ಲಿ



ರೈತರ ಮನೆ ಮತ್ತು ಚರಾಸ್ತಿಗಳನ್ನು ಜಪ್ತಿ ಮಾಡಬಾರದೆಂಬ ಹೈಕೋರ್ಟ್‌ನ ಆಜ್ಞೆಯನ್ನು ಧಿಕ್ಕರಿಸಿ ಅಧಿಕಾರಿಗಳು ಸರ್ಕಾರದ ಕುಮ್ಮಕ್ಕಿನಿಂದ ತಮ್ಮ ಉದ್ಧಟತನದ ವರ್ತನೆಯನ್ನು ಮುಂದುವರೆಸಿದರೋ ನಮ್ಮ ಮನೆಗಳನ್ನು ಜಪ್ತಿ ಮಾಡುವ ಅಧಿಕಾರಿಗಳ ಮನೆಯನ್ನು ನಾವು ಜಪ್ತಿ ಮಾಡುತ್ತೇವೆಂದು ರೈತ ಸಂಘದಿಂದ ನಾವು ತಯಾರಾದೆವು. ಈ ನಡುವೆ ಗಾಜನೂರಿನ ರೈತ ಸಂಘದ ಪ್ರಮುಖರಾದ ವಿಜೇಂದ್ರ ಕಾಮತರ ಮನೆಯನ್ನು ಕಾರಣವೇ ಇಲ್ಲದೆ ಅಧಿಕಾರಿಗಳು ಜಪ್ತಿ ಮಾಡಿ ಕಾಮತರ ಪತ್ನಿಯ ಮಾಂಗಲ್ಯವನ್ನು ಬಿಡದೇ ಹೊತ್ತೊಯ್ದಿದ್ದು ಗಾಜನೂರು ಸೇರಿದಂತೆ ಸುತ್ತಮುತ್ತಲ ಗ್ರಾಮದವರನ್ನು ರೊಚ್ಚಿಗೆಬ್ಬಿಸಿತು. ಪ್ರತಿ ಊರಿನಲ್ಲೂ ರೈತರು ಅಧಿಕಾರಿಗಳ ವಿರುದ್ಧ ಕೆರಳಿ ನಿಂತರು. ಆದರೆ ಅಂಥ ಸಂದರ್ಭದಲ್ಲೂ ಯಾವ ರೈತರು ಕಾನೂನನ್ನು ಕೈಗೆ ತೆಗೆದುಕೊಂಡು ಪ್ರಾಮಾಣಿಕ ಅಧಿಕಾರಿಗಳ ಸುದ್ದಿಗೆ ಹೋಗಲಿಲ್ಲ, ಬದಲಿಗೆ ರೈತ ವಿರೋಧಿ ಭ್ರಷ್ಟ ಅಧಿಕಾರಿಗಳ ಮನೆಗಳನ್ನು ಜಪ್ತಿ ಮಾಡಲು ಪ್ರಾರಂಭಿಸಿದೆವು.

ತೀರ್ಥಹಳ್ಳಿಯ ಕೆಂದಾಳ ಬೈಲು ಸೂರ್ಯನಾರಾಯಣರ ಮನೆಯನ್ನು ಜಪ್ತಿ ಮಾಡುವಾಗ ರೆವಿನ್ಯೂ ಅಧಿಕಾರಿಯ ಜೊತೆ ಮೇಘರವಳ್ಳಿಯ ಅರಣ್ಯ ಇಲಾಖೆ ರೇಂಜರ್ ಸಹ ಶಾಮೀಲಾಗಿದ್ದ. ಜೊತೆಗೆ ಈ ರೇಂಜರ್ ಸುಳ್ಳು ಸುಳ್ಳೆ ಈ ಮರ ಕಡಿದಿದ್ದೀಯಾ, ನಾಟಾ ಸಾಗಿಸಿದ್ದೀಯ ಎಂದು ರೈತರನ್ನು ಹಿಂಸಿಸುತಿದ್ದ. ಇವನಿಗೆ ಹೇಗಾದರೂ ಮಾಡಿ ಹದ ಹಾಕಬೇಕು ಅಂತ ರೈತರು ನಮಗೆ ಹೇಳುತ್ತಿದ್ದರು. ಈ ಅಧಿಕಾರಿ ಸರ್ಕಾರಿ ಕಾರನ್ನು ತನ್ನ ಸ್ವಂತಕ್ಕಾಗಿ ಬಳಸಿಕೊಳ್ಳುತ್ತಿದ್ದದುನ್ನು ತಿಳಿದ ನಾವು ತೀರ್ಥಹಳ್ಳಿಯ ವೆಂಕಟೇಶ್ವರ ಚಿತ್ರಮಂದಿರಕ್ಕೆ ಹೆಂಡತಿಯನ್ನು ಕರೆದುಕೊಂಡು ಕಾರಿನಲ್ಲಿ ಸಿನಿಮಾಕ್ಕೆ ಹೋಗಿದ್ದ ಸಂದರ್ಭದಲ್ಲಿ ಅವನ ಕಾರಿಗೆ ಘೆರಾವ್ ಹಾಕಲು ಪ್ಲಾನ್ ಮಾಡಿದೆವು. ಆದರೆ ನಮ್ಮ ಪ್ಲಾನ್ ಅವನಿಗೆ ಅವನ ಡ್ರೈವರ್ ಮೂಲಕ ತಿಳಿದು ಸಿನಿಮಾ ನೋಡುವುದನ್ನು ಅರ್ಧಕ್ಕೆ ಬಿಟ್ಟು ಕತ್ತಲಲ್ಲಿ ಗಂಡಹೆಂಡತಿ ಸಿನಿಮಾ ಮಂದಿರದ ಹಿಂದಿನ ಸೊಪ್ಪುಗುಡ್ಡೆ ಧರೆ ಇಳಿದು ಪರಾರಿಯಾದರು. ನಾವು ಡ್ರೈವರ್‌ನ್ನು ತಡೆದು ಆಫೀಸ್ ವೇಳೆಯಲ್ಲಲ್ಲದೆ ಬೇರೆ ಸಂದರ್ಭದಲ್ಲಿ ಕಾರು ಓಡಿಸಿದ್ರೆ ನಿನ್ನ ವಿರುದ್ಧವೂ ಕ್ರಮ ತಗೋಬೇಕಾಗತ್ತೆ ಎಂದು ಎಚ್ಚರಿಸಿ ಕಳಿಸಿದೆವು. ಶಿವಮೊಗ್ಗದ ಸಿನಿಮಾ ಮಂದಿರಗಳ ಎದುರಂತೂ ಹಲವು ಅಧಿಕಾರಿಗಳು ಸರ್ಕಾರಿ ಕಾರಿನಲ್ಲಿ ಸಿನಿಮಾ ನೋಡಲು ಬಂದು ಈ ಸಂದರ್ಭದಲ್ಲಿ ನಮ್ಮಿಂದ ಘೆರಾವ್ ಹಾಕಿಸಿಕೊಂಡರು.

ಮರುಜಪ್ತಿ ಕಾರ್ಯಕ್ರಮ ನೌಕರ ಸಮೂಹವನ್ನು ಕೆರಳಿಸಿತು. ಅಧಿಕಾರಿಗಳ ಮನೆಯನ್ನು ಈ ಹಳ್ಳಿಗಮಾರರು ಮುಟ್ಟುವುದೆಂದರೇನು. ಸಾಹೇಬರೇ ಎಂದು ಡೊಗ್ಗು ಸಲಾಮು ಹಾಕ್ತಿದ್ದ ರೈತರು ಈಗ 'ನೀನು ಜನರ ದುಡ್ಡನ್ನು ತಿಂತಾ ಇರುವ ನೌಕರ. ತಗೋ ನಿನ್ನ ಮನೆ ಜಪ್ತಿ ನೋಟೀಸ್. ಏನೇನು ಸಂಪಾದಿಸಿದೀಯ ಲೆಕ್ಕ ಕೊಡು. ಅಕ್ರಮ ಯಾವುದು ಸಕ್ರಮ ಯಾವುದು ನಾವು ಹೇಳ್ತೀವಿ' ಎಂದು ಎದುರು ನಿಂತರೋ ಅಧಿಕಾರಿ ಸಮೂಹ ಕೆರಳಿತು. ಭ್ರಷ್ಟ ಅಧಿಕಾರಿಗಳ ಮನೆ ಜಪ್ತಿ ಮಾಡಿದ ರೈತರ ಮೇಲೆ ಡಕಾಯಿತಿ ಮಾಡಿದ್ದಾರೆ ಎಂಬ ಆರೋಪ ಹೊರಿಸಿ ಪೊಲೀಸ್ ಠಾಣೆಗೆ ತಳ್ಳಿ ಹಿಂಸಿಸಲಾಯಿತು. ರೈತರ ಮನೆ ಜಪ್ತಿ ಮಾಡಿದಾಗ ಅದು ಅಧಿಕಾರಿಗಳ ಕರ್ತವ್ಯವಾಗಿ ಕಂಡಿತು. ಅದೇ ರೈತರು ಅಧಿಕಾರಿಗಳ ಮನೆ ಜಪ್ತಿ ಮಾಡಿದಾಗ ಅದಕ್ಕೆ ಡಕಾಯಿತಿಯ ರೂಪ ಕೊಡಲಾಯಿತು.

ಆದರೆ ಪೊಲೀಸರ ಹಿಂಸೆಗೆ ಹೆದರಿ ರೈತರು ಮರುಜಪ್ತಿ ನಿಲ್ಲಿಸಲಿಲ್ಲ, ಪೊಲೀಸರ ಹಿಂಸೆಯು ನಿಲ್ಲಲಿಲ್ಲ. ಜಪ್ತಿಯ ವಿರುದ್ಧ ಧ್ವನಿ ಎತ್ತಿದ ಪ್ರತಿ ರೈತರ ಮೇಲೂ ನೂರಾರು ಕೇಸ್ ಜಡಿದು ಪೊಲೀಸ್ ಲಾಕಪ್‌ಗೆ ತಳ್ಳಲಾಯಿತು. ಶಿವಮೊಗ್ಗ ಜಿಲ್ಲಾ ಜೈಲು ಆರು ಸಾವಿರ ರೈತ ಸತ್ಯಾಗ್ರಹಿಂಗಳಿಂದ ತುಂಬಿಹೋಗಿತ್ತು, ಇಡೀ ರಾಜ್ಯದ ರೈತರು ಸತ್ಯಾಗ್ರಹಕ್ಕೆ ಇಳಿದಿದ್ದರು. ಶಿವಮೊಗ್ಗ ಜೈಲಲ್ಲಿ ಜಾಗ ಸಾಲದೆ ನಮ್ಮನ್ನು ಬಳ್ಳಾರಿ ಜೈಲಿಗೆ ತಳ್ಳಿದ್ದರು. ಒಟ್ಟು ಐನೂರಕ್ಕೂ ಹೆಚ್ಚು ರೈತ ಸತ್ಯಾಗ್ರಹಿಗಳು ಬಳ್ಳಾರಿ ಜೈಲು ಸೇರಿದ್ದೆವು. ಮತ್ತೂ ರೈತರನ್ನು ಬಂಧಿಸಿ ಬಳ್ಳಾರಿ ಜೈಲಿಗೆ ತಳ್ಳುತ್ತಲೇ ಇದ್ದರು. ಜೈಲಿಗೆ ಬಂದ ಮರುದಿನವೇ ಬೆಳಗಾವಿ ಜೈಲಿನಲ್ಲಿ ರೈತಸತ್ಯಾಗ್ರಹಿಂಗಳಿಗೂ ಮತ್ತು ಅಲ್ಲಿದ್ದ ಕೈದಿಗಳಿಗೂ ಹೊಡೆದಾಟವಾದ ಸುದ್ದಿ ಗೊತ್ತಾಯಿತು.

ಅದಾಗಿದ್ದು ಹೀಗೆ: ಜೈಲಿನಲ್ಲಿ ಅಡುಗೆ ಮಾಡೋದು ಬಡಿಸೋದು ಎಲ್ಲ ಕೈದಿಗಳೇ. ಜೈಲು ಸೇರಿದ ರೈತರು ಊಟ ಬಡಿಸುತ್ತಿದ್ದ ಕೈದಿಗಳಿಗೆ ಮತ್ತೂ ಬಡಿಸ್ರಿ ಎಂದಿದ್ದಾರೆ. ಕೈದಿಗಳು ಇಲ್ಲಿ ಇಷ್ಟೆ ಊಟ ಹಾಕೋದು, ಹೆಚ್ಚು ಹಾಕಲ್ಲ ಎಂದಿದ್ದಾರೆ. ನಾವು ರೈತ ಸತ್ಯಾಗ್ರಹಿಂಗಳು, ನಿಮ್ಮಂಗೆ ಕೊಲೆ ದರೋಡೆ ಮಾಡಿ ಜೈಲು ಸೇರಿಲ್ಲ, ಸತ್ಯಾಗ್ರಹ ಮಾಡಿದ್ದಕ್ಕೆ ನಮ್ಮನ್ನು ಜೈಲಿಗೆ ಹಾಕಿದಾರೆ. ನಮಗೆ ಸರಿಯಾಗಿ ಬಡಿಸಲ್ಲ ಅಂದ್ರೆ ಏನು ಅಂತೇನೋ ಕೇಳಿದ್ದಾರೆ. ಅಡುಗೆ ಮಾಡೋದು ಬಡಿಸೋದು ಎಲ್ಲ ಮಾಡ್ತಿರೋದು ಅಲ್ಲಿದ್ದ ಕೈದಿಗಳೇ. ಅಂತದ್ರಲ್ಲಿ ಅವರ ಮೇಲೆ ಎರಗಿ ಹೋದ್ರೆ ಅವರು ಸುಮ್ಮನಿರ್ತಾರ? ಮೊದಲೇ ಅವರು ಹೊಡೆದಾಟದಲ್ಲಿ ಪ್ರೊಫೆಶನಲ್ ಆಗಿರೋರು. ರೈತರನ್ನ ಹಿಡ್ಕಂಡು ಸಮಾ ತದುಕಿದರು. ರೈತ ಸತ್ಯಾಗ್ರಹಿಂಗಳು ಆಸ್ಪತ್ರೆ ಸೇರೋ ಹಾಗಾಯ್ತು. ಇದು ನಮಗೆ ಗೊತ್ತಾಗಿದ್ದು ಪತ್ರಿಕೆಗಳಲ್ಲಿ ಬಂದ ಸುದ್ದಿ ಓದಿ.

ಆಗ ಬೇಸಿಗೆ ಸಮಯ ಬೇರೆ. ಮೊದಲೇ ಬಳ್ಳಾರಿಯ ಬಿಸಿಲು. ಜೈಲು ಶಿಕ್ಷೆಗಿಂತ ಬಿರು ಬೇಸಿಗೆಯ ಬಿಸಿಲಿನ ಶಿಕ್ಷೆಯೇ ಘೋರವಾಗಿತ್ತು. ನೀರಿನ ಟ್ಯಾಂಕರೊಂದು ಜೈಲಿಗೆ ಎಷ್ಟೊತ್ತಿಗೂ ನೀರು ಸರಬರಾಜು ಮಾಡ್ತಾನೆ ಇರೋದು. ಆ ಟ್ಯಾಂಕರ್‌ನ ಡ್ರೈವರ್ ಜೊತೆ ಸ್ನೇಹ ಬೆಳೆಸಿ ಅವನಿಂದ ಪೇಟೆಯಿಂದ ದಿನಪತ್ರಿಕೆಗಳನ್ನು ತರಿಸಿಕೊಂಡೆ. ಮುಖ್ಯವಾಗಿ ನನಗೆ ಲಂಕೇಶ್ ಪತ್ರಿಕೆ ಬೇಕಾಗಿತ್ತು. ಲಂಕೇಶ್ ಪತ್ರಿಕೆಯ ಆಗಿನ ಶಿವಮೊಗ್ಗ ಜಿಲ್ಲಾ ವರದಿಗಾರನಾದ ನಾನು ಬಳ್ಳಾರಿ ಜೈಲಿನ ಸುದ್ದಿಯನ್ನು ಕಳಿಸಿಕೊಡಬೇಕಿತ್ತು. ಹೀಗೆ ತರಿಸಿದ ಪತ್ರಿಕೆಗಳಿಂದ ನಮಗೆ ಬೆಳಗಾವಿ ಜೈಲಿನಲ್ಲಿ ನಡೆದ ಘಟನೆ ಗೊತ್ತಾಯಿತು. ಜೊತೆಗೆ ನಾವು ಸುಮ್ಮನಿದ್ದರೆ ಬೆಳಗಾವಿ ಜೈಲಿನಲ್ಲಿ ನಡೆದ ಅವಘಡಕ್ಕಿಂತ ದೊಡ್ಡ ಪ್ರಮಾಣದಲ್ಲಿ ಬಳ್ಳಾರಿ ಜೈಲಿನಲ್ಲಿ ನಡೆಯುವ ಸಂಭವ ಇದೆ ಅನ್ನೋದು ಅಂದಾಜಾಯಿತು. ಯಾಕೆಂದರೆ ಅತಿ ಹೆಚ್ಚಿನ ರೈತ ಸತ್ಯಾಗ್ರಹಿಂಗಳನ್ನು ಬಳ್ಳಾರಿ ಜೈಲಿನಲ್ಲಿಟ್ಟಿದ್ದರು. ನಾವು ಒಬ್ಬಬ್ಬರಿದ್ದರೆ ಬಾಲ ಮಡಚಿಕೊಂಡು ಇರ್ತೀವಿ, ಅದೇ ನಮ್ಮದೊಂದು ಸೈನ್ಯ ಆಗಿ ಬಿಟ್ಟರೆ ನಮಗೆ ವಿಶೇಷ ಶಕ್ತಿ ಬಂದು ಬಿಡತ್ತೆ. ಜಗಳ, ಹೊಡೆದಾಟ ಎಲ್ಲದಕ್ಕೂ ಸಿದ್ದರಾಗ್ತೀವಿ.

ಇಷ್ಟರೊಳಗೆ ಹಲವಾರು ಜನ ರೈತರು ಜೈಲಿಗೆ ನೀರು ಸಪ್ಲೈ ಮಾಡ್ತಿದ್ದ ಟ್ಯಾಂಕರ್ ಡ್ರೈವರ್‌ನನ್ನು ಪುಸಲಾಯಿಸಿ - ಅವನು ಒಪ್ಪದಿದ್ದ ಸಂದರ್ಭದಲ್ಲಿ ಬೆದರಿಕೆ ಹಾಕಿ - ಅವನಿಂದ ಹೆಂಡ, ಬೀಡಿ, ಸಿಗರೇಟು ತರಿಸಿಕೊಳ್ಳೋಕು ಪ್ರಾರಂಭಿಸಿದ್ದರು. ಇದೆಲ್ಲ ನಮ್ಮ ಚಳವಳಿಯನ್ನು ಎಲ್ಲಿಗೆ ಒಯ್ದು ಮುಟ್ಟಿಸ್ತದೆ ಎಂಬ ಹೆದರಿಕೆ ನಮ್ಮಲ್ಲಿ ಕೆಲವರಿಗೆ ಕಾಡಲು ಶುರುವಾಗಿತ್ತು. ಇದಕ್ಕೂ ಮೊದಲೇ ಅಂದ್ರೆ 80 ರಲ್ಲಿ ರಸ್ತೆ ತಡೆ ಮಾಡಿ ಜೈಲಿಗೆ ಹೋದ್ವಲ್ಲ, ಆವಾಗಲೇ ಶಿವಮೊಗ್ಗ ಜೈಲಿನಲ್ಲಿ ಒಬ್ಬ ಕೈದಿ ರೈತರ ಸಹಾಯದಿಂದ ಜೈಲಿನಿಂದ ಪರಾರಿಯಾಗಿ ಜೈಲರ್ ಕೆಲಸ ಕಳೆದುಕೊಳ್ಳುವ ಹಾಗಾಗಿತ್ತು.

ಇಂಥ ಘಟನೆಗಳು ಇಲ್ಲೂ ಮರುಕಳಿಸಬಾರದು ಅಂತ್ಹೇಳಿ ಜೈಲಿನಲ್ಲಿದ್ದ ರೈತ ಸತ್ಯಾಗ್ರಹಿಂಗಳನ್ನೆಲ್ಲ ಒಗ್ಗೂಡಿಸಿ ಬಳ್ಳಾರಿ ಜೈಲು ರೈತ ಸಂಘ ಅಂತ ಸಂಘಟನೆ ಮಾಡಿಕೊಂಡೆವು. ಬಳ್ಳಾರಿ ಜೈಲು ಸೇರಿದವರಲ್ಲಿ ಹೆಚ್ಚಿನವರು ತೀರ್ಥಹಳ್ಳಿ ಮತ್ತು ಭದ್ರಾವತಿ ತಾಲ್ಲೂಕಿನವರೇ ಆದ್ದರಿಂದ, ಅದರಲ್ಲೂ ನಮ್ಮ ಕಾರ್ಯದರ್ಶಿ ಕೋಡ್ಲು ವೆಂಕಟೇಶ, ವಿಜೇಂದ್ರ ಕಾಮತ್, ತೀರ್ಥಹಳ್ಳಿ ಜಗನ್ನಾಥ, ಹೊಳೆಹೊನ್ನೂರಿನ ಈಶಣ್ಣ ಮುತ್ತಿತರ ನಿಕಟವರ್ತಿಗಳೇ ಇದ್ದಿದ್ದರಿಂದ ನಮ್ಮನಮ್ಮಲ್ಲಿ ಪರಸ್ಪರ ಹೊಂದಾಣಿಕೆಯಿತ್ತು, ಅಲ್ಲಿನ ಜೈಲರ್ ಮುತ್ತಿತರ ಅಧಿಕಾರಿಗಳನ್ನು ಕರೆಸಿ ಸಭೆ ಮಾಡಿ "ಜೈಲು ಮ್ಯಾನ್ಯುವಲ್ ಪ್ರಕಾರ ಏನೇನು ಪದಾರ್ಥಗಳು ಮತ್ತು ಮನರಂಜನಾ ಸಾಮಗ್ರಿಗಳನ್ನು ಕೊಡಬೇಕೋ ಕೊಡಿ. ನಾವು ಹೀಗೆ ಸಂಘಟನೆ ಕಟ್ಟಿಕೊಂಡಿದ್ದೀವಿ. ಅದರಡಿಯಲ್ಲಿ ಶಿಸ್ತಿನಲ್ಲಿ ಇರ್ತೀವಿ'' ಎಂದು ಭರವಸೆ ಕೊಟ್ಟೆವು.

ಅವರಿಗೆ ನಮ್ಮ ನಿರ್ಧಾರವೇನೋ ತುಂಬಾ ಇಷ್ಟವಾಯಿತು. ಏಳನೂರರಷ್ಟು ಕೈದಿಗಳನ್ನು ನಿಯಂತ್ರಿಸುವುದೆಂದರೆ ಹುಡುಗಾಟದ ಮಾತೇನೂ ಅಲ್ವಲ್ಲ. ಜೊತೆಗೆ ಅಲ್ಲಿ ಈಗಾಗಲೇ ಇದ್ದು ಶಿಕ್ಷೆ ಅನುಭವಿಸುತ್ತಿರುವ ಕೈದಿಗಳು ನಮ್ಮ ಜೊತೆ ಸೇರಿ ಅವಘಡ ಮಾಡಿದರೆ ಎಂಬ ಭಯ ಕೂಡ ಅವರಲ್ಲಿ ಇದ್ದೇ ಇತ್ತು. ಅದಕ್ಕೆ "ರೈತ ಸತ್ಯಾಗ್ರಹಿಂಗಳೆಲ್ಲ ಒಂದೆ ಕಡೆ ಇರ್ತೀವಿ, ನಮ್ಮ ಅಡುಗೆ ನಾವೇ ಮಾಡಿಕೊಳ್ತೀವಿ'' ಎಂದು ಹೇಳಿದಾಗ ಅವರಿಗೆ ಸಂತೋಷವಾಯ್ತು. ಆದರೆ ಜೈಲ್ ಮ್ಯಾನ್ಯುವಲ್ ಪ್ರಕಾರ ಎಲ್ಲವನ್ನು ತರಿಸಿ ಕೊಡ್ಲಿಕ್ಕೆ ಅಷ್ಟು ದುಡ್ಡಿಲ್ಲ ಎಂದರು. ನಾವು ಪಟ್ಟು ಬಿಡ್ಲಿಲ್ಲ, ಮ್ಯಾನ್ಯುವಲ್‌ನಲ್ಲೇನಿದೆ ಅದನ್ನು ತರಿಸಿ ಕೊಡೋದು ನಿಮ್ಮ ಜವಾಬ್ದಾರಿ ಎಂದೆವು. ಜೈಲು ಮ್ಯಾನ್ಯುವಲ್ ಪ್ರಕಾರ ಏನೇನು ಸಿಗಬೇಕು ಆ ಪದಾರ್ಥಗಳೆಲ್ಲ ಬಂದು ಬಿದ್ದವು. ಈಶಣ್ಣ ಅಡುಗೆಯ ಉಸ್ತುವಾರಿ ವಹಿಸಿಕೊಂಡರು. ಹೊಟ್ಟೆ ತುಂಬಾ ಪ್ರತಿಯೊಬ್ಬರು ಊಟ ಮಾಡುವಷ್ಟು ಅಹಾರ ಪದಾರ್ಥ ಸರಬರಾಜಾಗಿತ್ತು. ಟಿನ್‌ಗಟ್ಟಲೆ ಕೊಬ್ಬರಿ ಎಣ್ಣೆ ಬಂದು ಬಿದ್ದಿತ್ತು. ಎಣ್ಣೆ ಸ್ನಾನ ಮಾಡಲು ಪ್ರಾರಂಭಿಸಿದೆವು. ಬಟ್ಟೆ ಸೋಪು, ಮೈಸೋಪು ಎಲ್ಲ ಕೊಟ್ಟದ್ರು. ಎಲ್ಲರೂ ಪ್ರತಿದಿನ ಸ್ನಾನ ಮಾಡುವುದನ್ನು ಕಡ್ಡಾಯ ಮಾಡಿದೆವು.

ಜೊತೆಗೆ ಮನರಂಜನೆಗಾಗಿ ಅಂತ ಜೈಲ್ ಮ್ಯಾನ್ಯುವಲ್ ಪ್ರಕಾರ ಕೇರಂ, ಚೆಸ್, ಮತ್ತಿತರ ಒಳಾಂಗಣ ಆಟದ ಸಾಮಗ್ರಿಗಳನ್ನು ಕೊಡಿಸಿದ್ದರು. ಸಮಾಜಶಾಸ್ತ್ರದಲ್ಲಿ ಜೈಲಿನ ನಿಯಮಗಳ ಬಗ್ಗೆ ಅಧ್ಯಯನ ಮಾಡ್ತೀವಿ. ನಾನು ಸಮಾಜಶಾಸ್ತ್ರದಲ್ಲಿ ಎಂ.ಎ ಮಾಡಿದ್ದು ಬಳ್ಳಾರಿ ಜೈಲು ವಾಸದ ಸಂದರ್ಭದಲ್ಲಿ ಹೀಗೆ ಉಪಯೋಗಕ್ಕೆ ಬಂತು. ಸೂಗೂರಿನ ಗುರುಚನ್ನಬಸವೇಶ್ವರ ಯುವಕ ಮಂಡಳಿಯ ಬಹಳಷ್ಟು ಸದಸ್ಯರು ರೈತ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಜೈಲು ಸೇರಿದ್ದರು. ಅವರಿಂದ ದಿನ ಸಂಜೆ ಜೈಲಿನಲ್ಲಿ ಭಜನಾ ಕಾರ್ಯಕ್ರಮ ಇರುತ್ತಿತ್ತು. ಭಜನೆ ಮಾಡಲು ಜೈಲಿನ ಸಾಮಾನ್ಯ ಕೈದಿಗಳು ಬಂದು ನಮ್ಮ ಜೊತೆ ಸೇರುತ್ತಿದ್ದರು. ಬಂದವರು ಭಜನೆ ಇತ್ಯಾದಿಗಳಿಂದೆಲ್ಲ ಪ್ರಭಾವಿತರಾಗಿ ಅಲ್ಲಿಂದ ಹೋಗುತ್ತಲೇ ಇರಲಿಲ್ಲ. ಅವರನ್ನು ಪೊಲೀಸರಿಗೆ ಕಾಣದಂತೆ ನಮ್ಮ ಜೊತೆ ಅಡಗಿಸಿಟ್ಟುಕೊಳ್ಳಬೇಕಾಗಿತ್ತು.

ಬಸವಜಯಂತಿ ದಿನವಂತೂ ಇಡೀ ಜೈಲನ್ನೆ ಅಲಂಕರಿಸಿ ಮೈಕ್ ತರಿಸಿ ಜೀವಂತ ಎತ್ತುಗಳನ್ನು ತರಿಸಿ ಅವಕ್ಕೆ ಅಲಂಕಾರ ಮಾಡಿ, ಗೋಧಿ ಪಾಯಸ ಮಾಡಿಸಿ, ವಿವಿಧ ಸ್ಪರ್ಧೆ ನಡೆಸಿ ಜೈಲರ್ ಮತ್ತಿತರ ಅಧಿಕಾರಿಗಳನ್ನು ಕರೆಸಿ ಅವರಿಂದ ಬಹುಮಾನ ಕೊಡಿಸಿ ಜೋರಾಗಿ ಜೈಲಿನಲ್ಲಿ ಹಬ್ಬ ಮಾಡಿದ್ದೆವು. [illegible] ಹದಿನೈದು ಇಪ್ಪತ್ತು ದಿನ ಬಳ್ಳಾರಿ ಜೈಲಿನಲ್ಲಿದ್ದೆವು. ಕೊನೆಗೂ ಗುಂಡೂರಾಯರ ಸರ್ಕಾರ ಮಣಿದು ಯಾವುದೇ ಷರತ್ತಿಲ್ಲದೆ ನಮ್ಮನ್ನು ಬಿಡುಗಡೆ ಮಾಡಿತ್ತು. ನಮ್ಮ ಜೈಲುವಾಸ ಮುಗಿದು ಬಿಡುಗಡೆಯಾಗಿ ಬರುವಾಗ ಜೈಲಿನಲ್ಲಿದ್ದ ಕೈದಿಗಳೆಲ್ಲ ಅಳುತ್ತಾ ನಮ್ಮನ್ನು [illegible]

[illegible]

ಕಾಂಗ್ರೆಸ್ ನೋಡಿದ್ರೆ ವೃದ್ಧಾಶ್ರಮ ನೋಡಿದಂಗಾಯ್ತದೆ

ಉಗ್ರಿ ಬರುವುದನ್ನೆ ಕಾದಿದ್ದ ಸೀರ ಅವನು ಬಂದ ಕೂಡಲೇ.

"ಸಂಜಯಗಾಂಧಿ ಮಗ ಸಾಬರ ಬೋದನಂತೆ ನಿಜವೇನ್ಲ ಉಗ್ರಿ?" ಎಂದ.

"ಊ ಕಣ ಮಾವ. ಬಾಯಿಗೆ ಬಂದಂಗೆ ಬೋದುಬುಟ್ಟದೆ ಪೋಲಿ ಮುಂಡೆದು."

"ಸಂಜೆಗಾಂಧಿ ಮಗಾಗ್ಲೆ ಮೆಜಾರಿಟಿಗೆ ಬಂದಿದ್ದನೆ?" ಎಂದ ಕಾಳಮಾವ.

ಬಯಲುಸೀಮೆ ಕಟ್ಟೆಪುರಾಣ

▸▸ಬಿ. ಚಂದ್ರೇಗೌಡ

"ಸಂಜಯಗಾಂಧಿ ಸತ್ತಾಗಲೆ ಇಪ್ಪತ್ತೊಂಬತ್ತು ವರ್ಷಾಯ್ತು ಬತ್ತು ಕಣಮಾವ. ಇನ್ನ ಅವುನ ಮಗನಿಗೆ ಮುವ್ವತ್ತರ ಮ್ಯಾಲಾಗಿಲವೆ" ಎಂದ ಉಗ್ರಿ.

"ಆಗ್ಯದೆ ಬುಡು."

"ಆದುತಾನೆ ಏನು ಮಾಡಿ. ವಳ್ಳೆ ಬುದ್ದಿ ಕಲ್ತಿಲ್ಲ, ಯಂಗೆ ಮಾತಾಡಬೇಕು ಅನ್ನದೆ ಗೊತ್ತಿಲ್ಲ, ಹೈಲುಪೈಲು ಮುಂಡೆದು."

"ಅವುರಪ್ಪನೂ ಅಂಗೆ ಅಲವ ಇದ್ದಿದ್ದು?"

"ಊ, ಅವುನು ಒಂಥರಾ ಇಂಗೇ ಇದ್ದ. ಈರಪ್ಲೇನ್ ಎತ್ತಾಕಿ ಸಾಯದೆಯಿದ್ರೆ ಏನೇನು ಮಾಡತಿದ್ನೊ ಏನೊ."

"ಅಂಗರಂಥೋನೇನ್ಲ ಅವುನು?"ಎಂದಳು ಜುಮ್ಮಿ.

"ಊ ಕಣೇ. ಸಾಬರಿರೊ ಸ್ಲಂಗ್ಯಲ್ಲ ಬುಲ್ಡೋಜರ್ ತಂದು ಸ್ಥಲಸಮ ಮಾಡಿದ್ದ. ಅವುರನ್ನೆಲ್ಲ ಹಿಡುದು ನರಕಟ್ ಮಾಡಿಸಿದ್ದ. ಅಂತ ಟೇಮಲ್ಲಿ ಹುಟ್ಟರೊ ಈ ಹುಡುಗ ಅವುನಿಗಿಂತ್ಲೂ ಒಂದು ಕೈ ಮುಂದಂತೆ."ಟ

"ಅಂಗುರದೋಳ್ಯಾವು ಉದ್ದಾರಾಗಿದ್ದವುಲ ಇಲ್ಲಿ, ಮಪಿ ದಿನ ಅಂಗಾಡತವೆ, ಅಮ್ಯಾಲೆ ಹದಿಗೊಯ್ತವೆ" ಎಂದ ಕಾಳಮಾವ.

"ಅಲ್ಲಾ, ಸಾಬರ ಕೈ ಕತ್ತರಸ್ತಿನಿ, ಕಾಲು ಮುರಿತಿನಿ ಅಂತನಂತಲ್ಲಾ, ಇವುನು ರಾಜಕೀಯದಲ್ಲಿ ಉದ್ದಾರಾದನೆ?"

"ಅಂಗಂದಿದ್ದನೆ?

"ಊ ಕಣ ಮಾವ. ಅವನ ಮಾತ ಟೇಪ್ ಮಾಡಿ ಕಂಡೋಗಿ ಯಲಕ್ಷನ್ ಕಮೀಷನರಿಗೆ ತೋರಿದರಂತೆ. ಆ ಕೂಡ್ಲೆ ಅವುನು ಇಂಥೋನಿಗೆ ಬಜೆಪಿ ಟಿಕೆಟ್ ಕೊಡಬ್ಯಾಡಿ ಅಂದರಂತೆ. ಆದ್ರೆ ಬಜೆಪಿ ಬಡ್ಡೆತ್ತವು ಮದ್ಲೆ ಏತಿ ಅಂದ್ರೆ ಅವು ಪೇತಿ ಅಂತವೆ. ಅಂತವು ಯಲಕ್ಷನ್ ಮಾಡೋರ ಮಾತ ಕೇಳ್ಯವೆ? ಅವುನ್ಗೆ ತಿಕೇಟ ಕೊಡ್ತಿವಿ ಅಂದವಂತೆ."

"ನೋಡು ಮತ್ತೆ,"

"ಲ್ಯಕ್ಕ ಹಾಕು, ಇನ್ಯಂತ ಬಂಡು ಮಂಡ್ಯತ್ತವು."

"ಅಲ್ಲಾ ಕೈಮುರಿತಿನಿ, ಕಾಲು ಮುರಿತಿನಿ ಅಂತ ಹೇಳೋನ ಮಾತಿಗೆ. ಸಪ್ರೋಟು ಕೊಡ್ತಿವಿ ಅನ್ನದಾದ್ರೆ ಅದು ಇವುರು ಬಾಯಿಲೂ ಇರೊ ಮಾತು ಅಂದಂಗಾಯ್ತು " ಎಂದ ಸೀರ.

"ಅಲವೆ ಮತ್ತೆ? ಇವುರಾಡೋ ಮಾತ ಆ ಹುಡುಗ ಆಡ್ತಾ ಅವುನೆ. ಅದ್ಕೆ ಬಜೆಪಿ ಲೀಡ್ರ ್ಯಲ್ಲ ಸಪೋಟು ಕೊಟ್ಟವರೆ.?"

"ಬಜೆಪಿಗಳು ಆಡೋ ಆಟ ನೋಡಿದ್ರೆ ಅಧ್ವಾಣಿ ಪ್ರಧಾನಿ ಆಗಂಗೆ ಕಾಣದಿಲ್ಲ ಅಲವೆ?"

"ನಿನ್ನ ಅನುಮಾನ ನನಿಗೂ ಅದೆ ಕಣಮಾವ. ಆಗೇನೊ ವಾಜಪೇಯಿ ಅಂಥೋನು ಒಂದು ಸತಿ ಆಗ್ಲಿ ಅನ್ನೊ ಭಾವನೆ ಇಡೀ ದೇಶದ ಜನಕೇ ಬಂದಿತ್ತು, ಓಟು ಕೊಟ್ರು, ಅವುನು ಅಧಿಕಾರ ನ್ಯಡಿಸಿ ಮೂಲಿಗೆ ಬಿದ್ದ ಅತ್ತಗೆ. ಅದೇ ಇವತ್ತು ಅಧ್ವಾಣಿ ಮಾಡಬೇಕು ಅನ್ನದು ಬಿಜೆಪಿಗಳಿಗೆ ಇಷ್ಟ ಇಲವಂತೆ. ಜನಗಳಿಗಂತೂ ಇಲ್ಲವೇ ಇಲ್ಲ,"

"ಆಗೇನೊ ರಾಂಮಂದ್ರ ಕಟ್ತಿವಿ ಅಂತ ಹೇಳಿದ್ರು ಕಂಡ್ಯಾ, ಈಗೇನೇಳ್ಯರೂ?" ಎಂದ ಸೀರ.

"ಈಗ ಅವುನ್ಯಾರೊ ಚನಾಗಂದವುನೆ ಕಣಮಾವ 'ನಾವೇನು ಮಂದಿರ ಕಟ್ಟೊ ಕಂತ್ರಾಟ್ರೊ?' ಅಂದವುನೆ!"

"ಅಂಗಂದಿದ್ದನೇ?"

"ಊ, ಅವುನಂದಿರದೂ ಸರಿಯಾಗೇ ಅದೆ. ಅವುರೇ ನಿದ್ರು ಕೆಡವದೆ ವರತೂ ಕಟ್ಟೊರಲ್ಲ, ಅಂಗೇ ನೋಡಿದ್ರೆ ಕಾಂಗ್ರೆಸ್‌ನೋರೆ ಕಣಾಮಾವ ದೇಶ ಕಟ್ಟೊರು" ಎಂದ ಉಗ್ರಿ.

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಬಜೆಪಿಗಳು ಗುಡಿಗುಂಡಾರ ಮಠ ಕಟ್ಟಕ್ಕೆ ಓಡಾಡಿದ್ರೆ, ಕಾಂಗ್ರೆಸ್‌ನೋರು ಪ್ಯಾಗುಟ್ರಿ, ಕ್ಯರೆ, ಡ್ಯಾಂ ಕಟ್ಟಕ್ಕೆ ಓಡಾಡ್ತರೆ. ಪರೆಗ್‌ಜಾಂಪಲ್ ನಮ್ಮ ಕ್ಲೋಸ್ ಫ್ರೆಂಡ್ ಎಂ.ಪಿ. ಪ್ರಕಾಶ್ ಹೇಳತಾಯಿದ್ರು, ನಿಜವಾಗ್ಲು ಅದು ನಿಜ ಕಣೊ" ಎಂದ ವಾಟಿಸ್ಲೆ.



"ಏನೇಳಿದರಪ್ಪಾ?"

"ನೆಹರು ಪ್ರಧಾನಿಯಾಗಿ ಡ್ಯಾಂ ಕಟ್ಟಿದ, ಪ್ಯಾಕ್ಟರಿ ಹಾಕಿದ, ಹದಿನೆಂಟೊರ್ಸ ಪ್ರಧಾನಿಯಾಗಿ ನಮ್ಮ ದೇಶದಲ್ಲಿ ಡೆಮಾಕ್ರಸಿ ಕಾಲೂರಂಗೆ ಮಾಡಿದ. ಅಕಸ್ಮಾತ್ ಸ್ವಾತಂತ್ರ ಬಂದಾಗ ಬಿಜೆಪಿಗಳ ತರ ಯಾವನಾರ ತರ್ಲೆ ಪ್ರಧಾನಿಯಾಗಿದ್ರೆ ಇವತ್ತು ನಮ್ಮ ದೇಶ ಪಾಕಿಸ್ತಾನದ ತರ ಆಗದು ಅಂತಿದ್ರು ಕಣೊ. ರಿಯಲಿ ಈ ಮಾತ ಒಪ್ಪಿಗಬೇಕಾಯ್ತದೆ."

"ನಿಜ ಕಣೊ, ಬಜೆಪಿಗಳು ತಲೆ ಎತ್ತಿದಾಗ್ಲಿಂದ ನಮ್ಮ ದೇಶಕ್ಕೆ ನೆಮ್ಮದಿ ಅನ್ನದೆಯಿಲ್ಲ,"

"ಆದಕ್ಕೆ ಕಾರಣ ಕಾಂಗ್ರೆಸ್ಸು ಅನ್ನದ ಮರಿಬಾರದು ಕಣೋ ಉಗ್ರೀ. ಅವುರು ಇವತ್ತಿನ ದಿನ ಏನಾಗ್ಯವುರೆ ಅಂದ್ರೇ ಅವುರ ಬಾಲ ಹಿಡದೆತ್ತಕ್ಕೆ ಸೋನಿಯಗಾಂಧಿ ಬರಬೇಕಾಯ್ತು ನೋಡು."

"ಸೋನಿಯಗಾಂಧಿ ನೋಡಕ್ಕೆ ದಾವಣಗ್ಯರಿಗೋ ಗಿದ್ದೇನ್ಲ?" ಎಂದಳು ಜುಮ್ಮಿ.

"ಹೋಗಲಿಲ್ಲ ಕಣಕ್ಕ, ಟಿವಿಲಿ ಬತ್ತದೆ ನೋಡನ ಅಂತ ಇದ್ದೆ. ಆ ಟಿವಿ ಮುಂಡೆ ಮಕ್ಳು ಭರೀ ಅದ್ಯಾವುದೊ ಕ್ರಿಕೆಟ್ ಮ್ಯಾಚ್ ಇಲ್ಲಾದದಿಲ್ಲ, ನ್ಯಾನೊ ಕಾರು ಇನ್ನೇನು ಬಂದೇಬುಡ್ತು ಅಂತ ಇಡೀ ದಿನ ತೋರಿದ್ರೆ, ವರತೂ ಸೋನಿಗಾಂಧಿಯ ಸರಿಯಾಗಿ ತೋರಲೆಯಿಲ್ಲ."

"ಅದ್ಯಂಗೆ ತೋರತರೊ? ಅಲ್ಲಿರೊ ಮುಂಡೆ ಮಕ್ಕಳ ಚರಿತ್ರೆ ನೋಡಿದ್ರೆ ಅವುರಂಗೆಯಪ್ಪ ಇರದು. ಆ ಪಾಕೀಸ್ತಾನದ ಸಾಬರು ಬಾಂಬಾಯಿಗೆ ಬಂದು ಗುಂಡಾರಿಸಿದಾಗ್ಲು, ಇಷ್ಟು ಸುದ್ದಿ ಮಾಡಿರಲಿಲ್ಲವೇನೊ. ಅಷ್ಟು ಸುದ್ದಿ ಮಾಡಿದ್ರು."

ಬುದ್ಧಿಜೀವಿ ಎಂದರೆ ಕಕ್ಕಿಲ್ಲಾಯರಂತಿರಬೇಕು

ಕಳೆದ ಮಾರ್ಚ್ 22ರಂದು ಬೆಂಗಳೂರಿನಲ್ಲಿ 90 ವರ್ಷ ತುಂಬಿದ, ಬಿ.ವಿ.ಕೆ. ಎಂದೇ ಹೆಸರುವಾಸಿಯಾಗಿರುವ ಬೇವಿಂಜೆ ವಿಷ್ಣು ಕಕ್ಕಿಲ್ಲಾಯ ಅವರನ್ನು ಸನ್ಮಾನಿಸಲಾಯಿತು. ಅಂದಿನ ಮುಖ್ಯಮಂತ್ರಿ ದೇವರಾಜ ಅರಸರ ಬೆಂಬಲದಿಂದ ಅತ್ಯಂತ ಪ್ರಗತಿಪರವೆನಿಸಿದ್ದ ಕರ್ನಾಟಕ ಭೂಸುಧಾರಣ ಕಾನೂನನ್ನು ಕಕ್ಕಿಲ್ಲಾಯ ಅವರು ಶಾಂತವೇರಿ ಗೋಪಾಲಗೌಡ ಮತ್ತು ಎಂ. ಎಸ್. ಕೃಷ್ಣನ್‌ರವರೊಡನೆ ರೂಪಿಸಿದವರು. ಅವರ ವ್ಯಕ್ತಿತ್ವ ಮತ್ತು ಬದುಕನ್ನು ಕುರಿತ ಲೇಖನ ಇಲ್ಲಿದೆ.



ಅಂದಿನ ಅಭಿನಂದನಾ ಸಮಾರಂಭದಲ್ಲಿ ಕಕ್ಕಿಲ್ಲಾಯ ಅವರು ಒಂದು ಗಂಟೆಗೂ ಮಿಕ್ಕು, "ಮೇಘ ಗಂಭೀರ ನಿರ್ಘೋಷ" ಎನ್ನುವಂತೆ ಕಂಚಿನ ಕಂಠದ ವೀರಧ್ವನಿಯಲ್ಲಿ ಬಿಗಿದ ಮುಷ್ಟಿಯ ಎತ್ತಿದ ಕೈಯನ್ನು ಮೆರೆಯುತ್ತಾ ನೆಟಿಸಾಟದ ನೋಡಿಯಲ್ಲಿ ನೀಡಿದ ಭಾಷಣ ನೆರೆದಿದ್ದ ಜನಸ್ತೋಮವನ್ನು ದಂಗುಗೊಳಿಸಿತ್ತು, ಅದರ ವೈಖರಿ ಮತ್ತು ಶೈಲಿ, ಪ್ರಕಟವಾದ ಯುವಪೌರುಷ, ಎಷ್ಟು ಆಕರ್ಷಕವಾಗಿತ್ತೋ ಅದಕ್ಕೂ ಮಿಗಿಲಾಗಿತ್ತು ಅದರ ಹೂರಣ. ಪ್ರಸ್ತುತ ಕೋಮುವಾದದ ಆತಂಕಕಾರಿ ಪರಿಸ್ಥಿತಿಯನ್ನು ಎದುರಿಸಿ, ನಾಡಿನ ಐಕಮತ್ಯವನ್ನು ಕಾಪಾಡುವ ಮಾರ್ಗವೇನೆಂದು ವಿಸ್ತಾರವಾಗಿ, ಕಳಕಳಿಯಿಂದ ಚರ್ಚಿಸಿದರು. ಈ ಪರಿಸ್ಥಿತಿಯಿಂದ ನಾವು ಹೊರಬಂದೇ ಬರುತ್ತೇವೆ ಎಂಬ ಆಶಾವಾದದ ಸ್ಫೂರ್ತಿಯನ್ನು ತುಂಬಿಕೊಟ್ಟರು.

ತನ್ನ ಜೀವನದ ಬಹುಭಾಗವನ್ನು ಸಾಮಾಜಿಕ ರಾಜಕೀಯ ಹೋರಾಟಗಳಲ್ಲೇ ಸವೆಸಿರುವ ಈ ಅಜ್ಜನ ವೈಚಾರಿಕ ಸಾಹಿತ್ಯ ಕೊಡುಗೆ 4500 ಪುಟಗಳಿಗೂ ಮಿಕ್ಕಿದೆ. ಸ್ವಾತಂತ್ರ್ಯ ಪೂರ್ವದ ಹತ್ತಾರು ವರ್ಷಗಳು ತೀವ್ರ ಸಂಘರ್ಷಮಯವಾದ ಜೀವನ ಇವರದು. ಹಲವಾರು ಬಾರಿ ಸೆರೆಮನೆಗೆ ಹೋದವರು. ಭೂಗತರಾಗಿ ಸಾಹಸ ನಡೆಸಿದವರು. ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ತಮ್ಮ ವಿವಿಧ ರೂಪದ ಸೃಜನಶೀಲ ಕೊಡುಗೆಗೆ ಮನ್ನಣೆ ಪಡೆದವರು. ಜ್ಞಾನಾರ್ಜನೆ, ಕ್ರಿಯೆಯಲ್ಲಿ ತೊಡಗಿ ಜ್ಞಾನದ ಪರೀಕ್ಷೆ, ಅಲ್ಲಿ ದೊರೆತ ಅನುಭವದಿಂದ ಜ್ಞಾನದ ವಿಸ್ತಾರ, ಎನ್ನುವ ಮಾರ್ಕ್ಸ್ ಸಿದ್ಧಾಂತದ ಒಂದು ಪ್ರತೀಕ ಬಿ.ವಿ.ಕೆ.ಯವರ ಜೀವನ. ಕರ್ನಾಟಕ ಏಕೀಕರಣಕ್ಕೆ ಕಾಂಗ್ರೆಸ್ ಪಕ್ಷ ಹೋರಾಡಲು ಮುಂದೆ ಬರದಿದ್ದಾಗ, ಭಾರತ ಕಮ್ಯೂನಿಸ್ಟ್ ಪಕ್ಷದೊಂದಿಗೆ ಕಣಕ್ಕಿಳಿದು, ಒಂದು ದಶಕದ ಕಾಲ ಚಳವಳಿ ನಡೆಸಿದ ಇವರು ಅಖಂಡ ಕರ್ನಾಟಕ ನಿರ್ಮಾಣ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಸುವರ್ಣ ಕರ್ನಾಟಕ ಸಂದರ್ಭದಲ್ಲಿ 2007ರಲ್ಲಿ ಕರ್ನಾಟಕ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು.

ರಾಜ್ಯಸಭಾ ಸದಸ್ಯರಾಗಿ, ಹನ್ನೊಂದು ವರ್ಷಗಳ ಕಾಲ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ರಾಜ್ಯದ ಎ.ಐ.ಟಿ.ಯು.ಸಿ.ಯನ್ನು ಸಂಗಾತಿ ಎಂ. ಎಸ್. ಕೃಷ್ಣನ್ ಅವರೊಡಗೂಡಿ ಕಟ್ಟಿ ಬೆಳೆಸಿದರು. ರಾಜ್ಯದ ಭಾರತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿಯೂ ದುಡಿದಿರುವ ಈ ತುಂಬಿದ ಜೀವನವನ್ನು ಒಂದೇ ಒಂದು ಮುಖದಿಂದ ನೋಡಿ ವರ್ಣಿಸಲಾಗು ವುದಿಲ್ಲ. ಬಹಳ ತಡವಾಗಿ, ಇನ್ನು ತಾನು ಜೈಲಿಗೆ ಹೋಗು ್ ಸಂದರ್ಭ ಬರದೆಂದು ಅನಿಸಿಕೆ ಬಂದಾಗ, 1961ರಲ್ಲಿ ಮದುವೆ ಯಾದ ಇವರದು ನಾಲ್ಕು ಮಕ್ಕಳ ಸುಂದರ ಸಂಸಾರ. ಒಬ್ಬ ವ್ಯಕ್ತಿ ದಂಗೆಕೋರನಾಗಿ, ಜೈಲುವಾಸ ಅನುಭವಿಸುತ್ತಾ, ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಯೂ, ಸಾಂಸಾರಿಕ ನಾಗಿಯೂ, ಹತ್ತು ಹಲವು ಕಳಕಳಿಗಳನ್ನು ಅಷ್ಟೇ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ನಿರ್ವಹಿಸುವ ಛಲ, ಒಲವು, ಸಾಮರ್ಥ್ಯ ಬಹುಶಃ ಒಬ್ಬ ಕಮ್ಯೂನಿಸ್ಟನಿಗೆ ಮಾತ್ರ ಸಾಧ್ಯವೇ ಎಂಬಂತಿದೆ ಇವರ ಕ್ರಾಂತಿಕಾರಿ ಜೀವನ ಗಾಥೆ!

ಕೆ. ಎಸ್. ಪಾರ್ಥಸಾರಥಿ

ಈ ಸಂಗಾತಿಯ ಜೀವನಯಾತ್ರೆ ಈ ಇಳಿವಯಸ್ಸಿನಲ್ಲಿಯೂ ವೈರಾಗ್ಯದ ಲವಲೇಶವೂ ತಾಕದ ಹರಿವಿನದು. ಈ ನಿರಂತರ ಉತ್ಸಾಹಿ ಆಶಾವಾದಿಯು, ಇಂದೂ, ವಯೋಧರ್ಮದಿಂದ ದೃಷ್ಟಿ ಮಾಂದ್ಯವಿದ್ದರೂ, ಸೋಲದೆ, ನೆರವು ಪಡೆದು, ಓದುತ್ತಾ, ಬರೆಯುತ್ತಾ, ವ್ಯಾಸಂಗ ಮಾಡುತ್ತಾ, ಚಿಂತಿಸುತ್ತಾ, ಯುವಕರನ್ನು ಗುರುತಿಸಿ, ಪ್ರೋತ್ಸಾಹಿಸುತ್ತಾ ಸಮಕಾಲೀನವಾಗಿ ಪ್ರತಿಕ್ರಿಯಿಸುತ್ತಾ ಜೀವಂತವಾಗಿದ್ದಾರೆ. ಹೀಗೆ ಬದುಕಲು ಸಾಧ್ಯವಾಗಿರುವುದು ಅವರ ಸವಕಲಾಗುತ್ತಿರುವ ಶರೀರದ ಸಾಮರ್ಥ್ಯಕ್ಕಿಂತ ಹೆಚ್ಚಾಗಿ, ಅವರು ನಂಬಿರುವ ಧ್ಯೇಯದ ಸ್ಫೂರ್ತಿಯೇ ಕಾರಣವೆನಿಸುತ್ತದೆ. ಬಿ.ವಿ.ಕೆ.ಗೆ ಓದಲು, ಬರೆಯಲು ನೆರವಾಗುವ ಕುಮಾರಿ ಹಲೀಮತ್ ಅ-ಸ-ದಿಯ ಇವರಿಂದ ಸ್ಫೂರ್ತಿ ಪಡೆದ ತರುಣಿ. ಅವರ ಹಲವಾರು ಗಣ್ಯ ಸಮಕಾಲೀನರಂತೆ ಬಿ.ವಿ.ಕೆ. ಕಾಂಗ್ರೆಸ್ ಪಕ್ಷವನ್ನು ಮೊದಲು ಹಾಯ್ದು ಕಮ್ಯೂನಿಸ್ಟರಾದವರಲ್ಲ. ಅವರು ವಿದ್ಯಾರ್ಥಿ ದಶೆಯಲ್ಲೇ ಪಕ್ಷ ಸೇರಿ ಸೈದ್ಧಾಂತಿಕ ಪಾಠ ಮಾಡುತ್ತಿದ್ದವರು.

ಅವರಿಗೆ ಅರ್ಪಿಸಿದ ಸಂಭಾವನಾ ಗ್ರಂಥ "ನಿರಂತರ"ದಲ್ಲಿ ಅವರು ಈ ಗ್ರಂಥಕ್ಕೆಂದೇ ಬರೆದ ಲೇಖನ "ಕೋಮುವಾದದ ವಿರುದ್ಧ ನಮ್ಮ ಹೋರಾಟ" ಅವರ ಜೀವನದ ಧ್ಯೇಯ, ಹೋರಾಟಗಳನ್ನೆಲ್ಲ ಕ್ರೋಢೀಕರಿಸಿ ಬರೆದ ಚರಮ ವಾಕ್ಯದಂತೆ ಮೂಡಿ ಬಂದಿದೆ. ಕೋಮುವಾದದ ಪ್ರತಿಗಾಮಿತ್ವವನ್ನು ಪದರ ಪದರವಾಗಿ ಬಿಡಿಸಿಟ್ಟು, ಅದರ ವಿರುದ್ಧ ಹೋರಾಡುವ ಕ್ರಿಯೆಯನ್ನು 'ಮಾಡು ಇಲ್ಲವೆ ಮಡಿ' ರೂಪದ ತುರ್ತಾದ ಹೋರಾಟವೆಂದು ಹೇಳುವ ಇವರಿಗೆ ಇದು ನಮ್ಮ ರಾಷ್ಟ್ರದ ಐಕ್ಯತೆಗೆ, ಪ್ರಗತಿಗೆ ಇರುವ ಏಕೈಕ ಪ್ರಚಂಡ ಸವಾಲೆಂದು ಕಾಣುತ್ತದೆ. ಪಕ್ಷಾತೀತವಾಗಿ ಎಲ್ಲರೂ ಈ ಹೋರಾಟದಲ್ಲಿ ಒಂದಾಗಿ, ಈ ಫ್ಯಾಸೀ ಧ್ಯೇಯವನ್ನು ಸೋಲಿಸಬೇಕೆನ್ನುತ್ತಾರೆ. ಇದಕ್ಕೆ ಎಲ್ಲರೂ ಒಪ್ಪುವ ವಿಷಯಗಳಿಗೆ ಹೆಚ್ಚು ಒತ್ತುಕೊಡುವ, ಒಡೆಯುವುದಕ್ಕಿಂತ ಕಟ್ಟುವ ಪರಂಪರಾಗತ ಇತ್ಯಾತ್ಮಕ ಸೆಳೆಗಳನ್ನೇ ಪ್ರಚುರಪಡಿಸುವ ಪಂಥಟನೆಗಳು ಅಗತ್ಯವೆನ್ನುತ್ತಾರೆ. ಕೋಮುವಾದ ವಿರೋಧಿ

...ಣಿಯುಗಾಂಧಿ ಬಂದೋದ ಮ್ಯಾಲೆ ಕಾಂಗ್ರೆಸ್ಸಿ
... ಒಂದಾದ್ರ?"
...ವಾಗಿರಂಗೆ ಕಾಣ್ತರೆ ಕಣಮಾವ. ಆ ತುದಿಯಿಂದ
...ಸ್ನಿಂದ ಹಿಡಿದು ಈ ತುದಿ ಸಿದ್ದರಾಮಯ್ಯನವರಿಗೆ
...ಒಂದು ಸೇರಿದ್ರಂತೆ."
...ನ್ರಳೇನಾರ ಅಂದಳೂ ಅಂತ ಸೇರಿಕಂಡವೆ" ಎಂದ


...ಬಗೆ ಆಯ್ತಪ್ಪ"
...ಬುರೀಸ ಹೋಗಿರಲಿಲವೆ ಅಲ್ಲಿಗೆ?" ಎಂದಳು

...ಲ್ಲ ಕಣೇ, ಯಾಕೊ ಅವುನಾಡೊ ಆಟ ನೋಡಿದ್ರೆ
... ಕೈ ಕೊಡಂಗೆ ಕಾಣ್ತಾ ಅವುರೆ."
...ವಾಗ್ಲು ಅಂಬುರೀಸ ಪೂಲಿಸ್ ಪೆಲೊ ಕಣೊ
...ಅಂತ ಟೇಮಲ್ಲಿ ಹೋಗಬೇಕಾಗಿತ್ತು. ಕಾಂಗ್ರೆಸ್ಸಲ್ಲಿ
...ಮುಂದು ನುಗ್ಗಿ ಹೋಗಬೇಕೆ ವರತೂ ಯಾರೂ
...ಲ್ಲ. ಅದ ಇವುನು ತಿಳಕಬೇಕು ಕಣೊ."
...ವಾರ್ಯಾರು ನೋವು ಏನು ಅಂತ ಯಾರಿಗ್ಗೊತ್ತಪ್ಪ?
...ಂಗಾರಪ್ಪನೆ ಬಂದು ಕುಂತವನೆ ಅದೂ ಮಕ್ಕಳ
...ು. ಅವುಂದೊಂತರ ಇದರ ಕತೆ ಕಣೊ ವಾಟಿಸ್ನೆ.
...ದ ಮ್ಯಾಲೆ ಯಲ್ಲವ್ವನ ಗುಡ್ಡುಕೋಯ್ತರಂತೆ ನೋಡು
...ಬಂದವುನತ್ತಗೆ ಕಾಂಗ್ರೆಸ್ಸಿಗೆ."
...ಮ್ಮ ಗುರುನ ಅಪ್ಪು ಕಂಡೆಂ ಮಾಡಬ್ಯಾಡ
...ಉಗ್ರೀ. ಇನ್ನ ನೋಡು ಚುನಾವಣೆ ಯಂಗೆ
...ರತದೆ ಅಂತ."
...ಸರ್ರಾಗಿರಕ್ಕೆ ಮುದುಕ್ರು ಜಾಸ್ತಿಯವರಲ್ಲೊ, ಕಾಂಗ್ರೆಸ್
...ಹಾಯಿದ್ರೆ ವೃದ್ಧರಾಶ್ರಮ ನೋಡಿದಂಗಾಯ್ತದೆ."
...ಸ್ಟರ್ ಉಗ್ರಿ, ಆ ಮಾತ ವಾಪಸ್ ತಗೊ.
...ವಾರ್ಟಿಲೂ ಮುದುಕುರವ್ರೆ. ಕಾಂಗ್ರೆಸ್ಸಲ್ಲಿ ಸ್ವಲುಪ
...ರಬವುದು ಅಷ್ಟೆ."
...ಸ್ತಿಯಿರದರಿಂದ್ಲೇ ಸಮಸ್ಯೆ ಜಾಸ್ತಿ ಕಣೊ. ನೋಡು
...ಲ್ಲಿ ಒಬ್ಬನೇ ಒಬ್ಬ ಮುದುಕವುನೆ. ಅವುನೇಳಿದಂಗೆ
...ಳ್ತರೆ."
ಮಂಜುನಾಥೇನು ಹುಡುಗನೆ?"
...ವುನಿನ್ನೂ ಇದ್ದನೇನ್ಲ?" ಎಂದ ಸೀರ.
...ದಪ್ಪ ಜೋಕು!" ಎಂದ ವಾಟಿಸ್ನೆ.

■

...ದಕ್ಕಿಂತ ಕೋಮುಸೌಹಾರ್ದವೆಂದೇ ಚರ್ಚೆಗೆ
...ಬೇಕು ಎನ್ನುತ್ತಾರೆ. ಕೆ. ಎನ್. ಪಣಿಕ್ಕರ್‌ರವರು
...ಬಿಥಕ್ಕೆ ನೀಡಿರುವ ಲೇಖನ ಇತ್ತೀಚೆಗೆ ಸಾಂಸ್ಕೃತಿಕ
... ಪ್ರವೇಶಮಾಡದೆ ಪ್ರಗತಿಪರ ಶಕ್ತಿಗಳು ಆ
...ನ್ನ ಪ್ರತಿಗಾಮಿಗಳಿಗೆ ಬಿಟ್ಟುಕೊಟ್ಟಿವೆ ಎನ್ನುತ್ತಾರೆ.
...ಪುನಃ ಪಡೆದುಕೊಳ್ಳಬೇಕು ಎನ್ನುತ್ತಾರೆ. ಬಿ.ವಿ.ಕೆ.
...ಧೀಯರು ಈ ಮುನ್ನಾ ಸಾಂಸ್ಕೃತಿಕ
...ಚಿಕೆಗಳಲ್ಲಿ ಪಿ. ಸಿ. ಜೋಶಿಯವರ ನೇತೃತ್ವದಲ್ಲಿ
...ಭಾಗವಹಿಸುತ್ತಿದ್ದರೆಂದು ಮತ್ತೊಂದು ಲೇಖನದಲ್ಲಿ
...ದ್ದಾರೆ.
... ಗ್ರಂಥದಲ್ಲಿ ಸೇರಿರುವ ಒಂದು ಮುಖ್ಯ
...ಪಾಲ್ ಬರಾನನ 'ಬೌದ್ಧಿಕ ವ್ಯಕ್ತಿಯ ಕಟಿಬದ್ಧತೆ'
... ಬುದ್ಧಿಜೀವಿಯ ಲಕ್ಷಣಗಳನ್ನು ಚರ್ಚಿಸುತ್ತದೆ.
...ಇದಕ್ಕೆ ಮುನ್ನ, ಸಿ.ಪಿ.ಸ್ನೋ, ಬುದ್ಧಿಜೀವಿಯು
... ಪ್ರಾಮಾಣಿಕ, ಏಕಾಂಗಿಯಾಗಬೇಕಾದರೂ ಆ
...ದ ವಿಚಲಿತನಾಗುವುದಿಲ್ಲ ಎಂದು ಹೇಳಿದ್ದರೆ,
...ಗೆ ಅದು ಸಾಲದು. ಆತ ಅದರ ಜೊತೆಗೆ,
...ತ ಹೆಚ್ಚಾಗಿ ಮಾನವೀಯತೆಯನ್ನು
...ಸಿಕೊಂಡಿರಬೇಕು ಎನ್ನುತ್ತಾನೆ. ಸಂಗಾತಿ ಬಿ.ವಿ.ಕೆ.
...ಈ ಬುದ್ಧಿಜೀವಿ ಕಲ್ಪನೆಗೆ ಅತ್ಯಂತ ಸಮೀಪವಾಗುವ
... ವ್ಯಕ್ತಿಯಂತೆ ಕಂಡುಬರುತ್ತಾರೆ. ಇಂದಿಗೂ ತಮ್ಮ
...ಯ ಬೇರನ್ನು ಮಾರ್ಕ್ಸ್ ಮಾತ್ರವಲ್ಲದೆ, ಭಾರತದ
...ಯಲ್ಲೇ ಕಾಣಬಲ್ಲ ಇವರು, ಪರಂಪರೆಗೆ ತಾವೇ
...ದಾರರಂತೆ ಬೊಬ್ಬೆಯಿಡುವ ಮತೀಯವಾದಿಗಳಿಗೆ
...ತು ಚರ್ಚಿಸಲು ಸವಾಲೆಸೆಯುತ್ತಾರೆ. ಅವರನ್ನು
...ವಾಗ ಕೆರಳಿದ ವ್ಯಾಘ್ರನಂತೆ ಗುಟುರು ಹಾಕುವ
...ಂದವರ, ಶೋಷಿತರ, ದಲಿತರ, ದಮನಿತರ
...ರೆಯುವಾಗ, ಮಾತನಾಡುವಾಗ, ಮಮ್ಮಲ
...ನ ಕಣ್ಣೀರಿಡುವ, ದನಿಯಾಗುತ್ತಾರೆ. ಕಮ್ಯೂನಿಸ್ಟ್
...ದಿನ ತಮ್ಮ ಏಳುದಶಕಗಳ ಹೋರಾಟದ ನಂಟು
... ತಮ್ಮ ಕುಟುಂಬ ಬಾಂಧವರು ಅಪಾರ
...ಂದ. ತಮ್ಮನ್ನು ನಡೆಸಿಕೊಂಡ ಶುದ್ಧಪ್ರೇಮ
... ಒಬ್ಬ ಮನುಷ್ಯನನ್ನಾಗಿ ಮಾಡಿವೆ ಎನ್ನುವ
... ಬಿ.ವಿ.ಕೆ. ನಮ್ಮ ಪರಂಪರೆಯಲ್ಲಿ ಹೇಳುವ
...ತಂ' ಕಡೆಗೆ ಸೃಜನಶೀಲವಾಗಿ ಬದುಕುತ್ತಾ
...ಮು ಹಾಕುತ್ತಿದ್ದಾರೆ!

■



-ಜೂನ್ 16, 1991

ದತ್ತು ಪುತ್ರರು

"ಇದರಿಂದ ನನಗೆ ಸಿಟ್ಟಿಲ್ಲ, ತೀವ್ರ ನೋವಿದೆ. ಒಂದಾನೊಂದು ಕಾಲದಲ್ಲಿ ನಮ್ಮ ಸಾಹಿತಿಗಳು ಹೇಗಿದ್ದರೆಂದು ನೀವು ಬಲ್ಲಿರಿ. ಇದಕ್ಕೊಂದು ಉದಾಹರಣೆ ಕೊಡುತ್ತೇನೆ. ಚನ್ನಪಟ್ಟಣದಲ್ಲಿ ರಾಮಲಿಂಗಯ್ಯ ಎಂಬ ವ್ಯಕ್ತಿ ಒಂದು ಕಾಲೇಜು ಆರಂಭಿಸಿ ಅದಕ್ಕೆ 'ಕುವೆಂಪು ಕಾಲೇಜು' ಎಂದು ನಾಮಕರಣ ಮಾಡಿದರು. ಈತ ಒಕ್ಕಲಿಗ. ಕುವೆಂಪು ಅವರಿಗೂ ಈ ರಾಮಲಿಂಗಯ್ಯನವರಿಗೂ ಇರುವ ಸಾಮಾನ್ಯ ಅಂಶ (ರಾಮಲಿಂಗಯ್ಯನ ಪ್ರಕಾರ) ಈ ಜಾತಿಯದು. ಕುವೆಂಪುವಿಗೆ ರಾಮಲಿಂಗಯ್ಯ ಹೀಗೆ ಕಾಲೇಜಿಗೆ ನಾಮಕರಣ ಮಾಡಿದ್ದು ನೋಡಿ ಖುಷಿಯಾಗಲಿಲ್ಲ; ಬದಲಾಗಿ ಅನುಮಾನ ಶುರುವಾಯಿತು. ರಾಮಲಿಂಗಯ್ಯ ಈ ಕಾಲೇಜಿನ ಉದ್ಘಾಟನೆಗೆ ಕುವೆಂಪು ಅವರನ್ನು ಕರೆದರು; ಕುವೆಂಪು ಬರಲಿಲ್ಲ, ಆಮೇಲೆ ನೂರಾರು ಸಲ ಹೋಗಿ ಒಮ್ಮೆ ಕಾಲೇಜಿಗೆ ಭೇಟಿಕೊಡಲು ಹೇಳಿದರು. ಈ ರಾಮಲಿಂಗಯ್ಯ ತಮ್ಮನ್ನು ನೋಡಕೂಡದೆಂದು ಕುವೆಂಪು ಹೇಳಿದರು. ಹತ್ತಿರ ಸೇರಿಸಲಿಲ್ಲ.

ಸದರಿ ರಾಮಲಿಂಗಯ್ಯ ಒಮ್ಮೆ ನನ್ನಲ್ಲಿಗೆ ಬಂದು "ನಮ್ಮ ರೂರಲ್ ಕಾಲೇಜಿಗೆ ತೊಂದರೆ ಕೊಡುವುದಕ್ಕಾಗಿ ಸರ್ಕಾರ ಒಂದು ಸರ್ಕಾರೀ ಕಾಲೇಜು ತೆರೆಯುತ್ತಿದೆ. ಇದರಿಂದ ನಮ್ಮ ಕಾಲೇಜಿಗೆ ಯಾರೂ ಸೇರುವುದಿಲ್ಲ" ಎಂದು ಹೇಳಿ ಕುವೆಂಪು ತಮ್ಮನ್ನು ತಿರಸ್ಕರಿಸಿದ ಬಗ್ಗೆ ಹೇಳಿದರು. ವಿವರಗಳನ್ನು ಕೇಳಿದೆ. ಸದರಿ ರಾಮಲಿಂಗಯ್ಯ ಬೆಂಗಳೂರಿನ 'ಲೆಟಿಟ್' ಮನುಷ್ಯ; ನೂರಾರು ಎಕರೆ ಜಮೀನು ಕೊರಡು ಖಾಸಗಿ ಸೈಟ್ ಮಾಡಿ ಕೋಟ್ಯಂತರ ದುಡ್ಡು ಮಾಡಿಕೊಂಡಾತ. ಎಲ್ಲವನ್ನೂ ಹೇಳಿದರು. "ಕುವೆಂಪು ಮಾಡಿದ್ದು ಸರಿ ಯಾಗೇ ಇದೆ. ಹೋಗಿ" ಎಂದು ಹೇಳಿದೆ.

ಎಲ್ಲರೂ ಕೆಡುತ್ತಿದ್ದಂತೆ ಸಾಹಿತಿಗಳು ಕೂಡ ಕೆಟ್ಟುಹೋಗುತ್ತಿದ್ದಾರೆ. ದೇಹದ ಯಾವುದೇ ಭಾಗಕ್ಕೆ ಹತ್ತಿದ ಕ್ಯಾನ್ಸರ್ ಆ ಭಾಗಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ; ಹಾಗೆಯೇ ಇಲ್ಲಿ ರಾಜಕೀಯ, ಸಾಮಾಜಿಕ ಭ್ರಷ್ಟತೆ ಕೂಡ. ಸುಗಮ ಸಂಗೀತಗಾರನೊಬ್ಬ ನನ್ನಲ್ಲಿಗೆ ಬಂದು, "ಸಂಗೀತ ಇರೋದು ರಂಜಿಸಲಿಕ್ಕೆ, ನಾನು ಶ್ರೀಮಂತರನ್ನು ರಂಜಿಸಿ ದುಡ್ಡುಮಾಡ್ತಿದ್ದೇನೆ. ಶ್ರೀಮಂತ ಗೆಳೆಯರು ಊಟ ಮಾಡ್ತಾ, ಹರಟೆ ಕೊಚ್ತಾ ಇದ್ದಾಗ ಅವರ ರಂಜನೆಗಾಗಿ ಸಂಗೀತ ನೀಡ್ತೇನೆ. ತುಂಬ ದುಡ್ಡು ಕೊಡ್ತಾರೆ" ಅಂದ. ನಾನು ಆತನನ್ನು ಹೊಗಳದೆ ಸುಮ್ಮನಿದ್ದಾಗಲೇ ಅವನಿಗೆ ಅನುಮಾನ ಶುರುವಾಗಿತ್ತು, ಆದರೆ ಅನುಮಾನವೆಲ್ಲ ಆತನನ್ನು ಹಿಡಿದಿರಲಾರದು. ಈಚೆಗೆ ಈತ 'ಮೈಸೂರ ಮಲ್ಲಿಗೆ' ಎಂಬ ಸಿನಿಮಾ ಮಾಡುವುದರಲ್ಲಿ ಭಾಗವಹಿಸಿದ. ಖೋಡೆಗಳಿಂದ ಸಾಕಷ್ಟು ಹಣ ಹರಿಯಿತು. ಖೋಡೆಗಳಂತಹ ಕರೆಯುವ ಹಸು ಸಿಕ್ಕರೆ ಸುಮ್ಮನಿರುತ್ತಾನೆಯೇ? ಸದರಿ ಖೋಡೆಗಳಿಂದ ಒಂದು ದೊಡ್ಡ ಸಮಾರಂಭ ಏರ್ಪಡಿಸಿ ನಮ್ಮ ಸಂಗೀತಗಾರರು, ಕವಿಗಳೆಲ್ಲ ಭಾಗವಹಿಸಿ ರಂಜಿಸುವಂತೆ ನೋಡಿಕೊಂಡ. ಹಿಂದೆ ಕಾವ್ಯ ಓದಿದವರಿಗೆ ದುಡ್ಡು ಕೊಡುತ್ತಿದ್ದುದು ಕಮ್ಮಿ; ಖೋಡೆಯ ಕೃಪಾಕಟಾಕ್ಷದಿಂದ ಕವಿಗಳಿಗೆ ಕೂಡ ಕೈತುಂಬ ಹಣ ಸಿಕ್ಕಿತು. ಈ 'ಕೈತುಂಬ ಹಣ'ಕ್ಕೆ ಚರಿತ್ರೆಯೇ ಇದೆ. ವರ್ಷಕ್ಕೊಮ್ಮೆ ಸರ್ವಧರ್ಮ ಸಮ್ಮೇಳನ ನಡೆಸುವ ಧರ್ಮಸ್ಥಳದ ಹೆಗಡೆ ಪತ್ರಕರ್ತರಿಗೆ ಕೂಡ ಸಾವಿರಾರು ರೂಪಾಯಿ ಕೊಡುವುದಾಗಿ ಹೇಳುತ್ತಾರೆ. ಇದನ್ನು ಸಂತೋಷದಿಂದ ಸ್ವೀಕರಿಸಿದ ಪತ್ರಕರ್ತರೇ ಹೇಳಿಕೊತ್ತಾರೆ. ಈಚೆಗೆ ಸಿ.ಆರ್. ಸಿಂಹ ಎಂಬ ವ್ಯಕ್ತಿ ತಮ್ಮ 'ಪ್ರದರ್ಶನ'ಗಳಿಗೆ ದಾಸಪ್ಪ ಕೃಪೆ ತೋರಿದ್ದಾಗಿ ಬಹಿರಂಗವಾಗಿ ಸಾರಲಾಯಿತು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂಥ ಸ್ವಾಭಿಮಾನದ, ಸೂಕ್ಷ್ಮಜ್ಞ ವ್ಯಕ್ತಿ ಎಂಬುದು ಗುಟ್ಟೇನಲ್ಲ. ಇವರ 'ಕಾಕನ ಕೋಟೆ' ಆಡಲು ಕೆಲವರು 'ತಾಲೀಂ' ನಡೆಸತೊಡಗಿದಾಗ ಅದನ್ನು ನೋಡಿದ ಮಾಸ್ತಿ ಬೇಸರಗೊಂಡರು; ಅದರಲ್ಲಿ ಹೊಸದಾಗಿ ಸೇರಿಸಿದ್ದ ಪದ್ಯ, ಹಾಡುಗಳನ್ನು ನೋಡಿ ಸಿಟ್ಟುಗೊಂಡು, "ನನ್ನ ನಾಟಕ ಆಡಲೇಬೇಡಿ" ಎಂದು ಹೇಳಿದರು. ಇಂಥ ಮಾಸ್ತಿಯನ್ನು ಸ್ವಂತ ಆಸ್ತಿ ಮಾಡಿಕೊಂಡು ಮುಕ್ಕಲು ಸಿದ್ಧವಾದ ಜನರನ್ನು ಈಚೆಗೆ ನೋಡಿದ್ದೀರಿ. ಮಾವಿನಕೆರೆ ರಂಗನಾಥ್, ಅರಳುಮಲ್ಲಿಗೆ ಪಾರ್ಥಸಾರಥಿ ಮುಂತಾದವರು ಮಾಸ್ತಿ ಮಡಿಯುವುದಕ್ಕಾಗಿಯೇ ಕಾದುಕೊಂಡಿದ್ದವರಂತೆ ಶತಮಾನೋತ್ಸವ ಮಾಡಿದರು. ಇದಕ್ಕೆ ಬೃಂದಾವನ್ ಡಿಸ್ಟಲರೀಸ್, ಐಟಿಸಿ ಬೆಂಬಲ; ಇವರು ಪ್ರಾಯೋಜಕರು. ಕಲಾಕ್ಷೇತ್ರದ ಎದುರು ರಾಕ್ಷಸಾಕಾರದಲ್ಲಿ ಮಿಂಚುತ್ತಿದ್ದ ಈ ಡಿಸ್ಟಿಲರೀಸ್‌ಗಳ ಬ್ಯಾನರ್‌ಗಳು; ಇವುಗಳ ಕೆಳಗೆ ದೀಪ ಹತ್ತಿಸಿ ಭಾಷಣ ಮಾಡುತ್ತಿದ್ದ ಅನಂತಮೂರ್ತಿ, ಕಾರಂತ,ಕುರ್ತುಕೋಟಿ, ಶರ್ಮ ಮುಂತಾದವರು. ಈ ಭಾಷಣಗಳ ನಡುವೆ ಯುವಜನ ಮಂತ್ರಿ ಎಸ್.ರಮೇಶ್ ಬೇರೆ; ಎಲ್ಲರಿಗಿಂತ ಖುಷಿಯಾಗಿ ಮಿಂಚುತ್ತಿದ್ದ ಮೊಯ್ಲಿ ಮೂತಿ. ಎಸ್.ರಮೇಶ್‌ಗೆ ಮಾಸ್ತಿ ಐಯ್ಯಂಗಾರ್ ಎಂಬುದು ಗೊತ್ತಿರುವಂತಿಲ್ಲ; ಮಾವಿನಕೆರೆ ರಂಗನಾಥ್ ಹೇಳಿರಬೇಕು. ಅದೇನೇ ಇರಲಿ, ಬೃಂದಾವನ್ ಡಿಸ್ಟಿಲರೀಸ್ ಜೊತೆಗೆ ಎಸ್. ರಮೇಶ್ ಕೂಡ ಮಾಸ್ತಿಯವರ ನೆನಪಿಗಾಗಿ ಸರ್ಕಾರದಿಂದ ಎರಡು ಲಕ್ಷ ರೂ. ಕೊಡಿಸುವುದಾಗಿ ಹೇಳಿದ್ದಾರೆ.

ರಾಜಕೀಯದ ಪುಢಾರಿಗಳು ಮತ್ತು ಸಾಹಿತ್ಯದ ಪುಢಾರಿಗಳು ಒಟ್ಟಾಗಿ ನಡೆಸುವ ಕರಾಮತ್ತು ಸಾಹಿತ್ಯ ಮತ್ತು ವಿಮರ್ಶೆಯನ್ನು ಎಲ್ಲಿಗೆ ಒಯ್ಯಬಲ್ಲವು? ಯೋಚಿಸಿ.

ಮೈಸೂರು ಜೈಲಿನಿಂದ ಹೊರಬಂದು


ಕವನ

ನೇಣು ಹಗ್ಗಗಳನ್ನು ಸಿದ್ಧಮಾಡಿರಿ
ನಾವು ನೇಣು ಹಗ್ಗಗಳನ್ನೇರಿದ ಪಾರಿವಾಳಗಳಾಗಿ
ಸ್ವತಂತ್ರ ಗೀತೆಗಳ ಆಲಾಪಿಸುತ್ತೇವೆ.....
ಜೈಲುಗಳ ಬಾಯಿಗಳನ್ನು ತೆರೆಯಿರಿ
ನಾವು, ಬೆಳಿಗ್ಗೇನೆ ಬೆಚ್ಚಗೆ ತಾಕುವ
ಸೂರ್ಯಕಿರಣಗಳನ್ನು ಅದುಮಿಟ್ಟುಕೊಂಡು
ಉದಯಗೀತೆಗಳನ್ನು ಆಲಾಪಿಸುತ್ತೇವೆ.
ಪಕ್ಷಿಗಳನ್ನು ಸುತ್ತಿಸುವಂತೆ
ಸುಳ್ಳು ಕೇಸುಗಳನ್ನು ಹಾಕಿ
ಕೋರ್ಟು ಕೋರ್ಟಿಗೂ ಸುತ್ತಿಸಿರಿ-
ಸುಸ್ತಾದ ನಮ್ಮ ಪಾದಮುದ್ರೆಗಳ ಕೆಳಗೆ
ಹೊರಹೊಮ್ಮುವ ನಮ್ಮ ನಿರಸನ ಜ್ವಾಲೆಗಳನ್ನು ಎತ್ತಿ ಹಿಡಿಯುತ್ತೇವೆ
ನಿಮ್ಮ ನಿಮ್ಮ ಕಾಗದಗಳಲ್ಲಿನ ಕಪ್ಪು ಅಕ್ಷರಗಳ ಕೆಳಗೆ
ನಲುಗಿಹೋಗುತ್ತಿರುವ ಬದುಕಿನ ಸಾಕ್ಷಿಗಳನ್ನು ತೋರಿಸುತ್ತೇವೆ.....
ಸ್ವತಂತ್ರಕ್ಕಾಗಿ ಸಂಕೋಲೆಗಳನ್ನು ಆಹ್ವಾನಿಸುವ ಕೈಗಳು ನಮ್ಮವು
ಕೋರ್ಟುಗಳಲ್ಲೂ ದಿಕ್ಕಾರಗೀತೆಗಳನ್ನು ಕೇಳಿಸುತ್ತೇವೆ.....

ಕೈಗಳಿಗೆ ಸಂಕೋಲೆಗಳನ್ನು ತೊಡಿಸಿರಿ
ನಾವು ಕಾಲುಗಳಿಂದ ಬರೆಯುತ್ತೇವೆ
ಕಾಲುಗಳಿಗೂ ಸಂಕೋಲೆಗಳನ್ನು ತೊಡಿಸಿರಿ
ನಾವು ಗಂಟಲಿಂದ ಘೋಷಿಸುತ್ತೇವೆ
ಗಂಟಲಿಗೂ ಆಸಿಡ್‌ನ್ನು ಸುರಿಯಿರಿ
ನಾವು ನಮ್ಮ ಶರೀರಗಳನ್ನು ತಾಳಗಳನ್ನಾಗಿ ಮಾಡಿ
ಭೂತಮಟೆಯ ಮೇಲೆ ಢಮಢಮ ಮೊಳಗಿಸುತ್ತೇವೆ

ನಮ್ಮನ್ನು ಸಮಾಧಿ ಮಾಡಿರಿ
ನಾವು ಸಮಾಧಿಯಿಂದೆದ್ದ ಮುಷ್ಠಿಗಳಾಗಿ
ಲೈಟ್‌ಹೌಸ್‌ನಲ್ಲಿ ದಾರಿ ತೋರಿಸುತ್ತೇವೆ
ನಮ್ಮ ಶರೀರಗಳ ಮೇಲೆ ಹೊದ್ದುಕೊಂಡ ಮಣ್ಣಿಗೆ
ಹೊಸ ಹಾಡನ್ನು ಕಲಿಸಿ
ಮರಣಕ್ಕೆ ಮತ್ತೊಂದು ಅರ್ಥವನ್ನು ನೀಡುತ್ತೇವೆ.

ಕತ್ತಿಗಳ ಪಹರೆಗಳ ನಡುವೆ
ವಿಕಸಿಸಿದ ಲೇಖನಗಳು ನಮ್ಮವು
ಚರಿತ್ರೆ ಸ್ಪಂದಿಸುವಷ್ಟೂ ಕಾಲ
ಅವು ಕಾಪಾಡುತ್ತಲೇ ಇರುತ್ತವೆ......



ಇತ್ತೀಚೆಗೆ ಮೈಸೂರು ಜೈಲಿನಿಂದ ಬಿಡುಗಡೆಯಾದ ಜನಪರ ಹೋರಾಟಗಾರ ಉಪ್ಪನಗೌಡ ಅವರು ತೆಲುಗಿನ ದುರಿಯವರ ಪದ್ಯ 'ಧಿಕ್ಕಾರ ಗೀತಂ'ನ ಪ್ರೇರಣೆಯಿಂದ ಬರೆದಿರುವ ಕವನ

ಮಠಾಧೀಶರಿಗೆ ಹಣ ಕೊಡುವುದಾದರೆ ಸರ್ಕಾರ ಯಾಕೆ?

ಒಂದು ಪತ್ರ

ಕಲ್ಯಾಣ ರಾಜ್ಯ ಸ್ಥಾಪಿಸಲು ಸರ್ಕಾರದ ನೇತೃತ್ವ ವಹಿಸಿರುವ ಆಡಳಿತಗಾರರಿಗೆ ಸಂವಿಧಾನವು ರಾಜ್ಯ ನಿರ್ದೇಶಕ ತತ್ವಗಳಡಿಯಲ್ಲಿ ಮಾರ್ಗದರ್ಶನ ನೀಡುತ್ತದೆ. ಸರ್ಕಾರದ ಆಸ್ತಿಯನ್ನು ಹೇಗೆ ಖರ್ಚು ಮಾಡಬೇಕೆಂದೂ ತಿಳಿಸುತ್ತದೆ. ಸರ್ಕಾರ ಸಂಗ್ರಹಿಸಿದ ಹಣವನ್ನು ಯಾವಯಾವ ಕ್ಷೇತ್ರಗಳಿಗೆ ಖರ್ಚು ಮಾಡಬೇಕೆಂದೂ ತಿಳಿಸುತ್ತದೆ.



ಆದರೆ ಸಂವಿಧಾನದ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕರಿಸಿದ ರಾಜ್ಯದ ಮುಖ್ಯಮಂತ್ರಿಗಳು ಸಂವಿಧಾನೇತರ ಕೆಲಸಗಳಿಗೆ ಸಂಸ್ಥೆಗಳಿಗೆ (ಮಠಗಳಿಗೆ) 130 ಕೋಟಿ ರೂ.ವನ್ನು ಅನುದಾನ ರೂಪದಲ್ಲಿ ನೀಡಿದ್ದಾರೆ. ಮಾತ್ರವಲ್ಲ "ಮಠಗಳಿಗೆ ಹಣ ನೀಡುವುದರಿಂದ ಧರ್ಮಕಾರ್ಯ ಹೆಚ್ಚಾಗಿ ದೇಶದಲ್ಲಿ ಮಳೆ ಬೆಳೆಯಾಗಿ ಸಮೃದ್ಧಿಯಾಗುತ್ತದೆ" ಎಂದು ಹೇಳಿಕೆ ನಿಡಿದ್ದಾರೆ.

ವಿಚಿತ್ರ ನೋಡಿ: ಈ ದೇಶದಲ್ಲಿ ಬಹಳ ಹಿಂದಿನಿಂದಲೂ ಮಠಾಧೀಶರು ಇದ್ದಾರೆ. ಅವರು ಬಹಳ ಪ್ರಾಮಾಣಿಕತನದಿಂದ ದಾನಧರ್ಮಕಾರ್ಯ ಮಾಡುತ್ತಿದ್ದರೂ ಸಹ ಭಾರತವಿನ್ನೂ ಪ್ರಗತಿಯಾಗಿಲ್ಲ, ಅಭಿವೃದ್ಧಿಯ ರಾಷ್ಟ್ರಗಳ ಸಾಲಿನಲ್ಲಿ ದೇಶವು 127 ನೇ ಸ್ಥಾನದಲ್ಲಿದೆ. ಯಾಕೆ?

ಈ ದೇಶದಲ್ಲಿ ಅಸಂಖ್ಯಾತ ಮಠಾಧೀಶರಿದ್ದು, ಅವರು ಜನರನ್ನು ಹರಸುತ್ತಿದ್ದರೂ ಆದೇಕೆ ಮಳೆಬೆಳೆ ಆಗುತ್ತಿಲ್ಲ ಯಾಕೆ? ಮಳೆಬೆಳೆ ಆಗದಂತೆ ಮಠಾಧೀಶರು ಶಾಪ ನೀಡಿದ್ದಾರೆಯೇ? ಮಳೆಯಾಗದಂತೆ ಶಾಪ ನೀಡುವ ಮಠಾಧೀಶರು ಅದು ಹೇಗೆ ಪವಿತ್ರರಾಗುತ್ತಾರೆ? ಬಿಹಾರ ಪ್ರವಾಹ ಉಂಟಾಗಲು ಬಹುಶಃ ಮಠಾಧೀಶರ ಅತಿಯಾದ ಹಾರೈಕೆ ಇರಬಹುದೆ? ಥಾರ್ ಮರುಭೂಮಿ ನಿರ್ಮಾಣವಾಗಲು ಅತಿಯಾದ ಶಾಪ ಕೊಟ್ಟಿದ್ದಾರೆಯೇ? ಮಠಾಧೀಶರಿಗೆ ಹಣ ನೀಡಿದರೆ ಮಳೆಯಾಗುತ್ತದೆಯೇ?

ಜನರೊದ್ಧಾರಕ್ಕಾಗಿ ಮಠಾಧೀಶರಿಗೆ ಹಣ ನೀಡಿ ಎಂದು ಸಂವಿಧಾನದಲ್ಲಿ ಎಲ್ಲಿ ಹೇಳಲಾಗಿದೆ? ಹೋಗಲಿ ಮಠಾಧೀಶರಿಗೆ ಕೋಟ್ಯಂತರ ಹಣದ ಅವಶ್ಯಕತೆ ಇದೆಯೆ? ಇದ್ದರೆ ಅಷ್ಟೊಂದು ಹಣ ಅವರಿಗೆ ಏತಕ್ಕಾಗಿ?

ಹಲವರು "ಮಠಾಧೀಶರು ಶಾಲಾ ಕಾಲೇಜು ಸಂಸ್ಥೆಗಳನ್ನು ತೆರೆದು ಶಿಕ್ಷಣ ನೀಡುತ್ತಿದ್ದಾರೆ. ಹಾಗೆಯೇ ಅನ್ನದಾನ ಮಾಡುತ್ತಾರೆ. ಆದ್ದರಿಂದ ಅವರಿಗೆ ಹಣದ ಅವಶ್ಯಕತೆ ಇದೆ" ಎನ್ನುತ್ತಾರೆ. ಆದರೆ ನಮ್ಮ ಸಂವಿಧಾನದ 21-A ವಿಧಿ ಪ್ರಕಾರ ಭಾರತದ ಎಲ್ಲ ಪ್ರಜೆಗಳಿಗೂ ಕಡ್ಡಾಯ ಶಿಕ್ಷಣ ನೀಡುವ ಕರ್ತವ್ಯ ಸರ್ಕಾರದ್ದೇ ಹೊರತು ಮತ್ತಿನ್ನಾರದ್ದೋ ಅಲ್ಲ.

ಮಠಾಧೀಶರೇ ಶಾಲಾ ಕಾಲೇಜು ನಡೆಸುವುದಾದರೆ ಸರ್ಕಾರದ ಕೆಲಸವೇನು? ಸರ್ಕಾರದಲ್ಲಿ ಶಿಕ್ಷಣ ಇಲಾಖೆ ಯಾಕೆ ಬೇಕು? ಶಿಕ್ಷಣ ಸಚಿವರು ಯಾಕಿದ್ದಾರೆ?

ಮಠಾಧೀಶರು ವಿದ್ಯಾರ್ಥಿಗಳಿಗೆ ಅನ್ನದಾನ ಮಾಡುತ್ತಿದ್ದರೆ ಸಮಾಜ ಕಲ್ಯಾಣ ಇಲಾಖೆ ಯಾಕೆ ಬೇಕು? ಅದಕ್ಕೆ ಮಂತ್ರಿ ಯಾಕಿದ್ದಾರೆ?

ಈಗ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಯಡಿಯೂರಪ್ಪನವರು "ಸರ್ಕಾರ ಮಾಡಬೇಕಾದ ಕೆಲಸಗಳನ್ನು ಮಠಾಧೀಶರು ಮಾಡುತ್ತಿದ್ದಾರೆ" ಎಂದು ಕಿಂಚಿತ್ತೂ ನಾಚಿಕೆ, ಮಾನ ಇಲ್ಲದೆ ಹೇಳಿದ್ದಾರೆ. ಅದು ನಿಜವಾದರೆ ಮಠಗಳಿಗೆ ಅನುದಾನ ನೀಡುವ ಬದಲು ವಿವಿಧ ಮಠಾಧೀಶರಿಗೆ ಸರ್ಕಾರದ ಒಂದೊಂದು ಇಲಾಖೆಯನ್ನು ವಹಿಸಿ, ಅವರುಗಳನ್ನೇ ಮಂತ್ರಿಗಳನ್ನಾಗಿ ಮಾಡಿದರೆ ಒಳ್ಳೆಯದಲ್ಲವೆ?

ಉಡುಪಿ ಭಾಗದ ಮಠಾಧೀಶರೊಬ್ಬರಿಗೆ ಗೃಹಖಾತೆ, ಶಿವಮೊಗ್ಗೆಯ ಒಬ್ಬರಿಗೆ ಪಶುಗಳನ್ನು ಸಾಕುವ, ಗಂಜಳ ರಕ್ಷಿಸುವ ಪಶುಸಂಗೋಪನೆ ಖಾತೆ., ಅನ್ನದಾಸೋಹ ನಡೆಸುವ ಮಧ್ಯ ಕರ್ನಾಟಕದ ಒಬ್ಬರಿಗೆ ಸಮಾಜ ಕಲ್ಯಾಣ ಖಾತೆ, ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ತೆರೆದಿರುವ ಒಬ್ಬರಿಗೆ ಶಿಕ್ಷಣ ಇಲಾಖೆ, ಎಲ್ಲೆಡೆ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಿ ಹಣ ಮಾಡಿಕೊಳ್ಳುತ್ತಿರುವ ಮತ್ತೊಬ್ಬರಿಗೆ ವೈದ್ಯಕೀಯ ಇಲಾಖೆ, ಊರೂರುಗಳಲ್ಲಿ ಪ್ರವಚನ ನೀಡುವವರಿಗೆ ಗ್ರಾಮೀಣಾಭಿವೃದ್ಧಿ, ತನ್ನ ದೇವಸ್ಥಾನವಿರುವ ಇಡೀ ಕ್ಷೇತ್ರವನ್ನೇ ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿರುವವರಿಗೆ ಲೋಕೋಪಯೋಗಿ ಇಲಾಖೆ, ತನ್ನ ಮಠದಲ್ಲಿ ಶ್ರೀಮಂತರ ಹಣವನ್ನು ಸಂಗ್ರಹಿಸಿಟ್ಟಿರುವ ಮಠಬ್ಯಾಂಕ್ ಸ್ವಾಮಿಗೆ ಹಣಕಾಸು ಖಾತೆ, ವೈಯಾರಿ ಗುರೂಜಿಗೆ ಮಹಿಳೆ ಹಾಗೂ ಮಕ್ಕಳ ಕಲ್ಯಾಣ ಇಲ್ಲಾಖೆ... ಹೀಗೆ ಸರ್ಕಾರವನ್ನೇ ಇವರೆಲ್ಲರಿಗೆ ಹಂಚಬಹುದಲ್ಲವೇ?

ಇದಿಷ್ಟೇ ಅಲ್ಲದೆ, ಮುಖ್ಯಮಂತ್ರಿ ಸ್ಥಾನವನ್ನೂ ಯಾವುದಾದರೂ ಪ್ರಬಲ ಸ್ವಾಮೀಜಿಗಳಿಗೆ ಒಪ್ಪಿಸಿ, ಯಡಿಯೂರಪ್ಪ ಮತ್ತು ಅವರ ಮಂತ್ರಿಗಳ ಬಳಗವೆಲ್ಲ ತೀರ್ಥಯಾತ್ರೆ ಮಾಡುತ್ತ ದೇವಸ್ಥಾನದ ಭಜನಾಮಂಡಳಿ ಸದಸ್ಯರಾಗಿದ್ದುಕೊಂಡು ಭಜನೆ ಮಾಡಬಹುದಲ್ಲ?

130 ಕೋಟಿ ಖರ್ಚು ಮಾಡಿ ರೈತರಿಗೆ ಭೂಮಿ, ಬಡವರಿಗೆ ಉದ್ಯೋಗ, ಜನರಿಗೆ ವಿದ್ಯುತ್, ಕುಡಿಯುವ ನೀರು, ಬೃಹತ್ ನೀರಾವರಿ ಯೋಜನೆ, ಗ್ರಾಮೀಣ ಪ್ರದೇಶಕ್ಕೆ ಉತ್ತಮ ರಸ್ತೆ ಕುಡಿಯುವ ನೀರು ಕೊಡುವ ಬದಲು ಅದನ್ನು ಮಠಾಧೀಶರಿಗೆ ನೀಡುವುದಾದರೆ, ಆ ಮೂಲಕ ಜನರೋದ್ಧಾರ ಮಾಡುವುದಾದರೆ ಇಲ್ಲಿ ಪ್ರಜಾತಂತ್ರ ವ್ಯವಸ್ಥೆ-ಚುನಾವಣೆ ಮತ್ತು ಆಯೋಗಗಳು ಯಾಕೆ?

- ಅನಾಮಿಕ, ಕರ್ನಾಟಕ


ಜಾತಿ ವ್ಯವಸ್ಥೆಯೇ ಅತಿ ದೊಡ್ಡ ಷಡ್ಯಂತ್ರ

ಚಿತ್ರತಂಡವೊಂದು ಬೈಂದೂರಿನ ಹತ್ತಿರದ ಒತ್ತಿನೆಣೆ ಬೀಚ್‌ನಲ್ಲಿ ಚಾರ್ಲಿ ಚಾಪ್ಲಿನ್‌ನ 67 ಅಡಿ ಎತ್ತರದ ಪ್ರತಿಮೆ ಸ್ಥಾಪಿಸಲು ಹೊರಟಿದ್ದು ಕರಾವಳಿಯಲ್ಲಿ ವಿಹಿಂಪ ಮತ್ತು ಭಜರಂಗದಳದವರಿಗೆ ಒಂದು 'ಷಡ್ಯಂತ್ರವಾಗಿ' ಕಂಡಿದೆಯಂತೆ.

ಚಾರ್ಲಿ ಚಾಪ್ಲಿನ್ ವಿಶ್ವದ ಒಬ್ಬ ಮಹಾನ್ ಕಲಾವಿದ. ಅವನ ಧರ್ಮ ಯಾರಿಗೂ ಮುಖ್ಯವಲ್ಲ, ಅವನ ಅಸಾಧಾರಣ ಪ್ರತಿಭೆಯನ್ನು ಮಾತ್ರ ಎಲ್ಲರೂ ನೋಡುವುದು. ಆದರೆ ನಮ್ಮಲ್ಲಿಯ ಕೆಲವು ಸಂಕುಚಿತ ಬುದ್ಧಿಯವರಿಗೆ ಚಾಪ್ಲಿನ್‌ನ ಧರ್ಮ ಮಾತ್ರ ಕಾಣುತ್ತಿದೆ. (ಕೆಲವು ಮುಸ್ಲಿಮರಿಗೆ ಸಾನಿಯಾ ಮಿರ್ಜಾಳ ಆಟಕ್ಕಿಂತ ಹೆಚ್ಚಾಗಿ ಅವಳ ಬಟ್ಟೆ ಮಾತ್ರ ಕಂಡಂತೆ!). ಅಂದಹಾಗೆ, ಇಂದು ನಾವು ದಿನನಿತ್ಯ ಉಪಯೋಗಿಸುವ ಎಲ್ಲಾ ಯಂತ್ರೋಪಕರಣಗಳ ಮೂಲ ಪ್ರವರ್ತಕರೆಲ್ಲಾ ಕ್ರೈಸ್ತ, ಯಹೂದಿ, ಬೌದ್ಧ ಧರ್ಮೀಯರು. ಧರ್ಮದ ಆಧಾರದಲ್ಲಿ ಎಲ್ಲವನ್ನೂ ನೋಡುವುದಾದರೆ, ಎಲ್ಲಾ ಆಧುನಿಕ ಯಂತ್ರಗಳನ್ನು, ಸೌಲಭ್ಯಗಳನ್ನು ತ್ಯಜಿಸಿ ನಾವು ಮತ್ತೆ 'ಎತ್ತಿನ-ಗಾಡಿ ಯುಗ'ಕ್ಕೆ ಮರಳಬೇಕು ತಾನೆ!

ವಾಸ್ತವವಾಗಿ ಆರು ಸಾವಿರ ವರ್ಷಗಳಿಂದ "ಷಡ್ಯಂತ್ರ" ಮಾಡಿ ಮಾಡಿ ಸಮಾಜವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡವರಿಗೆ ಈಗ ಎಲ್ಲೆಲ್ಲೂ ಕಾಣುವುದು ಅವರ ವಿರುದ್ಧದ ಷಡ್ಯಂತ್ರವೇ. ಕಳ್ಳನಿಗೆ ಎಲ್ಲರೂ ಕಳ್ಳರಾಗಿಯೇ ಕಾಣುವುದು. ಇಡೀ ಜಗತ್ತಿನ 5-6 ಸಾವಿರ ವರ್ಷಗಳ ನಾಗರೀಕತೆಯ ಇತಿಹಾಸದಲ್ಲಿ ನಡೆದ ಅತಿದೊಡ್ಡ ಹಾಗೂ ಅತಿ ಹೇಯ ಷಡ್ಯಂತ್ರ ಯಾವುದು ಗೊತ್ತೆ? ಆ ಷಡ್ಯಂತ್ರ ಭಾರತೀಯ ಮೂಲದ್ದೆಂದು ನಾವು ಹೆಮ್ಮೆಪಡಬೇಕಲ್ಲವೇ?

ಆ ಷಡ್ಯಂತ್ರವೇ ಸಮಾಜವನ್ನು ಹಲವಾರು ಜಾತಿಗಳಾಗಿ ವಿಭಾಗಿಸಿ, ಮೇಲು-ಕೀಳೆಂದು ವಿಂಗಡಿಸಿ, ಅವರು ತಮ್ಮ-ತಮ್ಮಲ್ಲೇ ಜಗಳವಾಡಿ ನಿಶಕ್ತರಾಗುವಂತೆ ಮಾಡಿ; ನೂರಾರು ಚಿತ್ರ-ವಿಚಿತ್ರ ದೇವರುಗಳನ್ನು ಸಮಾಜದ ಮೇಲೆ ಹೇರಿ, ದೇವರೂ ಸಹಾ ಸ್ವಾರ್ಥಿ, ಆಸೆಬುರುಕ, ತಿಂಡಿಪ್ರೋತ, ಮಹಾಲಂಚಕೋರ, ವೈಭವಪ್ರಿಯ, ಹಿತ್ತಾಳೆ ಕಿವಿಯವ ಎಂಬಂತೆ ಬಿಂಬಿಸಿ; ಹರಕೆ, ಕಾಣಿಕೆ, ಪೂಜೆ, ವಜ್ರ-ಚಿನ್ನಗಳಿಂದ ಅವನನ್ನು ತೃಪ್ತಿಪಡಿಸಬಹುದೆಂದು ಜನರನ್ನು ನಂಬಿಸಿ, ಗೊಡ್ಡು ಸಂಪ್ರದಾಯ-ಕಂದಾಚಾರ ಹರಡಿಸಿ ಇಡೀ ಸಮಾಜವನ್ನು ದಾರಿ ತಪ್ಪಿಸಿರುವುದೇ ಜಗತ್ತಿನ ಅತೀ ದೊಡ್ಡ ಷಡ್ಯಂತ್ರ!



ಬೇರೆಲ್ಲಾ ಷಡ್ಯಂತ್ರಗಳ ಕೆಟ್ಟ ಪರಿಣಾಮಗಳಿಗೆ ಕೊನೆ ಎಂಬುದೊಂದಿದೆ. ಆದರೆ ಈ ಭಾರತೀಯ ಮೇಲ್ಜಾತಿಯ ಷಡ್ಯಂತ್ರವು ಹಿಂದೂ ಧರ್ಮ ಇರುವವರೆಗೂ ಜೀವಂತವಾಗಿ ಇರುತ್ತದೆ, ಇನ್ನೊಂದು ಸಾವಿರ ವರ್ಷ ಕಳೆದರೂ!

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಆಂಧ್ರದ ಗಡಿಯಲ್ಲಿರುವ ನಮ್ಮೂರು ಪಾವಗಡ ಹಲವು ವೈಶಿಷ್ಟ್ಯಗಳಿಗೆ ಹೆಸರಾಗಿದೆ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹೆಚ್ಚಾಗಿರುವ ಈ ಪ್ರದೇಶದಲ್ಲಿ ತೆಲುಗು ಮಿಶ್ರಿತ ಕನ್ನಡದ ಸೊಗಡನ್ನು ಇಲ್ಲಿ ಕಾಣಬಹುದು. ತೆಲುಗು ಪ್ರಭಾವವಿರುವ ಹಳ್ಳಿಗಳ ಶಾಲೆಗಳಲ್ಲಿ ಶಿಕ್ಷಕರು ಕನ್ನಡ ಮಾಧ್ಯಮ ವಿಷಯವನ್ನು ತೆಲುಗಿನಲ್ಲಿ ವಿವರಣೆ ನೀಡುವುದು ಪಕ್ಕದ ಮಡಕಶಿರ ತಾಲ್ಲೂಕಿನಲ್ಲಿ ಕನ್ನಡಿಗರೇ ಅಧಿಕವಾಗಿರುವ ಪ್ರದೇಶದಲ್ಲಿ ತೆಲುಗು ಮಾಧ್ಯಮ ವಿಷಯ ಬೋಧಿಸುವಾಗ ಕನ್ನಡದಲ್ಲಿ ವಿವರಣೆ ನೀಡುವುದು ಒಂದು ವೈಶಿಷ್ಟ್ಯ. ಕನ್ನಡ ರಾಜ್ಯೋತ್ಸವ, ರಾಷ್ಟ್ರೀಯ ಹಬ್ಬಗಳನ್ನು ತೆಲುಗು ಮಾತೃಭಾಷಿಕರೇ ನಡೆಸಿ ಕೊಡುವುದು ಇನ್ನೊಂದು ವೈಶಿಷ್ಟ್ಯ.

ಭಾಷೆ, ಜಾತಿ, ಧರ್ಮ ಸೌಹಾರ್ದ ಸಾಮರಸ್ಯಗಳ ನೆಲೆಬೀಡಾಗಿರುವ ನಮ್ಮೂರಿನಲ್ಲಿ ಆಘಾತ ಮತ್ತು ಮುಜುಗರ ಅನುಭವಿಸಿದ ಒಂದು ಪ್ರಸಂಗ ನಿವೃತ್ತಿಯಾದ ನಂತರವೂ ನನ್ನನ್ನು ಕಾಡುತ್ತಿದೆ. ಪತಂಜಲಿ ಯೋಗ ಶಿಕ್ಷಣ ಸಮಿತಿಯೆಂಬ ಒಂದು ಸಂಘಟನೆ ಇದೆ. ಆರೋಗ್ಯಕ್ಕೆ ಪೂರಕವಾದ ಯೋಗ ತರಬೇತಿ ಪಡೆಯಲು ನಾನು ನನ್ನ ಮುಸ್ಲಿಂ ಸ್ನೇಹಿತರ ಜೊತೆ ಈ ಶಿಬಿರಕ್ಕೆ ಸೇರಿದೆ. ನಮ್ಮ ತಂಡದ ಒಂದು ತಿಂಗಳ ತರಬೇತಿ ಅಂತ್ಯದಲ್ಲಿ ಮುಕ್ತಾಯ ಸಮಾರಂಭ ಏರ್ಪಾಡಾಗಿತ್ತು, ಪ್ರಾರ್ಥನಾ ಗೀತೆ ಹಾಡಲು ನನ್ನನ್ನು ನಿಯೋಜಿಸಿದ್ದರು. ನಾನು ಕುವೆಂಪು ಅಭಿಮಾನಿಯಾಗಿದ್ದರಿಂದ 'ಜಯ ಭಾರತ ಜನನಿಯ ತನುಜಾತೆ...' ಗೀತೆ ಹಾಡಲು ಸಿದ್ಧವಾಗಿ ಬಂದಿದ್ದೆ. ಕುಂಕುಮಧಾರಿ ವ್ಯಕ್ತಿಯೊಬ್ಬ ನಾನಿದ್ದಲ್ಲಿಗೆ ಬಂದು ವಿನಾಯಕ ಅಥವಾ ಸರಸ್ವತಿ ಸ್ತುತಿಸುವ ಗೀತೆಯನ್ನು ಹಾಡಲು ಒತ್ತಾಯಿಸಿದ. ನಾನು ನನ್ನ ನಿಲುವನ್ನು ಬದಲಾಯಿಸಲಿಲ್ಲ. ಅಂತಿಮವಾಗಿ ಆ ವ್ಯಕ್ತಿ ಈ ಗೀತೆಯಲ್ಲಿದ್ದ 'ಹಿಂದು ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನ ವೃದ್ಯಾನ...' ಸಾಲನ್ನು ಬಿಟ್ಟು ಹಾಡಲು ತಿಳಿಸಿದ. ಮುಸ್ಲಿಂ ಸ್ನೇಹಿತರ ಜೊತೆಗಿದ್ದ ನನಗೆ ತುಂಬಾ ಮುಜುಗರ ಉಂಟಾಯಿತು. ಆಗ ಯೋಗ ತರಬೇತಿ ಶಿಬಿರ ಸಂಘಟಿಸಿರುವುದು ಆರ್‌ಎಸ್‌ಎಸ್ ಎಂದು ನನಗೆ ತಿಳಿಯಿತು. ಆದರೆ ಕುವೆಂಪು ಆಶಯಕ್ಕೆ ವಿರುದ್ಧವಾಗಿದ್ದ ಅವರ ಸಲಹೆಯನ್ನು ತಿರಸ್ಕರಿಸಿ ಪೂರ್ಣ ಗೀತೆಯನ್ನು ಹಾಡಿದೆ.

ನಂತರ ಸಮಾರಂಭದಲ್ಲಿ ಇದೇ ಕುಂಕುಮಧಾರಿ ವ್ಯಕ್ತಿ ಉದ್ರೇಕಕಾರಿ ಭಾಷಣ ಮಾಡುತ್ತಾ "ಬಾಬರಿ ಮಸೀದಿ ಧ್ವಂಸ ಮಾಡುವುದರೊಂದಿಗೆ ಅಯೋಧ್ಯೆಯಲ್ಲಿ ಗೆಲುವು ಸಾಧಿಸಿದ್ದೇವೆ, ಇದೇ ರೀತಿ ಕಾಶೀ ಮಥುರದಲ್ಲೂ ದಿಗ್ವಿಜಯ ಪಡೆಯಲು ಮತ್ತೊಂದು ಮಹಾಯುದ್ಧಕ್ಕೆ ಸಿದ್ಧರಾಗಿ" ಎಂದು ಕರೆ ಕೊಟ್ಟುಬಿಟ್ಟ.

ನನ್ನ ಮನಸ್ಸಿಗೆ ತುಂಬಾ ಆಘಾತವಾಗಿ ಕೂಡಲೆ ನನ್ನ ಸ್ನೇಹಿತರೊಂದಿಗೆ ಸಮಾರಂಭದಿಂದ ಹೊರಬಂದುಬಿಟ್ಟೆ. ಶಾಂತಿ, ಸಹಬಾಳ್ವೆ, ಸಾಮರಸ್ಯ ಸೌಹಾರ್ದಗಳನ್ನು ಬಯಸುವ ಈ ನಾಡಿನ ಜನತೆಗೆ ವಿಕೃತ ಮನಸ್ಸಿನ ಇಂತಹ ವ್ಯಕ್ತಿಗಳು ಹೇಗೆ ಹುಳಿ ಹಿಂಡಿ ನೆಮ್ಮದಿಯನ್ನು ಹಾಳುಮಾಡುತ್ತಾರಲ್ಲ ಎಂಬ ಧಾವಂತ ನನ್ನನ್ನು ನಿರಂತರವಾಗಿ ಕಾಡುತ್ತಿದೆ.

-ಕೆ.ಟಿ. ಹಳ್ಳಿ ಮಲ್ಲಿಕಾರ್ಜುನಯ್ಯ, ಪಾವಗಡ

ಸ್ಪಷ್ಟೀಕರಣ

ಈ ಪ್ರಮುಖ ಬದಲಾವಣೆಗಳನ್ನು ಎಲ್ಲರೂ ಗಮನಿಸಬೇಕೆಂದು ಕೋರಿಕೆ

* ಇನ್ನು ಮುಂದೆ ಹೆಂಡಉದ್ಯಮಿ ವಿಜಯ್ ಮಲ್ಯರನ್ನು 'ಮಹಾತ್ಮ ಮಲ್ಯ' ಎಂದೇ ಎಲ್ಲರು ಸಂಬೋಧಿಸಬೇಕು.
* ಯೂಬಿ ಬಿಯರ್ ಅನ್ನು ಇನ್ನು ಮುಂದೆ 'ಬಾಪು ಬಿಯರ್' ಎಂದು ಕರೆಯಲಾಗುವುದು.
* ಗಾಂಧಿ ಸಮಾಧಿಯ ಮೇಲಿರುವ 'ಹೇ ರಾಮ್' ಎಂಬುದನ್ನು 'ಹೇ ರಮ್' ಎಂದು ಬದಲಾಯಿಸಲಾಗುವುದು.
* ಇನ್ನು ಮುಂದೆ ಗಾಂಧಿಯವರನ್ನು 'Old monk' ಎಂದು ಕರೆಯಲಾಗುವುದು.
* ಇನ್ನು ಮುಂದೆ ಕಿಂಗ್ ಫಿಷರ್ ವಿಮಾನಯಾನದ ರೂಪದರ್ಶಿಯಾಗಲಿರುವ ಗಾಂಧಿಯವರನ್ನು, ಜಾಹೀರಾತುಗಳಲ್ಲಿ ಕಿಂಗ್‌ಫಿಷರ್‌ನ ಇಬ್ಬರು ಗಗನಸಖಿಯರ ನೆರವಿನೊಂದಿಗೆ ನಡೆಯುತ್ತಿರುವಂತೆ ಬಿಂಬಿಸಲಾಗುತ್ತದೆ.



sms ಜೋಕ್ಸ್

ಮಲ್ಯ ಕಂಪನಿಯ ಹೊಸ ಬ್ರಾಂಡ್‌ಗಳು

* ಬಾಬು ಬಿಯರ್
* ಅಹಿಂಸಾ ರಮ್
* ಪೋರಬಂದರ್ ಪೋರ್ಟ್ ಮತ್ತು ವೈನ್
* ಮಹಾತ್ಮ ವಿಸ್ಕಿ
* ಗಾಂಧಿ ಜಿನ್
* ಮೋಹನ್‌ದಾಸ್ ವೋಡ್ಕಾ


ಈ ಎಲ್ಲ ಬ್ರಾಂಡ್‌ಗಳು ಗಾಂಧಿ ಜಯಂತಿಯ ದಿನ ಶೇ. 10 ಮತ್ತು ಗಾಂಧಿ ಪುಣ್ಯತಿಥಿ ದಿನ ಶೇ. 25 ರಿಯಾಯತಿ ದರದಲ್ಲಿ ಲಭ್ಯವಿರುತ್ತವೆ.

...ಣ್ಣಾದ ಲೋಕ ಮತ್ತು ರಾಜಕೀಯ ಲೋಕದಲ್ಲಿ ಈಗ ...ಹೆಸರು ಚಾಲ್ತಿಯಲ್ಲಿದೆ. ಒಂದೆಡೆ ಇವರ ನಿರ್ದೇಶನದ ...ಮದಕರಿ' ಕಳೆದ ವಾರ ತೆರೆಕಂಡಿದೆ. ಮತ್ತೊಂದೆಡೆ ...ೋಪಾಲ್ ವರ್ಮ ನಿರ್ದೇಶನದ 'ರಣ' ಚಿತ್ರದಲ್ಲಿ ನಟಿಸಲು ...ಡ್‌ಗೆ ಹೊರಟು ನಿಂತಿದ್ದಾರೆ. ಇನ್ನೊಂದೆಡೆ ಚಿತ್ರದುರ್ಗ ...ಭಾ ಕ್ಷೇತ್ರದಿಂದ ಸುದೀಪ್ ಚುನಾವಣೆಗೆ ಸ್ಪರ್ಧಿಸಲಿದ್ದಾರೆ ...ಾಳಿ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿ ...ಜೊತೆ ಮಾತನಾಡಿಸಿದೆವು.

...ೆ: *ನೀವು ಚುನಾವಣೆಗೆ ನಿಲ್ಲುತ್ತೀರಿ ಎಂಬ ಮಾತು ಕೇಳಿಬರುತ್ತಿದೆಯಲ್ಲ?*

...ೀಪ್: (ಹಹ್ಹಹ್ಹ.. ಎಂದು ನಗುತ್ತಾರೆ).

...ಮದಕರಿ'ಯ ...ಮಾತಿನ ...ಲಹರಿ



(ಆದರೆ ಇದೇ ಪ್ರಶ್ನೆಗೆ ಸುದೀಪ್ ತಾಯಿ "ಅವನ ಮೇಲೆ ತುಂಬಾ ಒತ್ತಡ ಇದೆ. ಏನು ಮಾಡುತ್ತಾನೋ ಗೊತ್ತಿಲ್ಲ" ಎಂದು ಉತ್ತರಿಸುತ್ತಾರೆ. ಸುದೀಪ್‌ರ ಆಪ್ತ ಗೆಳೆಯರು ...ಸಾರ್, ಈ ಬಾರಿ ಲೋಕಸಭೆಗೆ ಅವರು ಸ್ಪರ್ಧಿಸುವುದಿಲ್ಲ ...ನ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವುದು ಗ್ಯಾರಂಟಿ" ...ತ್ತಾರೆ).

ಬಾಕ್ಸ್ ಆಫೀಸಿನಲ್ಲಿ 'ವೀರ ಮದಕರಿ' ಗೆದ್ದಿದೆ ಎನ್ನಿಸುತ್ತದೆಯಾ?

...ಈಗ ಪರೀಕ್ಷೆಗಳು ನಡೆಯುತ್ತಿವೆ. ಮುಗಿದನಂತರ ...ವಾಗಿಯೂ ಚಿತ್ರ ಪಿಕ್‌ಅಪ್ ಆಗುತ್ತದೆ. "ನಿಮ್ಮ ಚಿತ್ರ ...ಅಯಾಮ್ ಹ್ಯಾಪಿ ಫಾರ್ ಯು" ಎಂದು ಯಾರಾದರೂ ...ಹೇಳಿದರೆ ನಾನು ಅದನ್ನು ನಂಬುವುದಿಲ್ಲ, ನನ್ನ ಚಿತ್ರ ಅವರ್‍ಯಾಕೆ ಸಂತೋಷಪಡಬೇಕು? ನನ್ನ ಎದುರಾಳಿ ...ಗಳ ಚಿತ್ರ ಗೆದ್ದಾಗ ನಾನು ಖಂಡಿತ ಸಂತೋಷಪಟ್ಟಿಲ್ಲ ...ಅವರು ಸುಳ್ಳು ಹೇಳುತ್ತಾರೆಂಬುದು ನನಗೆ ಗೊತ್ತು. ...ವೇಳೆ ಅವರು ನಿಜವಾಗಿಯೂ ಸಂತೋಷಪಟ್ಟಿದ್ದರೆ ...ಮನುಷ್ಯನಾಗಿ ಬದುಕಿರಲು ಯಾವ ಅರ್ಹತೆಯನ್ನು ...ರುವುದಿಲ್ಲ, ಆತ ದೇವರೇ ಆಗಿರಬೇಕು ಎಂಬುದು ...ಭಿಪ್ರಾಯ.

ಅಂದರೆ ಈ ಉದ್ಯಮದಲ್ಲಿ ನೀವು ಏಕಾಂಗಿಯೇ?

ಹಾಗೇನಿಲ್ಲ, ನಾನು ಸೋತಾಗ ನನ್ನ ಕುಟುಂಬದವ...ನ್ನ ಜೊತೆಗೆ ಇದ್ದರು. ನನಗೆ ಧೈರ್ಯ ತುಂಬಿದರು, ಕಣ್ಣೀರಿಟ್ಟರು.

ಮೊನ್ನೆ ಅಮೃತ ಮಹೋತ್ಸವದ ಸಂದರ್ಭದಲ್ಲಿ ಇಡೀ ಉದ್ಯಮದವರೆಲ್ಲ ಒಬ್ಬರನ್ನೊಬ್ಬರು ತಬ್ಬಿಕೊಂಡು, ಚೆನ್ನಾಗಿ ಇದ್ದರಲ್ಲಾ? ಇದು ಪರಸ್ಪರ ಪ್ರೀತಿ-ವಿಶ್ವಾಸದ ಸಂಕೇತವಲ್ಲವೇ?

...ನಾವೆಲ್ಲರೂ ರವಿಚಂದ್ರನ್‌ಗೋಸ್ಕರ ಸಮಾರಂಭಕ್ಕೆ ...ವು. ಅವರ ಕ್ರಿಯೇಟಿವಿಟಿಯಿಂದಾಗಿ ನಮ್ಮ ಉದ್ಯಮದ ...ಜೆ ಉಳಿಯಿತು. ಆದರೆ ಈ ಹದಿನೈದು ದಿನಗಳ ...ನ್ನ ನಾನು ಒಪ್ಪಿದಲ್ಲಿ, ಅದರ ಬದಲಿಗೆ ಪ್ರತಿದಿನ ...ನಾನು 2 ಗಂಟೆ ರಿಹರ್ಸಲ್ ಮಾಡಿ ಕೊನೆಯ ಮೂರು ...ಮಾತ್ರ ರಜಾ ಘೋಷಿಸಬಹುದಿತ್ತು ಎಂಬ ಸಬಹೆ... ನೀಡಿದ್ದೆ, ಆದರೆ ಅದು ಚೇಂಬರ್‌ನವರಿಗೆ ಇಷ್ಟವಾಗಲಿಲ್ಲ, ಆದರೆ ನಾನು ನನ್ನ ಸಿನಿಮಾಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಆ ಸಂದರ್ಭದಲ್ಲಿಯೂ ಮಾಡಿದ್ದೆ.

(ಮತ್ತೊಂದು ಪ್ರಶ್ನೆ ಕೇಳುವ ಮನ್ನವೇ ಮಾತು ಮುಂದುವರೆಸಿದ ಸುದೀಪ್..)

ನಮ್ಮ ಸಿನಿಮಾಗಳಲ್ಲಿ ನಾಯಕ ನಟರ ಹೆಸರಿನ ಎದುರು 'ಸ್ಟಾರ್' ಹಾಕುವುದನ್ನು ನೋಡಿದಾಗ ನನಗೆ ನಗು ಬರುತ್ತದೆ. ನನ್ನ ಪ್ರಕಾರ ಶಾರೂಕ್ ಖಾನ್, ಅಕ್ಷಯ ಕುಮಾರ್ ಮತ್ತು ರಜನೀಕಾಂತ್ ಮೊದಲಾದವರು ಸ್ಟಾರ್‌ಗಳು. ಅವರ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಮುಗ್ಗರಿಸಿದಾಗಲೂ ಕನಿಷ್ಠವೆಂದರೂ 45 ಕೋಟಿ ರೂ. ಲಾಭ ಬರುತ್ತದೆ. ನಮ್ಮ ಕನ್ನಡದಲ್ಲಿ 'ಸ್ಟಾರ್'ಗಳ ಸಿನಿಮಾಗಳು ಬಿಡುಗಡೆಯಾದಾಗ ಮೊದಲ ದಿನವೇ ಥಿಯೇಟರ್ ಅರ್ಧ ಖಾಲಿಯಿರುತ್ತದೆ. ಹೀಗಾಗಿ ಈ ಸ್ಟಾರ್ ಬಿರುದುಗಳು ಹಾಸ್ಯಾಸ್ಪದ.

- **ಈಗ ಕನ್ನಡದಲ್ಲಿ ಬಹುತೇಕ ಮಲ್ಟಿಸ್ಟಾರ್ ಚಿತ್ರಗಳು ಬರುತ್ತಿವೆ. ಈ ಹಿನ್ನೆಲೆಯಲ್ಲಿ ನೀವು ಮತ್ತು ದರ್ಶನ್ ಒಂದೇ ಚಿತ್ರದಲ್ಲಿ ನಟಿಸುವ ಸಾಧ್ಯತೆ ಇದೆಯೇ?**

- ಸಾಧ್ಯವೇ ಇಲ್ಲ, ಒಂದೇ ಚಿತ್ರದಲ್ಲಿ ಇಬ್ಬರು ನಾಯಕ ನಟರು ಇರಲು ಸಾಧ್ಯವಿಲ್ಲ. ಆದರೆ ರವಿಚಂದ್ರನ್ ಚಿತ್ರದಲ್ಲಿ ಮಾತ್ರ ಕಥೆ, ಪಾತ್ರ ಕೇಳದೆ ಖಳನಾಯಕನ ಪಾತ್ರ ನೀಡಿದರೂ ನಾನು ನಿರ್ವಹಿಸಲು ಸಿದ್ಧ. ಯಾಕೆಂದರೆ ನನಗೆ ಆ ಮನುಷ್ಯನ ಬಗ್ಗೆ ನಂಬಿಕೆಯಿದೆ.

- **ನಟನೆ, ನಿರ್ಮಾಣ, ಸಂಕಲನ, ಕಲಾತ್ಮಕ ಮತ್ತು ಕಮರ್ಷಿಯಲ್ ಚಿತ್ರಗಳ ನಿರ್ದೇಶನ... ಹೀಗೆ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ನಿಮಗೆ ರವಿಚಂದ್ರನ್ ಸ್ಫೂರ್ತಿಯೇ?**

- ಖಂಡಿತವಾಗಿಯೂ ರವಿಚಂದ್ರನ್ ಮತ್ತು ಶಂಕರ್ ನಾಗ್ ನನಗೆ ಯಾವಾಗಲೂ ಸ್ಫೂರ್ತಿಯ ಸೆಲೆಯಾಗಿ ಕಾಣಿಸುತ್ತಾರೆ. ನಾನು ಚಿತ್ರ ನಿರ್ದೇಶನ ಮಾಡುವ ಬಹುತೇಕ ಎಲ್ಲಾ ಸಂದರ್ಭದಲ್ಲೂ ಇವರಿಬ್ಬರನ್ನು ನೆನೆಯದ ದಿನವೇ ಇಲ್ಲ.

- **ರಾಮಗೋಪಾಲವರ್ಮಾ ನಿರ್ದೇಶನದ ರಣ ಚಿತ್ರದಲ್ಲಿ ಅಮಿತಾಬ್ ಬಚ್ಚನ್ ಮಗನಾಗಿ ನಟಿಸುತ್ತಿರುವ ನೀವು ಅದಕ್ಕಾಗಿ ಪ್ರತ್ಯೇಕ ತಯಾರಿ ಏನಾದರೂ ನಡೆಸಿದ್ದೀರಾ?**

- ಹೌದು, ನಾನು ಆ ಮಹಾ ನಟನನ್ನು ಮುಖಾಮುಖಿಯಾಗಲು ಮಾನಸಿಕವಾಗಿ ತಯಾರಾಗುತ್ತಿದ್ದೇನೆ. ಯಾಕೆಂದರೆ ಬಾಲ್ಯದಿಂದಲೂ ನಾನು ನೆಚ್ಚಿರುವ ಆ ನಟನೊಂದಿಗೆ ನಾನು ನಟಿಸುತ್ತೇನೆ ಅಂತಂದುಕೊಂಡಿರಲಿಲ್ಲ. ಇದೆಲ್ಲ ನನಗೆ ಕನಸಿನ ತರಹ ಭಾಸವಾಗುತ್ತಿದೆ. ಆದರೆ ಯಾವುದೇ ಪಾತ್ರಕ್ಕಾಗಿ ನಾನು ಎಂದೂ ಯಾವುದೇ ತಯಾರಿ ನಡೆಸಿದವನೇ ಅಲ್ಲ, ನಿರ್ದೇಶಕರು ಹೇಳಿದನ್ನು ಮಾಡುವುದಷ್ಟೇ ನನ್ನ ಕೆಲಸ.

- **ಹಿಂದಿ ಚಿತ್ರರಂಗದಲ್ಲಿ ಈಗಾಗಲೇ ಎರಡು-ಮೂರು ಚಿತ್ರಗಳಿಗೆ ಸಹಿಹಾಕುವ ಮೂಲಕ ಬಾಲಿವುಡ್‌ನಲ್ಲಿ ಮೊಕ್ಕಾಂ ಹೂಡುವ ಸಿದ್ಧತೆಯಲ್ಲಿದ್ದೀರಾ?**

- ಯಾವ ಕಲಾವಿದನಿಗೆ ಭಾಷೆಯ ಮೇಲೆ ಹಿಡಿತವಿಲ್ಲವೋ ಆ ಕಲಾವಿದ ಉತ್ತಮ ನಟನೆ ನೀಡಲು ಸಾಧ್ಯವಿಲ್ಲ, ಹಿಂದಿ ನನಗೆ ಅಷ್ಟಕಷ್ಟೆ. ಖಂಡಿತವಾಗಿಯೂ ನನ್ನ ಕರ್ಮಭೂಮಿ ಕನ್ನಡಚಿತ್ರರಂಗವೇ.

- **ಇತ್ತೀಚೆಗೆ ಇಷ್ಟೊಂದು ತೆಳ್ಳನೆಯ, ಉದ್ದನೆಯ ಪರ್ಸನಾಲಿಟಿ ಹೊಂದಲು ಕಾರಣವೇನು?**

- ಯಾವತ್ತೋ ಒಮ್ಮೆ ಫೈಟಿಂಗ್ ದೃಶ್ಯದಲ್ಲಿ ಭಾಗವಹಿಸುವಾಗ ದೇಹದ ತೂಕ ಇಳಿಸಬೇಕು ಎಂದೆನಿಸಿತು. ಕೂಡಲೇ ಅದಕ್ಕೆ ಪ್ರಾಮುಖ್ಯತೆ ನೀಡಿದೆ. ಈಗ ದಿನಕ್ಕೆ ಹದಿನೈದು ಕಿ.ಮೀ. ಸೈಕಲಿಂಗ್, ಎರಡು ಸಾವಿರ ಸ್ಕಿಪಿಂಗ್ ಹಾಗೂ ಇನ್ನಿತರ ವ್ಯಾಯಾಮ ಮಾಡಲು ಮರೆಯುವುದೇ ಇಲ್ಲ.

- **ಆದರೆ ನಿಮ್ಮ ಅಭಿಮಾನಿಗಳು ನೀವು ಫೈಟಿಂಗ್‌ಗಿಂತ ನೃತ್ಯದಲ್ಲಿ ಚೆನ್ನಾಗಿ ಕಾಣಿಸುತ್ತೀರಾ ಎನ್ನುತ್ತಿದ್ದಾರಲ್ಲಾ...**

- ನಿಜ ಹೇಳಬೇಕೆಂದರೆ ಪುನೀತ್, ಮುರುಳಿ, ವಿಜಯ್.. ಮೊದಲಾದ ನಟರು ನೃತ್ಯ ಮಾಡುವಾಗ ನನಗೆ ಅಸೂಯೆಯಾಗುತ್ತದೆ. ಅವರಷ್ಟು ಚೆನ್ನಾಗಿ ನೃತ್ಯ ಮಾಡಲು ನನ್ನಿಂದಾಗುತ್ತಿಲ್ಲವಲ್ಲ ಎಂದು. ಹೇಗೋ ನನ್ನ ಮೈನಸ್ ಪಾಯಿಂಟ್‌ಗಳನ್ನು ಮರೆಮಾಚಿ ನೃತ್ಯ ಮಾಡುತ್ತಿದ್ದೇನೆ.


- **ನೀವು ಮತ್ತು ವಿಷ್ಣುವರ್ಧನ್ ಹಿಂದಿಯ 'ಸರ್ಕಾರ್' ಚಿತ್ರದ ಕನ್ನಡ ಅವತರಣಿಕೆಯಲ್ಲಿ ನಟಿಸುವ ಯೋಜನೆ ಏನಾಯಿತು?**

-ನಾನು ಆ ಚಿತ್ರದ ಹಕ್ಕನ್ನು ತಂದಿದ್ದೇನೆ. ಆದರೆ ದಿಢೀರನೆ ವಿಷ್ಣು ಸಾರ್‌ಗೆ ಅದರಲ್ಲಿ ನಟಿಸುವ ಆಸಕ್ತಿ ಕಡಿಮೆ ಯಾಯಿತು. ಆದರೆ ವಿಷ್ಣು ಸಾರ್ ಬಿಟ್ಟು ಬೇರೆ ಕಲಾವಿದರನ್ನು ಹಾಕಿ ಆ ಚಿತ್ರ ಮಾಡುವುದಿಲ್ಲ, ಹೀಗಾಗಿ ಅವರ ಫೋನ್ ಕರೆಗಾಗಿ ಕಾದು ಕುಳಿತ್ತಿದ್ದೇನೆ. (ಹೀಗೆ ವಿಷ್ಣುವರ್ಧನ್ ಅವರ ಬಗ್ಗೆ ಮಾತನಾಡುತ್ತಿದ್ದಾಗಲೇ ಸುದೀಪ್ ಕೂಡಾ ದಿಢೀರನೆ ಫಿಲಾಸಫಿ ಕಡೆ ವಾಲಿದರು) ಈ ಉದ್ಯಮ ಸಾಕೆನಿಸುತ್ತಿದೆ. ನಾನು ಯಾವುದೇ ಸಂದರ್ಭದಲ್ಲೂ ಸಡನ್ ಆಗಿ ನಿವೃತ್ತಿ ಘೋಷಿಸಲೂಬಹುದು.

ಆದರೂ ಇದನ್ನು ತಮಾಷೆಗಾಗಿ ಇರಬಹುದು ಎಂದುಕೊಳ್ಳುವಾಗಲೇ ಕನಿಷ್ಠ ಮೂರು ಬಾರಿ ಅವರು 'ನಿವೃತ್ತಿ' ಮಾತನ್ನು ಪುನರುಚ್ಚರಿಸಿದ್ದರು. ಅದರರ್ಥ ಅವರು ರಾಜಕೀಯದತ್ತ ವಾಲುತ್ತಿರಬಹುದೇ? ಗೊತ್ತಿಲ್ಲ.

● ಶ್ರೇಣಿ

ನಮಗೆಂದೂ ಅಂಥ ಬಡತನ ಬಂದಿಲ್ಲ!



ಸುದರ್ಶನ್-ಶೈಲಶ್ರೀ ದಂಪತಿಗಳ ನೊಂದ ನುಡಿ

ಹಲವಾರು ದಶಕಗಳಿಂದ ಚಿತ್ರರಂಗಕ್ಕೆ ಅನುಪಮ ಸೇವೆ ಸಲ್ಲಿಸುತ್ತಾ ಬಂದಿರುವ ಕಲಾವಿದನ ಬಗ್ಗೆ ಪತ್ರಿಕೆಯೊಂದು ನಿಕೃಷ್ಟರನ್ನಾಗಿ ಚಿತ್ರಿಸಿ ಬರೆದರೆ ಆ ಕಲಾವಿದನ ಮನಸ್ಸಿಗೆ ಹೇಗೆನ್ನಿಸಬೇಕು?

ಇಂಥದ್ದೊಂದು ಘಟನೆ ಮೊನ್ನೆ ನಡೆದಿದೆ.

ಕನ್ನಡ ಚಿತ್ರರಂಗದ ನಿರ್ಮಾತೃಗಳಲ್ಲಿ ಒಬ್ಬರಾದ ಆರ್. ನಾಗೇಂದ್ರರಾಯರ ಅನರ್ಘ್ಯ ಪುತ್ರತ್ರಯರಲ್ಲಿ ಒಬ್ಬರಾದ ಸುದರ್ಶನ್‌ರ ಬಗ್ಗೆ 'ವಿಜಯ ಕರ್ನಾಟಕ' ಪತ್ರಿಕೆ ಅವಹೇಳನಕಾರಿಯಾಗಿ ವರದಿ ಮಾಡಿದ್ದರಿಂದ ಅವರು ಮಮ್ಮಲ ಮರುಗುತ್ತಿದ್ದಾರೆ. ಈ ಬಗ್ಗೆ ಸ್ವತಃ ಸುದರ್ಶನ್ ಮತ್ತು ಅವರ ಪತ್ನಿ ಶೈಲಶ್ರೀ 'ಲಂಕೇಶ್'ಗೆ ಕರೆ ಮಾಡಿ ತಮ್ಮ ಬೇಸರವನ್ನು ತೋಡಿಕೊಂಡರು.

ಮೊನ್ನೆ ಮಾರ್ಚ್ 21ರ 'ವಿಜಯ ಕರ್ನಾಟಕ'ದ ಮುಖಪುಟದಲ್ಲಿ 'ಅಪಾರ ಕೀರ್ತಿ ಗಳಿಸಿ ಮೆರೆದ ಸುದರ್ಶನ ಇಂದು...' ಎಂಬ ಶೀರ್ಷಿಕೆಯಡಿ ಒಂದು ವರದಿ ಪ್ರಕಟಗೊಂಡಿತ್ತು, ಅದರಲ್ಲಿ "ಇಂದು ಸುದರ್ಶನ್ ಅನ್ನ ನೀರಿಗೂ ಕಷ್ಟ ಪಡುತ್ತಿದ್ದಾರೆ. ನಟಿಸಲು ಅವಕಾಶಗಳೇ ಇಲ್ಲದಿದ್ದ ದಿನಗಳಲ್ಲಿ ಸಾಲಗಾರರು ಅವರ ಮನೆಯ ಮುಂದೆ ಟೆಂಟ್ ಹಾಕಿದ್ದರು. ಇದರಿಂದ ನೊಂದ ಸುದರ್ಶನ್ ಮತ್ತು ಅವರ ಪತ್ನಿ ಶೈಲಶ್ರೀ ಇಬ್ಬರೂ ಅದೊಂದು ದಿನ ಆತ್ಮಹತ್ಯೆಯ ನಿರ್ಧಾರವನ್ನು ತೆಗೆದುಕೊಂಡಿದ್ದರು" ಎಂಬಿತ್ಯಾದಿಯಾಗಿ ಬರೆಯಲಾಗಿತ್ತು.

ಇಷ್ಟು ಬರೆದದ್ದು ಸಾಲದೆಂಬಂತೆ "ಯಾರಿಗಾದರೂ ಸಹಾಯ ಮಾಡುವ ಮನಸ್ಸಿದ್ದರೆ ಸುದರ್ಶನ್ ಅವರ ಮೊಬೈಲ್‌ಗೆ ಕರೆ ಮಾಡಿ" ಎಂದು ಅವರ ಮೊಬೈಲ್ ಸಂಖ್ಯೆಯನ್ನೂ ಪ್ರಕಟಿಸಲಾಗಿತ್ತು.

ಅವತ್ತು ಬೆಳಗ್ಗೆ ಆರು ಗಂಟೆ ಹೊತ್ತಿಗೆ ಈ ದಂಪತಿಗಳಿನ್ನೂ ನಿದ್ರೆಯ ಮಂಪರಿನಲ್ಲಿರುವಾಗಲೇ ಸುದರ್ಶನ್‌ರ ಸೆಲ್ ರಿಂಗಾಗಿದೆ. ಫೋನ್ ರಿಸೀವ್ ಮಾಡಿದ ಶೈಲಶ್ರೀ ಅವರು "ಯಾರು ಮಾತಾಡ್ತಿರೋದು?" ಎಂದು ಕೇಳಿದ್ದಾರೆ. ತಕ್ಷಣ ಆ ಕಡೆಯಿದ್ದ ವ್ಯಕ್ತಿ ಏನಂದಿದ್ದಾನೆ ಗೊತ್ತೆ? "ನಾನೂ ನಿಮ್ಮ ಹಾಗೇ ಕೇರಾಫ್ ಫುಟ್‌ಪಾತ್. ನಿಮ್ಮಂತೆಯೇ ನಾನೂ ಚೆನ್ನಾಗೇ ಬದುಕಿದ್ದೆ. ಈಗ ಪಾಪರ್ ಆಗ್ಬಿಟ್ಟಿದ್ದೀನಿ. ನಿಮ್ಗೇನಾದ್ರೂ ಸಹಾಯ ಮಾಡಣಾ ಅಂದ್ರೆ ನನ್ನತ್ರ ಏನೂ ಇಲ್ಲ, ದೇವ್ರು ನಿಮ್ಗೆ ಒಳ್ಳೇದು ಮಾಡ್ಲಿ" ಎಂದು ಹೇಳಿ ಫೋನಿಟ್ಟಿದ್ದಾನೆ. ಇದಾದನಂತರ ಅವತ್ತಿನ ದಿನವಿಡೀ ಕರೆಗಳನ್ನು ಮಾಡಿದ ಅಭಿಮಾನಿಗಳು "ನಿಮಗೆ ಹಣ ಬೇಕಾ? ದುಡ್ಡನ್ನು ಎಲ್ಲಿಗೆ ತಂದುಕೊಡಬೇಕು?...." ಹೀಗೆ ಸಹಾಯಹಸ್ತ ಚಾಚುವ ಮಾತುಗಳನ್ನಾಡಿದ್ದಾರೆ.

ಸುದರ್ಶನ್ ಕುಟುಂಬ ನಿಜಕ್ಕೂ ಆ ಪರಿಯ ಬಡತನಕ್ಕೀಡಾಗಿದ್ದರೆ ಆ ಮಾತು ಬೇರೆ ಇರುತ್ತಿತ್ತು, ಆದರೆ ಮೊದಲೇ ಸ್ವಾಭಿಮಾನಿಗಳಾದ ಸುದರ್ಶನ್ ದಂಪತಿಗಳು ಇವತ್ತಿಗೂ ದುಡಿದು ಜೀವನ ಮಾಡುತ್ತಿರುವುದರಿಂದ ಬಂದ ದೂರವಾಣಿ ಕರೆಗಳು ಇವರನ್ನು ಆಘಾತಕ್ಕೀಡುಮಾಡಿದೆ.



ಪಾರ ಕೀರ್ತಿ ಗಳಿಸಿ ಮೆರೆದ ಸುದರ್ಶನ ಇಂದು...

ಸುದರ್ಶನ್ ಮತ್ತು ಶೈಲಶ್ರೀ ಇಬ್ಬರೂ ಬಹಳ ವರ್ಷಗಳಿಂದ ಚೆನ್ನೈನಲ್ಲೇ ನೆಲೆಸಿದ್ದರು. ಆದರೆ ಅಲ್ಲೂ ಕೂಡ ಅವರು ಮಾಡುತ್ತಿದ್ದುದು ಕನ್ನಡ ಸೇವೆಯನ್ನೇ. ಹೇಗೆಂದರೆ, ತಮಿಳಿನಲ್ಲಿ ಮಕ್ಕಳ ಕಾರ್ಟೂನ್ ಧಾರಾವಾಹಿಗಳು ತಯಾರಾಗುತ್ತವೆ. ಆ ಧಾರಾವಾಹಿಗಳನ್ನು ಶೈಲಶ್ರೀ ಕನ್ನಡಕ್ಕೆ ಅನುವಾದಿಸುತ್ತಿದ್ದರು. ನಂತರ ಸುದರ್ಶನ್ ಅವರು ಆ ಧಾರಾವಾಹಿಯ ಕಾರ್ಟೂನ್‌ಗಳಿಗೆ ತಮ್ಮ ವಿವಿಧ ಧ್ವನಿಯನ್ನು ನೀಡುವ ಮೂಲಕ ಆ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ಈಗಲೂ ಸಹ ಅವರು ಅದೇ ಉದ್ಯೋಗವನ್ನು ಮುಂದುವರೆಸಿದ್ದಾರೆ. ಇದರೊಂದಿಗೆ ತಮಿಳಿನ ಕೆಲವು ಸೀರಿಯಲ್‌ಗಳಲ್ಲೂ ಇವರು ಬಿಜಿ ನಟರಾಗಿದ್ದರು.

'ಮಠ' ಚಿತ್ರದಲ್ಲಿ ಜಗ್ಗೇಶ್‌ರೊಂದಿಗೆ ಅಭಿನಯಿಸಿದಾಗಿನಿಂದ ಜಗ್ಗೇಶ್ "ನೀವು ಬೆಂಗಳೂರಿಗೇ ಬಂದುಬಿಡಿ" ಎಂದು ಸುದರ್ಶನ್‌ರಿಗೆ ಆಗಾಗ ಹೇಳುತ್ತಿದ್ದರಂತೆ. ಕಳೆದ ನವೆಂಬರ್‌ನಲ್ಲಿ ಸುದರ್ಶನ್ ದಂಪತಿಗಳು ಜಗ್ಗೇಶ್ ಮನೆಗೆ ಭೇಟಿ ನೀಡಿದಾಗ ತಮ್ಮ ಮನೆ ಹಿಂಭಾಗದ ಮನೆಯೊಂದಕ್ಕೆ ಕರೆದೊಯ್ದು, ತಕ್ಷಣ ಅವರೇ ಮನೆಯ ಅಡ್ವಾನ್ಸ್ ಅನ್ನೂ ನೀಡಿ "ಮಲ್ಲೇಶ್ವರದಲ್ಲಿ ತಡ ಮಾಡಿದರೆ ಬಾಡಿಗೆ ಮನೆ ಸಿಗೋದು ಕಷ್ಟ" ಎಂದು ಹೇಳಿ ಈ ಮನೆಗೇ ಬಂದುಬಿಡಿ ಎಂದರಂತೆ. ಜಗ್ಗೇಶ್ ಅವರ ಒತ್ತಾಸೆಯಂತೆ ಕಳೆದ ನವೆಂಬರ್‌ನಿಂದಲೂ ಸುದರ್ಶನ್ ದಂಪತಿಗಳು ಮಾಸಿಕ ಹತ್ತು ಸಾವಿರ ಬಾಡಿಗೆ ನೀಡುತ್ತಾ ಮಲ್ಲೇಶ್ವರದಲ್ಲೇ ನೆಲೆಸಿದ್ದಾರೆ.

ಹೀಗೆ ಕಷ್ಟವೋ ಸುಖವೋ ಆತ್ಮಗೌರವದಿಂದ ಬದುಕುತ್ತಿರುವ ಸುದರ್ಶನ್‌ರ ಬಗ್ಗೆ 'ವಿಕ' ಈ ರೀತಿಯಾಗಿ ಬರೆದಿದ್ದರಿಂದ ಕುಪಿತಗೊಂಡ ಅವರು ಸಂಪಾದಕ ವಿಶ್ವೇಶ್ವರ ಭಟ್ಟರಿಗೇ ಫೋನಾಯಿಸಿ ತರಾಟೆಗೆ ತೆಗೆದುಕೊಂಡರಂತೆ. ಭಟ್ಟರು ಶೀಘ್ರದಲ್ಲೇ ನಿಜಸಂಗತಿಯನ್ನು ಪ್ರಕಟಿಸುವುದಾಗಿ ಭರವಸೆ ನೀಡಿದ್ದಾರಂತೆ.

"ನಮ್ಮ ಅಣ್ಣ ಆರ್.ಎನ್. ಜಯಗೋಪಾಲ್ ಅವರ ಬಗ್ಗೆಯೂ ಇದೇ ರೀತಿ ಬರೆದ ಕೆಲವರು ಅವರು ರಾಮಾಯಣ ಧಾರಾವಾಹಿಯನ್ನು ಮಾಡಿ ಲಾಸ್ ಆಗಿ ಜೀವಬಿಟ್ಟರು ಎಂದು ಬರೆದರು. ಅಸಲಿಗೆ ಜಯಗೋಪಾಲ್ ಅವರ ಕಿವಿಯ ಪಕ್ಕ ಒಂದು ಕ್ಯಾನ್ಸರ್ ಗಡ್ಡೆಯಾಗಿತ್ತು, ಇದಕ್ಕಾಗಿ ನಡೆಸಿದ ಕೀಮೋ ಥೆರಪಿ ಟ್ರೀಟ್‌ಮೆಂಟಿನಲ್ಲಿ ವೈಪರೀತ್ಯವಾಗಿ ಅವರು ಜೀವ ತೊರೆಯಬೇಕಾಯಿತು" ಎನ್ನುತ್ತಾರೆ ಸುದರ್ಶನ್.

"ನಮ್ಮಂಥ ಕಲಾವಿದರ ಕಲಾ ಪ್ರತಿಷ್ಠೆಗೆ ಬಡತನವಿರಬಹುದೇ ಹೊರತು ನಮ್ಮ ಜೀವನದಲ್ಲಿ ಆ ಪತ್ರಿಕೆಯವರು ಬರೆದ ಹಾಗೆ ಊಟ ತಿಂಡಿಗೂ ಪರದಾಡುವಷ್ಟು ಕೆಟ್ಟ ಬಡತನವೇನೂ ಇಲ್ಲ, ನಾವು ಚೆನ್ನಾಗೇ ನೆಮ್ಮದಿಯಿಂದ ಬಾಳ್ವೆ ನಡೆಸುತ್ತಿದ್ದೇವೆ" ಎಂದು ನೊಂದ ದನಿಯಲ್ಲಿ ನುಡಿಯುತ್ತಾರೆ ಸುದರ್ಶನ್ ಮತ್ತು ಶೈಲಶ್ರೀ.

ಹೌದು. ಕೆಲ ಪತ್ರಿಕೆ-ಬರಹಗಾರರಿಗೆ ತಾವು ಬಡ ಕಲಾವಿದರ ಬದುಕನ್ನು ವರ್ಣಿಸಿ ಬರೆದರೆ ತಮ್ಮ ವರ್ಚಸ್ಸು ಅಪಾರವಾಗಿ ವೃದ್ಧಿಸುತ್ತದೆ ಎನ್ನುವ ಭರದಲ್ಲಿ ಉತ್ತಮ ರೀತಿಯಲ್ಲಿ ಬದುಕುತ್ತಿರುವ ಕಲಾವಿದರನ್ನೂ ನಿಕೃಷ್ಟರನ್ನಾಗಿ ಚಿತ್ರಿಸುವ, ಕಲ್ಪಿತ ವರದಿಗಳನ್ನು ಸೃಷ್ಟಿಸುವ ಕೆಟ್ಟ ಪ್ರವೃತ್ತಿ ಬೆಳೆದುಬಂದಿದೆ.

ಇಂತಹ ಬರವಣಿಗೆಯಿಂದ ಆ ಕಲಾವಿದರ ಮನಸ್ಸಿಗಾಗುವ ವೇದನೆಗೆ ಸುದರ್ಶನ್ ಇಂದು ನಿದರ್ಶನರಾಗಿದ್ದಾರೆ. ■

R B P LANKESH, Kannada Weekly Price Rs. 12/- 8-04-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಪ್ರೇಮ್ ಗಿಮಿಕ್ ಪುನೀತ್ ಮ್ಯಾಜಿಕ್!



ಗಾಂಧಿನಗರದಲ್ಲಿ ಈಗ ಎಲ್ಲರ ಕಣ್ಣು ಪ್ರೇಮ್-ಪುನೀತ್ ಜೋಡಿಯ 'ರಾಜ್' ಚಿತ್ರದ ಮೇಲೆ. ಇದಕ್ಕೆ ಕಾರಣ ಇಷ್ಟೇ... ಈ ವರ್ಷ ಸೋ ಫಾರ್ ಯಾವ ಚಿತ್ರದ ನಿರ್ಮಾಪಕನೂ ಹಣ ಮಾಡಿಲ್ಲ. ಎಲ್ಲರೂ ಇದುಗಂಟು ಕಳೆದುಕೊಂಡವರೇ....

'ವೀರ ಮದಕರಿ' ಗೆಲ್ಲಬಹುದು, ಮಾಲಾಶ್ರೀ ಮತ್ತೆ ಬಾಕ್ಸಾಫೀಸ್‌ನಲ್ಲಿ ಕಾಸು ಮಾಡಬಹುದು, 'ನಂಯಜಮಾನ್ರು' ಹಿಟ್ ಆಗಬಹುದು ಎಂಬ ನಿರೀಕ್ಷೆಗಳೆಲ್ಲಾ ಸುಳ್ಳಾಗಿವೆ. ಹೀಗಾಗಿ ಗಾಂಧಿನಗರದಲ್ಲಿ ಸೋಲಿನ ಸರಪಳಿಯಿಂದ ಹೊರಬರಲು 'ರಾಜ್'ಗೆ ಮಾತ್ರ ಸಾಧ್ಯ ಎಂಬ ಮಾತು ಕೇಳಿಬರುತ್ತದೆ.

'ರಾಜ್' ಚಿತ್ರದ ಬಗ್ಗೆ ನಿರೀಕ್ಷೆ ಇರಲು ಕಾರಣ ಪುನೀತ್ ಮತ್ತು ಪ್ರೇಮ್ ಇದೇ ಮೊದಲ ಬಾರಿಗೆ ಜೊತೆಯಾಗಿರುವುದು. ಕಳೆದ ವರ್ಷದ ಲಕ್ಕಿ ನಿರ್ಮಾಪಕ ಸುರೇಶ್ ಗೌಡರ ಈ ಚಿತ್ರಕ್ಕೆ ಈ ಬಾರಿಯೂ ಅದೃಷ್ಟ ಒಲಿಯಬಹುದೇನೋ?

ಪುನೀತ್ ಈ ಚಿತ್ರಕ್ಕಾಗಿಯೇ ತನ್ನ ಹೇರ್‌ಸ್ಟೈಲ್ ಬದಲಾಯಿಸಿರುವುದು, ಉಡುಪುಗಳು ಚಿತ್ರವಿಚಿತ್ರವಾಗಿರುವುದು ಅವರ ಅಭಿಮಾನಿಗಳ ಕುತೂಹಲ ಕೆರಳಿಸಿದೆ. ಅಷ್ಟೇ ಅಲ್ಲ, ರಾಜ್‌ಕುಮಾರ್ ಜೊತೆ ನಟಿಸಿದ್ದ ಭಾರತಿ, ಸುಮಲತಾ, ಜಯಪ್ರದ, ಜಯಮಾಲಾ, ಬಿ. ಸರೋಜಾದೇವಿ ಈಗ ರಾಜ್ ಪುತ್ರ ಪುನೀತ್ ಜೊತೆ ಹಾಡೊಂದರಲ್ಲಿ ನರ್ತಿಸಿದ್ದಾರೆ. ಹೀಗೆ ಪ್ರೇಮ್ ಎಂದಿನಂತೆ ತನ್ನದೇ ಆದ ಕೆಲವು ಗಿಮಿಕ್‌ಗಳನ್ನು ಮಾಡಿದ್ದಾರೆ. ಪ್ರೇಮ್ ಗಿಮಿಕ್ ಮತ್ತು ಪುನೀತ್ ಮ್ಯಾಜಿಕ್ ವರ್ಕ್‌ಔಟ್ ಆದರೆ ಚಿತ್ರ ಗೆಲ್ಲಬಹುದು. ಇಲ್ಲದಿದ್ದರೆ ಗಾಂಧಿನಗರದಲ್ಲಿನ ಪ್ರಸ್ತುತ ಸೋಲಿನ ಮೆರವಣಿಗೆಯಲ್ಲಿ ಇವರು ಸೇರಿಕೊಳ್ಳಬಹುದು!

ಜೋಡಿಯಾಗಿ ಬಂದ ಅಭಿ-ರಾಂ!

'ಜೋಡಿ ನಂ.1' ಎಂಬ ಚಿತ್ರ ಸದ್ಯದಲ್ಲೇ ತೆರೆ ಕಾಣಲಿದೆ. ಚಿತ್ರದ ಹೆಸರು ಕೇಳಿದಾಕ್ಷಣ ಈ ಚಿತ್ರದಲ್ಲಿ ಮಹಾನ್ ಮಹಾನ್ ನಾಯಕನಟರು ನಟಿಸಿದ್ದಾರೆ ಎಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪು, ಇಷ್ಟಾಗಿಯೂ ಚಿತ್ರದ ಟೈಟಲ್‌ಗೂ, ಅದರ ಕಥೆಗೂ, ಅದರಲ್ಲಿನ ತಾರಾಗಣಕ್ಕೂ ಸಂಬಂಧ ಇರಲೇಬೇಕೆಂದೇನೂ ಇಲ್ಲ ತಾನೇ?

'ಜೋಡಿ ನಂ.1'ನಲ್ಲಿ ಕನ್ನಡದ ಪ್ರೇಕ್ಷಕ ಮಹಾಶಯರು ಈ ಹಿಂದೆಯೇ ತಿರಸ್ಕರಿಸಿದ್ದ ಅಭಿಜಿತ್ ಮತ್ತು ರಾಮ್‌ಕುಮಾರ್ ನಾಯಕ ನಟರಾಗಿ ನಟಿಸಿದ್ದಾರೆ. ಇದು ಅಭಿಜಿತ್ ತನ್ನ ಸ್ವಂತ ನಿರ್ಮಾಣ ಸಂಸ್ಥೆಯಿಂದ ನಿರ್ಮಿಸಿರುವ ಚಿತ್ರ. ಅಷ್ಟೇ ಅಲ್ಲ, ಈ ಚಿತ್ರದ ಮುಖಾಂತರ ಅವರು ನಿರ್ದೇಶಕರಾಗಿಯೂ ಪಾದಾರ್ಪಣೆ ಮಾಡಲಿದ್ದಾರೆ. ಅಭಿಜಿತ್ ಮತ್ತು ರಾಮ್‌ಕುಮಾರ್ ಪ್ರತಿಭಾವಂತರಾದರೂ ಯಾಕೋ ಯಶಸ್ಸು ಅವರಿಗೆ ಮರೀಚಿಕೆಯಾಗಿತ್ತು. ಈ ಚಿತ್ರದ ಮುಖಾಂತರ ಮತ್ತೊಮ್ಮೆ ಈ ಜೋಡಿ ಲೈಮ್‌ಲೈಟ್‌ಗೆ ಬರುವ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಅವರಿಗೆ ಶುಭವಾಗಲಿ.

ಲಂಬೂ ನಂ.1: ಜೀವನ್



ಕನ್ನಡಕ್ಕೆ ಅತ್ಯಂತ ಎತ್ತರದ ನಾಯಕನಟ ಬಂದಿದ್ದಾನೆ. ಈತನ ಹೆಸರು ಜೀವನ್. ಈತನದು ದರ್ಶನ್ ಮತ್ತು ಸುದೀಪ್‌ಗಿಂತಲೂ ಒಂದಿಷ್ಟು ಎತ್ತರದ ದೇಹ. ಕನ್ನಡ ಚಿತ್ರರಂಗ ಕಂಡ ಅತ್ಯಂತ ಎತ್ತರದ ನಾಯಕಿ ಪ್ರೇಮಾಳ ಜಿಲ್ಲೆಯಾದ ಕೊಡಗಿನಿಂದಲೇ ಈತನೂ ಬಂದಿರುವುದು ಕಾಕತಾಳೀಯ. ಅಂದಹಾಗೆ ಜೀವನ್ ನಟಿಸಿರುವ 'ಮಚ್ಚಾ' ಚಿತ್ರ ಸಂಪೂರ್ಣಗೊಂಡಿದ್ದು ಈಗ ಬಿಡುಗಡೆಗೆ ರೆಡಿಯಾಗಿದೆ. ನೋಡಲು ತೆಳ್ಳಗೆ ಬೆಳ್ಳಗಿರುವ ಈತನದು ದುಂಡುಮುಖ. ಕಾತುರ ಸೂಸುವ ದೊಡ್ಡದೊಡ್ಡ ಕಂಗಳು. ಈ ಹಿಂದೆ ಮಾಡೆಲ್ ಆಗಿ ಸ್ವಲ್ಪ ರ್‍ಯಾಂಪ್ ಷೋಗಳಲ್ಲಿ ಭಾಗವಹಿಸಿದ್ದು ಬಿಟ್ಟರೆ ನಟನೆ ಬಗ್ಗೆ ಬೇರೇನೂ ಗೊತ್ತಿಲ್ಲ. ಮೊದಲ ಚಿತ್ರ ಸಂಪೂರ್ಣಗೊಳ್ಳುವ ಮೊದಲೇ ಈತನಿಗೆ ಹಿಂದಿಯಿಂದಲೂ ಬುಲಾವ್ ಬಂದಿದೆ. ಅದಕ್ಕಾಗಿ ಮುಂಬೈಯ ಲೋಕಲ್ ಟ್ರೇನ್‌ಗಳಲ್ಲಿ ಪ್ರಯಾಣ ಮಾಡುತ್ತಾ ಅಲ್ಲಿನ ಜನಸಾಮಾನ್ಯರ ಆಡುಭಾಷಾ ಶೈಲಿಯನ್ನು ಕಲಿಯುತ್ತಿದ್ದಾನಂತೆ! ದರ್ಶನ್ ಕೂಡಾ 'ಮೆಜೆಸ್ಟಿಕ್' ಚಿತ್ರದಲ್ಲಿ ಲಾಂಗ್-ಮಚ್ಚು ಹಿಡಿದುಕೊಂಡೆ ಬಂದಿದ್ದು. 'ಮಚ್ಚಾ' ಬಾಕ್ಸಾಫೀಸ್‌ನಲ್ಲಿ ಗೆದ್ದರೆ ದರ್ಶನ್ ತರಹ ಈತನಿಗೂ ಅದೃಷ್ಟದ ಬಾಗಿಲು ತೆರೆದು ಅವಕಾಶಗಳು ಹುಡುಕಿಕೊಂಡು ಬರಬಹುದು.

ಗೆಲುವಿನ ಜೊತೆಗಾರ?



ಕಳೆದ ವರ್ಷದಿಂದ ಸೋಲಿನ ಸರಪಳಿಯಲ್ಲಿ ಸಿಲುಕಿರುವ 'ನೆನಪಿರಲಿ' ಖ್ಯಾತಿಯ ಪ್ರೇಮ್ ಈ ವರ್ಷ ತನ್ನ ಅದೃಷ್ಟ ಪರೀಕ್ಷಿಸಿಕೊಳ್ಳಲು ಮುಂದಾಗಿದ್ದಾರೆ. ಆತ 'ಗೌತಮ್', 'ಜೊತೆಗಾರ', 'ಸಿಹಿಮುತ್ತು' ಮತ್ತು 'ಜನುಮ ಜನುಮದಲ್ಲೂ'... ಹೀಗೆ ನಾಲ್ಕು ಚಿತ್ರಗಳನ್ನು ಮುಗಿಸಿದ್ದಾರೆ.

ಈ ನಾಲ್ಕರಲ್ಲಿ ಒಂದು ಗೆದ್ದರೂ ಪ್ರೇಮ್‌ಗೆ ಮತ್ತೆ ಅದೃಷ್ಟ ಒಲಿದಂತೆಯೇ ಸರಿ. ಅಂದಹಾಗೆ ಕಳೆದವರ್ಷ ರತ್ನಜಾ ನಿರ್ದೇಶನದ 'ಹೊಂಗನಸು' ಚಿತ್ರ ದೊಡ್ಡ ನಿರೀಕ್ಷೆಯನ್ನು ಹುಟ್ಟಿಸಿತ್ತಾದರೂ ಬಾಕ್ಸಾಫೀಸ್‌ನಲ್ಲಿ ಅಮೋಘವಾಗಿ ನೆಲಕಚ್ಚಿತ್ತು.

'ಜೊತೆಗಾರ'ದಲ್ಲಿ ಪ್ರೇಮ್‌ಗೆ ರಮ್ಯಾ ಜೊತೆಗಾತಿ. ಈ ಜೋಡಿಯ ಹಿಂದಿನ ಚಿತ್ರ 'ಜೊತೆಜೊತೆಯಲಿ'. ಮತ್ತೆ ಈ ಜೋಡಿ ಮ್ಯಾಜಿಕ್ ಮಾಡಬಹುದು ಎಂದು ನಿರ್ಮಾಪಕ ಅಶ್ವಿನಿ ರಾಮಪ್ರಸಾದ್ ಕನಸು ಕಾಣುತ್ತಿದ್ದಾರೆ. ಈ ಮಧ್ಯೆ ಸೂರಪ್ಪ ಬಾಬು 'ಗೌತಮ್' ಅನ್ನು ತನ್ನ ಹಳೆ ಪ್ಲಾನ್ ಕೈಬಿಟ್ಟು ದೊಡ್ಡ ಥಿಯೇಟರ್‌ನಲ್ಲಿ ರಿಲೀಸ್ ಮಾಡಲು ಮನಸ್ಸು ಮಾಡಿರುವುದು ಪ್ರೇಮ್‌ಗೆ ಸಮಾಧಾನ ತಂದಿದೆ. 'ಸಿಹಿಮುತ್ತು' ಮತ್ತು 'ಜನುಮಜನುಮದಲ್ಲಿ' ಚಿತ್ರಗಳ ಬಿಡುಗಡೆ 'ಗೌತಮ್' ಯಶಸ್ಸನ್ನು ಅವಲಂಬಿಸಿವೆ.

ಮಿನುಗಲಿರುವ ನಕ್ಷತ್ರ





ಹಿರಿಯ ನಿರ್ದೇಶಕ ಡಿ. ರಾಜೇಂದ್ರ ಬಾಬು ಅವರ ಕಿರಿ ಮಗಳು ನಕ್ಷತ್ರ ಈಗಷ್ಟೇ ಸುನಿಲ್ ಕುಮಾರ್ ದೇಸಾಯಿ ಅವರ ಚಿತ್ರ 'ಸರಿಗಮ'ದಲ್ಲಿ ಹಾಡುತ್ತಿರುವಾಗಲೇ ಆಕೆಗೆ ಮೇಲಿಂದ ಮೇಲೆ ಅವಕಾಶಗಳ ಸುರಿಮಳೆಯಾಗುತ್ತಿದೆ. ಇಷ್ಟರಲ್ಲೇ ಸೆಟ್ಟೇರಲಿರುವ, ಶ್ರೀಮುರಳಿ ನಾಯಕನಾಗಿ ಅಭಿನಯಿಸುತ್ತಿರುವ 'ಹರೆ ರಾಮ ಹರೆ ಕೃಷ್ಣ'ದಲ್ಲೂ ಈಕೆಯೇ ನಾಯಕಿ. ಯುವ ನಿರ್ದೇಶಕ ಅಶೋಕ್ ನಿರ್ದೇಶಿಸುತ್ತಿರುವ ಈ ಚಿತ್ರಕ್ಕೆ ಸಂಗೀತ ಜ್ಞಾನಿ ಇಳಯರಾಜಾ ಈಗಾಗಲೇ ಸಂಗೀತವನ್ನು ನೀಡಿದ್ದಾರೆ.

ಇದಲ್ಲದೆ ಇನ್ನೂ ಅನೇಕ ಚಿತ್ರಗಳಲ್ಲಿ ನಟಿಸುವಂತೆ ಮಾತುಕತೆಗಳು ನಡೆಯುತ್ತಿರುವ ಸಂದರ್ಭದಲ್ಲೇ ಈಕೆಗೆ ಮಲಯಾಳಂನ ಖ್ಯಾತ ನಿರ್ದೇಶಕ ವಾಸುದೇವನ್ ನಾಯರ್‌ರಿಂದಲೂ ತಮ್ಮ ಚಿತ್ರದಲ್ಲಿ ನಟಿಸುವಂತೆ ಬುಲಾವ್ ಬಂದಿದೆ.

ಮೌಂಟ್ ಕಾರ್ಮೆಲ್ಸ್‌ನಲ್ಲಿ ಬಯೋಟೆಕ್ನಾಲಜಿಯ ಅಂತಿಮ ಬಿಎಸ್ಸಿ ಓದುತ್ತಿರುವ ನಕ್ಷತ್ರಾಳನ್ನು ಸದ್ಯಕ್ಕೆ ಚಿತ್ರರಂಗಕ್ಕೆ ಪರಿಚಯಿಸುವುದು ಬೇಡ ಎಂದುಕೊಂಡಿದ್ದ ರಾಜೇಂದ್ರ ಬಾಬು ಮತ್ತು ಸುಮಿತ್ರಾ ದಂಪತಿಗಳು ಮಗಳ ಒತ್ತಾಸೆಗೆ ಮಣಿದು 'ಸರಿಗಮ'ದಲ್ಲಿ ನಟಿಸಲು ಅನುಮತಿಕೊಟ್ಟಿದ್ದರು. ಆದರೆ ಈಗ ನೋಡಿದರೆ ನಕ್ಷತ್ರಾ ತನ್ನ ಅಕ್ಕ ಉಮಾಳಿಗಿಂತಲೂ ಒಂದಷ್ಟು ಹೆಜ್ಜೆ ಮುಂದೆ ಹೋಗುವ ಸಾಧ್ಯತೆಗಳನ್ನು ತೋರುತ್ತಿದ್ದಾಳೆ.

ಸುಮಿತ್ರಾ ಅವರು ಪೋಷಕ ಪಾತ್ರಗಳಲ್ಲಿ ಬಿಜಿಯಾಗಿದ್ದರೂ ಮಗಳಿಗಾಗಿ ತಮ್ಮ ಕೆಲಸವನ್ನು ಬದಿಗೊತ್ತಿ ನಕ್ಷತ್ರಳಿಗೆ ಬೆಂಗಾವಲಾಗಿ ನಿಂತಿದ್ದಾರೆ.

ಇದೆಲ್ಲದರೊಂದಿಗೆ ಸ್ವತಃ ಖ್ಯಾತ ನಿರ್ದೇಶಕರಾಗಿರುವ ಡಿ. ಬಾಬು ತಮ್ಮ ಮುದ್ದು ಮಗಳಿಗಾಗಿ ತಾವೇ ಚಿತ್ರವೊಂದನ್ನು ನಿರ್ದೇಶಿಸಲು ಕಥೆ ಹೊಸೆಯುವುದರಲ್ಲಿ ನಿರತರಾಗಿದ್ದಾರೆ.

ಪ್ರಚಾರದ ಜೋಶ್!

ಬಹುತೇಕ ಹೊಸಬರೇ ನಟಿಸಿರುವ 'ಜೋಶ್' ಚಿತ್ರ ಈಗ ಬಿಡುಗಡೆಗೆ ರೆಡಿಯಾಗಿದೆ. ಇದು ನಿರ್ಮಾಪಕ ಎಸ್.ವಿ.ಬಾಬು ಮತ್ತು ನಿರ್ದೇಶಕ ಶಿವಮಣಿಯವರ ಕನಸಿನ ಕೂಸು.



ಒಂದೂವರೆ ವರ್ಷಗಳ ಹಿಂದೆ ಈ ಚಿತ್ರ ಆರಂಭವಾದಾಗ ಹೊಸಬರನ್ನು ಪ್ರೇಕ್ಷಕ ತುಂಬು ಹೃದಯದಿಂದ ಸ್ವೀಕರಿಸುತ್ತಿದ್ದ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಈ ಕಾರಣಕ್ಕಾಗಿಯೇ ಈಗ ಈ ಚಿತ್ರದ ಪ್ರಚಾರಕ್ಕಾಗಿ ಶಿವಮಣಿ ಅನೇಕ ತಂತ್ರಗಳಿಗೆ ಶರಣಾಗಿದ್ದಾರೆ.

ಎರಡು ಬಸ್ಸುಗಳನ್ನು ಈಗಾಗಲೇ ರಾಜ್ಯಾದ್ಯಂತ ಪ್ರಸಾರಕ್ಕಾಗಿ ಕಳುಹಿಸಿದ್ದಾರೆ. ಮುಂದಿನವಾರ ನಗರದಲ್ಲಿ 'ಜೋಶ್' ಚಿತ್ರತಂಡದ ಐವತ್ತು ಬೈಕುಗಳು ಸಂಚರಿಸಲಿವೆಯಂತೆ. ಅನಂತರ ಚಿತ್ರದ ಕಲಾವಿದರಿಂದ ಅಲ್ಲಲ್ಲಿ ಯುವಜನರ ಜೊತೆ ಮುಖಾಮುಖಿ ಕಾರ್ಯಕ್ರಮ ನಡೆಯುತ್ತದೆಯಂತೆ. ಒಟ್ಟಾರೆಯಾಗಿ ಹೊಸಬರ ಚಿತ್ರವಾದರೂ ಪ್ರಚಾರಕ್ಕಾಗಿ ಬಾಬು ಹಣ ಸುರಿಯುತ್ತಿದ್ದಾರೆ. ಶಿವಮಣಿ ಮತ್ತು ಸಂತೋಷ್ ಕುಮಾರ್ ರೈ ಪಾತಾಜೆ ಜೋಡಿಯಿರುವುದರಿಂದ ಈ ಚಿತ್ರ ತಾಂತ್ರಿಕವಾಗಿ ಶ್ರೀಮಂತವಾಗಿ ಮೂಡಿಬರುವುದರಲ್ಲಿ ಸಂಶಯವಿಲ್ಲ.

ಹೊಸಬರ ಚಿತ್ರಗಳು ಸೋಲುತ್ತಿರುವ ಈ ಸಂದರ್ಭದಲ್ಲಿ 'ಜೋಶ್' ಚಿತ್ರದ ಫಲಿತಾಂಶಕ್ಕಾಗಿ ಇಡೀ ಗಾಂಧಿನಗರವೇ ಕಾದು ಕುಳಿತಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44